ಸಂಪುಟ: 14 Volume | ಸಂಚಿಕೆ: 38 Issue | ಪುಟಗಳು 08 Pages | ಬುಧವಾರ 13 ಮೇ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

**ಬೆಳಗು**

ಕೆಟ್ಟದ್ದನ್ನು ಮಾಡಲೇಬೇಕೆಂದವನಿಗೆ ಅವಕಾಶದ ಕೊರತೆ ಇರದು.

–ಪಿ.ಸೈರಸ್

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

## 1.65 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

**ಕಲಬುರಗಿ:** ಮಹಿಳೆಯೊಬ್ಬರು ಬಸ್ ಹತ್ತುವ ಸಂದರ್ಭದಲ್ಲಿ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.65 ಲಕ್ಷ ರೂ.ಮೌಲ್ಯದ 33 ಗ್ರಾಂ.ಬಂಗಾರದ ಆಭರಣಗಳು ಕಳವಾಗಿರುವ ಘಟನೆ ನಗರದ ಆಳಂದ ಚೆಕ್‌ಪೋಸ್ಟ್ ಹತ್ತಿರ ನಡೆದಿದೆ. ಕೋಟನೂರ (ಡಿ) ಗ್ರಾಮದ ಕಾಸಿಂಬಿ ರುಕ್ಮುದ್ದಿನ್ ಅವರು ತಮ್ಮ ಅಣ್ಣನ ಮಗಳ ಮದುವೆ ಇದ್ದ ಪ್ರಯುಕ್ತ ಸಾವಳಗಿ (ಬಿ) ಗ್ರಾಮಕ್ಕೆ ಹೋಗಲೆಂದು ಆಳಂದ ಚೆಕ್‌ಪೋಸ್ಟ್ ಹತ್ತಿರ ಬಸ್ ಹತ್ತುವ ವೇಳೆ ಕಳ್ಳರು ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 75 ಸಾವಿರ ರೂ. ಮೌಲ್ಯದ 15 ಗ್ರಾಂ.ಬಂಗಾರದ ನೆಕ್ಲೆಸ್, 50 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಮಂಗಳಸೂತ್ರ, 25 ಸಾವಿರ ರೂ.ಮೌಲ್ಯದ 5 ಗ್ರಾಂ.ಬಂಗಾರದ ಕಿ"ಯೋಲೆ, 15 ಸಾವಿರ ರೂ.ಮೌಲ್ಯದ 3 ಗ್ರಾಂ.ಬಂಗಾರದ 2 ಸಣ್ಣ ಉಂಗುರಗಳು ಸೇರಿ 1.65 ಲಕ್ಷ ರೂ.ಮೌಲ್ಯದ 33 ಗ್ರಾಂ.ಬಂಗಾರದ ಆಭರಣ ಕಳವು ಮಾಡಿದ್ದಾರೆ.

## ಹೋಮಿಯೋಪಥಿಕ್‌ಗೆ ರಾಷ್ಟ್ರಮಟ್ಟದ ಮಾನ್ಯತೆ




**ಬಾಗಲಕೋಟೆ:** ನಗರದ ಬವಿವ ಸಂಘದ ಬಿ.ವ್ಹಿ.ವ್ಹಿ. ಎಸ್. ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲದ ಆಸ್ಪತ್ರೆ ರಾಷ್ಟ್ರೀಯ ಮಟ್ಟದ ಎನ್.ಎ.ಬಿ.ಎಚ್. ಮಾನ್ಯತೆ ಪಡೆದುಕೊಂಡಿದೆ.

ಆಸ್ಪತ್ರೆಯಲ್ಲಿ ನೀಡಲಾಗುವ ವೈದ್ಯಕೀಯ ಸೇವೆಗಳು, ಆಸ್ಪತ್ರೆಯಲ್ಲಿಯ ನೈರ್ಮಲ್ಯ, ವೈದ್ಯ – ರೋಗಿ ಸಮಾಲೋಚನೆ, ನಾನಾ ವೈದ್ಯಕೀಯ ತಪಾಸಣೆಗಳು, ವೈದ್ಯರು ಹಾಗೂ ರೋಗಿಗಳ ಸುರಕ್ಷತಾ ಕ್ರಮಗಳು ಸೇರಿದಂತೆ ವಿವಿಧ ಅಂಶಗಳನ್ನು ಪರಿಶಿಲಿಸಿ, ಭಾರತ ಸರ್ಕಾರದ ರಾಷ್ಟ್ರೀಯ ಗುಣಮಟ್ಟ ನಿಯಂತ್ರಣ ಮಂಡಳಿ ಈ ಮಾನ್ಯತೆ ನೀಡಿದೆ ಎಂದು ಪ್ರಾಂಶುಪಾಲ ಡಾ. ಅರುಣ ಹೂಲಿ ಹಾಗೂ ಪ್ರಾಧ್ಯಾಪಕ – ಮಾಧ್ಯಮ ಪ್ರತಿನಿಧಿ ಡಾ.ರವಿ.ಎಸ್.ಕೋಟೆಣ್ಣವರ ತಿಳಿಸಿದ್ದಾರೆ. ಕೇವಲ 6 ವರ್ಷಗಳಲ್ಲಿ ಎಲ್ಲ ಸಿಬ್ಬಂದಿ ವರ್ಗ ಮಾಡಿದ ಸಾಧನೆಯನ್ನು ಬವಿವ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಆಯುಷ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಶ್ಲಾಘನೆ ಮಾಡಿ ಹರ್ಷ ವ್ಯಕ್ತಪಡಿಸಿದ್ದಾರೆ.

## ಮನೆಯ ಗೋಡೆ ಕುಸಿತ, ಪರಿಶೀಲನೆ



**ಯಾದಗಿರಿ:** ವಡಗೇರಾ ತಾಲೂಕಿನ ತುಮಕೂರ ಗ್ರಾಮದಲ್ಲಿ ಇಂದು ಬೆಳ್ಳಗ್ಗೆ 7 ಗಂಟೆಗೆ ಸಿದ್ದಪ್ಪ ತಂದೆ ಭೀಮಪ್ಪ ಇವರ ಮನೆಯ ಗೋಡೆ ಬಿದ್ದು ಇವರ ಮಕ್ಕಳಾದ ಯಲ್ಲಮ್ಮ ವಯಸ್ಸು 8 ಮೃತ ಹೊಂದಿರುತ್ತಾರೆ, ಸಂಗೀತ ವಯಸ್ಸು 5, ಭೂಮಿಕಾ ವಯಸ್ಸು 3 ಇವರಿಬ್ಬರು ಗಾಯಳುಗಳಾಗಿರುತ್ತಾರೆ, ಈ ಸ್ಥಳಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಅವರು ಸ್ಥಳ ಪರಿಶೀಲನೆ ಮಾಡಲಾಯಿತು.

## ಕೇಸರ್ ಅತ್ಯಂತ ಬೇಡಿಕೆಯ ತಳಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ತೋಟಗಾರಿಕೆ ಇಲಾಖೆ ವತಿಯಿಂದ ಮೇ 12 ರಿಂದ ಮೇ 22ರ ವರೆಗೆ 10 ದಿನಗಳ ಕಾಲ ಕೊಪ್ಪಳ ನಗರದಲ್ಲಿನ ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿ ಆವರಣದಲ್ಲಿ ಆಯೋಜಿಸಲಾದ 10ನೇ ವರ್ಷದ ಮಾವು ಮೇಳಕ್ಕೆ ಮೇ 12ರಂದು ಚಾಲನೆ ಸಿಕ್ಕಿತು. ಈ ಮೇಳವು ಹಲವಾರು ವಿಶೇಷತೆಗಳನ್ನು ಹೊಂದಿದೆ.

ದಶಕದ ಮಾವು ಮೇಳದ ಫಲವಾಗಿ ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ 6500 ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ತಳಿಯ ಮಾವಿನ ಹಣ್ಣಿನ ಬೆಳೆಗಳನ್ನು ಬೆಳೆಯುತ್ತಿದ್ದು ಇವುಗಳಲ್ಲಿ ಮುಖ್ಯವಾಗಿ ಕೇಸರ್ ತಳಿಯು ಅತ್ಯಂತ ಬೇಡಿಕೆಯ ತಳಿಯಾಗಿದೆ ಹಾಗೂ ದಶಹರಿ, ತೋತಾಪೂರಿ,ಮಲ್ಲಿಕಾ,ಬೆನೆಶಾನ್,ಸಿಂಧೂರಿ,ಇಮಾಮ ಪಸಂದ, ಉಪ್ಪಿನಕಾಯಿ ತಳಿಗಳನ್ನು ಬೆಳೆಯತ್ತಿದ್ದು, ರೈತರ ಅನುಕೂಲಕ್ಕಾಗಿ ಹಾಗೂ ಗ್ರಾಹಕರಿಗೆ ಯೋಗ್ಯ



ಬೆಲೆಗೆ ಗುಣಮಟ್ಟದ ಹಣ್ಣುಗಳನ್ನು ಮಾರಾಟ ಮಾಡಲು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸಲು ಈ ಮೇಳವನ್ನು ಆಯೋಜಿಸಲಾಗಿದೆ. ಈ ಮೇಳದಲ್ಲಿ ಕೊಪ್ಪಳದಲ್ಲಿ ರೈತರು ಬೆಳೆದ ಜಗತ್ತಿನ ದುಬಾರಿ ಮಾವು ಮಿಯಾಜಾಕಿ ಮಾವನ್ನು ಮಾರಾಟಕ್ಕೆ ಇಡಲಾಗಿದೆ.

ಈ ಮೇಳದಲ್ಲಿ ಹಿಂದಿನ ಮೇಳಕ್ಕಿಂತಲೂ 100ಕ್ಕೂ ಹೆಚ್ಚಿನ ರೈತರು ಭಾಗವಹಿಸಲು ಪೈಪೋಟಿ ಮೇಲೆ ತಾವು ಬೆಳೆದ ಹಣ್ಣುಗಳನ್ನು ಮಾರಾಟ ಮಾಡಲು ಸ್ಟಾಲ್‌ಗಳನ್ನು ನೊಂದಾಯಿಸಿರುತ್ತಾರೆ. ವರ್ಷದಿಂದ ವರ್ಷಕ್ಕೆ ಸಾರ್ವಜನಿಕರಿಗೆ ನೇರವಾಗಿ ಮಾರಾಟ ಮಾಡಲು ರೈತರು ಹೆಚ್ಚಾಗಿ ಮೇಳದಲ್ಲಿ ಭಾಗವಹಿಸುತ್ತಿದ್ದಾರೆ.

## ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಪಟ್ಟಣದ ಖಾಸಗಿ ಶಿಕ್ಷಣ ಸಂಸ್ಥೆಯೊಂದರ ಆವರಣದಲ್ಲಿರುವ ಕೋಣೆಯೊಂದರಲ್ಲಿ ವ್ಯಕ್ತಿಯೊಬ್ಬ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ಜರುಗಿದೆ.

ತಾಲೂಕಿನ ಕಠಳ್ಳಿ ಗ್ರಾಮದ ಬಸವರಾಜ ಶಿವರಾಜ ಪಾಟೀಲ್(38) ಎನ್ನುವವನೇ ನೇಣಿಗೆ ಶರಣಾಗಿದ್ದಾನೆ.

ಮೃತ ವ್ಯಕ್ತಿಯು ಮದುವೆಯಾಗದೇ ಇರುವುದು, ಕುಡಿತದ ಚಟದಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಕಾರಣ ಎಂದು ಮೃತನ ತಮ್ಮ ಸತೀಷ ನೀಡಿದ ದೂರಿನ ಮೇರೆಗೆ ಹುಮನಾಬಾದ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ



ಚಂದ್ರಕಾಂತ ಪೂಜಾರಿ, ಡಿವೈಎಸ್ ಪಿ ಮಡೋಳಪ್ಪ, ಸಿಪಿಐ ಸಂತೋಷ ತಟ್ಟೆಪಳ್ಳಿ, ಪಿಎಸ್ ಐ ಸುರೇಶಕುಮಾರ ಭೇಟಿ ನೀಡಿದ್ದಾರೆ.

# ಮೋದಿ ವಿರುದ್ಧ ಪ್ರತಿದಾಳಿ

## ಅನಗತ್ಯವಾಗಿ ಚಿನ್ನ ಖರೀದಿಸಬೇಡಿ ಎಂದ ಪ್ರಧಾನಿ ಮಾತಿಗೆ ಪ್ರತಿಪಕ್ಷಗಳಿಂದ ತಿರುಗೇಟು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದೇಶದ ಆರ್ಥಿಕ ಪರಿಸ್ಥಿತಿಯನ್ನು ದೃಷ್ಟಿಯಲ್ಲಿರಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಚಿನ್ನ ಖರೀದಿಸಬೇಡಿ ಎನ್ನುವ ಮಾತು ಇದೀಗ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. ದೇಶದ ವಿದೇಶಿ ವಿನಿಮಯ ಸಂಗ್ರಹವನ್ನು ಉಳಿಸಲು ನಾಗರಿಕರಿಗೆ ಮೋದಿ ಅವರು ಮನವಿ ಮಾಡಿದ್ದರು. ಅನಗತ್ಯ ವಿದೇಶ ಪ್ರವಾಸ, ವಿದೇಶಗಳಲ್ಲಿ ನಡೆಯುವ ಮದುವೆಗಳು ಮತ್ತು ಪ್ರವಾಸಗಳನ್ನು ತಪ್ಪಿಸುವಂತೆ ಮನವಿ ಮಾಡಿದ್ದು ಪ್ರತಿ ಪಕ್ಷಗಳ ಟೀಕೆಗೆ ಕಾರಣವಾಗಿದೆ.

**ಪ್ರತಿ ಪಕ್ಷಗಳಿಗೆ ಆಹಾರ:** ವಿದೇಶಿ ವಿನಿಮಯ ಹೊರಹರಿವಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಒಂದು ವರ್ಷದವರೆಗೆ ಅನಗತ್ಯ ಚಿನ್ನದ ಖರೀದಿಯನ್ನು ತಪ್ಪಿಸುವಂತೆ ಜನರಿಗೆ ಮೋದಿ ವಿನಂತಿಸಿದ್ದರು. ಈ ಹೇಳಿಕೆ ಪ್ರತಿಪಕ್ಷಗಳಿಗೆ ಆಹಾರವಾಗಿದ್ದು, ಕೇಂದ್ರದ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

**ಪ್ರಧಾನಿ ಮೊದಲಿಗರೇನಲ್ಲ:** ದೇಶದ ಆರ್ಥಿಕ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಧಾನಿ ನೀಡಿದ್ದ ಹೇಳಿಕೆ ಪ್ರತಿಯಾಗಿ ಈ ಹಿಂದೆ ಮಾಜಿ ಪ್ರಧಾನಿ ಇಂದಿರಾಗಾಂಧಿ, ವಿತ್ತ ಸಚಿವ ಪಿ ಚಿದಂಬರಂ, ಅಂದಿನ ಸಚಿವ ವೀರಪ್ಪ ಮೊಯ್ಲಿ ನೀಡಿದ್ದ ಹೇಳಿಕೆಗಳೂ ಇದೀಗ ವೈರಲ್ ಆಗುತ್ತಿವೆ.

### ಇಂದಿರಾಗಾಂಧಿ ಹೇಳಿಕೆ..!

ಮಾಜಿ ಪ್ರಧಾನಿ ಇಂದಿರಾಗಾಂಧಿ 1967ರ ಆರ್ಥಿಕ ಸಂಕಷ್ಟದ ಸಮಯದಲ್ಲಿ ಇದೇ ರೀತಿಯ ಮನವಿ ಮಾಡಿದ್ದರು ಎಂಬ ಹೇಳಿಕೆ ವೈರಲ್ ಆಗಿವೆ. ಕರ್ನಾಟಕ ಬಿಜೆಪಿ ವಿಪಕ್ಷ ನಾಯಕ R. Ashoka ಅವರು ಈ ವಿಷಯವನ್ನು ಎಕ್ಸ್ ನಲ್ಲಿ ಪ್ರಸ್ತಾಪಿಸಿದ್ದು, ಪ್ರಧಾನಿ ಮೋದಿ ಅವರ ಇತ್ತೀಚಿನ ಹೇಳಿಕೆಯನ್ನು ಸಮರ್ಥಿಸುವ ಸಂದರ್ಭದಲ್ಲಿ ಇದು ಹೆಚ್ಚು ಚರ್ಚೆಗೆ ಗ್ರಾಸವಾಗಿದೆ.





### ರಾಹುಲ್ ಗಾಂಧಿ ವಾಗ್ದಾಳಿ

ಕಾಂಗ್ರೆಸ್ ಪ್ರಧಾನಿ ಮೋದಿ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ಜನರಿಗೆ ಖರ್ಚು ಕಡಿಮೆ ಮಾಡಲು ಮನವಿ ಮಾಡುವುದು ಆರ್ಥಿಕ ಬಲದ ಸೂಚನೆ ಅಲ್ಲ, ಬದಲಿಗೆ ಸಂಕಷ್ಟದ ಸಂಕೇತ ಎಂದು ಹೇಳಿದೆ. ಈ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಪ್ರಧಾನಿ ಮೋದಿ ವಿರುದ್ಧ ತೀವ್ರ ಟೀಕಾ ಪ್ರಹಾರ ನಡೆಸಿದ್ದಾರೆ.

### ಪ್ರಧಾನಿ ಮೋದಿ ಹೇಳಿದ್ದೆಷ್ಟು ಸರಿ?

ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ಕರೋನಾ ಸಮಯದಲ್ಲಿ ಇಡೀ ದೇಶದ ಜನರನ್ನು ತಪಟೆಬಡೆಯಿರಿ ಅಂತ ಹೇಳಿದ್ರು. ಎಲ್ಲರೂ ಹಾಗೇ ಮಾಡಿದ್ರು. ಆದರೆ ಕರೋನಾ ಹೋಯಿತಾ? ಈಗ ಚಿನ್ನ ಖರೀದಿಸಬೇಡಿ ಎನ್ನುತ್ತಿದ್ದಾರೆ. ಮದುವೆ ಮಾಡೋರು ಖರೀದಿಸದೇ ಇರೋಕೆ ಆಗುತ್ತಾ? ಹೇಳಿದ್ರೆ ಲಾಜಿಕ್ಕಿರಬೇಕು ಎಂದು ಡಿಸಿಎಂ ಡಿಕೆಶಿವಕುಮಾರ್ ದೂರಿದ್ದಾರೆ.





### ಆರ್ ಅಶೋಕ್ ಟ್ವೀಟ್

ಆರ್ ಅಶೋಕ್ ಅವರು ಎಕ್‌ನಲ್ಲಿ, 1967ರಲ್ಲಿ ಇಂದಿರಾಗಾಂಧಿ ಭಾರತೀಯರಿಗೆ ಚಿನ್ನ ಖರೀದಿಸಬೇಡಿ ಎಂದಾಗ ಅದನ್ನು 'ರಾಷ್ಟ್ರೀಯ ಶಿಸ್ತು' ಎಂದರು. 2013ರಲ್ಲಿ ಚಿದಂಬರಂ ಅವರು 'ಚಿನ್ನ ಖರೀದಿಸುವ ಆಕರ್ಷಣೆಗೆ ಒಳಗಾಗಬೇಡಿ' ಎಂದಾಗ ಅದನ್ನು 'ಆರ್ಥಿಕ ಜವಾಬ್ದಾರಿ' ಎಂದರು. ಈಗ ಪ್ರಧಾನಿ ಹೇಳಿದ್ದನ್ನು ಅಪೂರ್ವ ಘಟನೆ ಎಂದು ತೋರಿಸುತ್ತಿದ್ದಾರೆ ಎಂದು ಬರೆದಿದ್ದಾರೆ.



ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಬೆಂಗಳೂರಿನ ನಾನಾ ಅಭಿವೃದ್ಧಿ ಯೋಜನೆ ಕುರಿತು ಬಿಡಿಎ ಕಚೇರಿಯಲ್ಲಿ ಮಂಗಳವಾರ ಪರಿಶೀಲನಾ ಸಭೆ ನಡೆಸಿದರು. ಶಾಸಕ, ಬಿಡಿಎ ಅಧ್ಯಕ್ಷ ಎನ್ ಎ ಹ್ಯಾರಿಸ್, ಮುಖ್ಯ ಆಯುಕ್ತ ಮಣಿವಣ್ಣನ್, ಬೆಂಗಳೂರು ಬಿಸಿನೆಸ್ ಕಾರಿಡಾರ್ (ಬಿಬಿಸಿ) ಪ್ರಾಧಿಕಾರದ ಅಧ್ಯಕ್ಷ ಅತೀಕ್ ಅಹ್ಮದ್, ಡಿಸಿಎಂ ಕಾರ್ಯದರ್ಶಿ ರಾಜೇಂದ್ರ ಚೋಳನ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ರಾಜ್ಯ ವಾಲ್ಮೀಕಿ ಸಮುದಾಯದ ಮುಖಂಡರು ಮತ್ತು ಸ್ವಾಮೀಜಿಗಳ ನಿಯೋಗ ಮಾಜಿ ಲೋಕಸಭಾ ಸದಸ್ಯರಾದ ವಿ.ಎಸ್.ಉಗ್ರಪ್ಪ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣದಲ್ಲಿ ಭೇಟಿಯಾಗಿ ಚರ್ಚೆ ನಡೆಸಿತು.

## ವಾಣಿಜ್ಯ ಸಂಕೀರ್ಣದ ಶಿಲಾನ್ಯಾಸ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ

ನಗರದ ಒಕ್ಕಲಿಗರ ಕಲ್ಯಾಣ ಮಂಟಪ ಸಮೀಪ ನಿರ್ಮಿಸಿರುವ ಶ್ರೀ ಕೆಂಪೇಗೌಡ ವಾಣಿಜ್ಯ ಸಂಕೀರ್ಣ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಮೇ 13ರ ಬುಧವಾರ ನಡೆಯಲಿದೆ ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಎನ್.ಕೇಶವರೆಡ್ಡಿ ತಿಳಿಸಿದ್ದಾರೆ.ಈ ಕುರಿತು ಮಂಗಳವಾರ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಹಾಗೂ ಕಾರ್ಯದರ್ಶಿ ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಕಟ್ಟಡ ಉದ್ಘಾಟನೆ ನೆರವೇರಲಿದೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್,ಸಂಸದ ಡಾ. ಕೆ. ಸುಧಾಕರ್,ಬೀಜ ನಿಗಮದ ಅಧ್ಯಕ್ಷ ಅಂಜನಪ್ಪ,ಮಾಜಿ ಶಾಸಕ ಕೆ.ಪಿ.ಬಚ್ಚೆಗೌಡ,ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ



ಯಲುವಳ್ಳಿ ಎನ್.ರಮೇಶ್,ಕೋನಪ್ಪ ರೆಡ್ಡಿ ಹಾಗೂ ರಮೇಶ್ ಭಾಗವಹಿಸಲಿದ್ದಾರೆ ಪಕ್ಷಾತೀತವಾಗಿ ಎಲ್ಲರೂ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಚನ್ನಕೃಷ್ಣಪ್ಪ ರೆಡ್ಡಿ ಮಾತನಾಡಿ,ಒಕ್ಕಲಿಗರ ಸಂಘಕ್ಕೆ ವಿಶಿಷ್ಟ ಇತಿಹಾಸವಿದೆ.ಸಮುದಾಯದ ಹಿರಿಯರು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಇದೇ ಸ್ಥಳದಲ್ಲಿ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿದ್ದರು.ಪ್ರಸ್ತುತ ಅದು ಬೇರೆ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದೆ.ಸಂಘವು ಕೆಂಪೇಗೌಡ ಕಾನೂನು ಮಹಾವಿದ್ಯಾಲಯ ಮತ್ತು ಒಕ್ಕಲಿಗರ ಕಲ್ಯಾಣ ಮಂಟಪವನ್ನು ಯಶಸ್ವಿಯಾಗಿ ನಡೆಸುತ್ತಿದ್ದು,ಇದೀಗ ವಾಣಿಜ್ಯ ಸಂಕೀರ್ಣವನ್ನು ನಿರ್ಮಿಸಿ ಉದ್ಘಾಟನೆಗೆ ಸಜ್ಜಾಗಿದೆ ಎಂದರು. ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ಹಲವು ಅಡೆತಡೆಗಳು ಎದುರಾದರೂ,ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಅವನ್ನು ಸಮರ್ಥವಾಗಿ ಎದುರಿಸಿ ಸುಮಾರು 7.50 ಕೋಟಿ ರೂ. ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಿ.ಎಂ. ರಾಮಸ್ವಾಮಿ, ಖಜಾಂಚಿ ಬಿ.ಕೆ. ಮಂಜುನಾಥ್,ಒಕ್ಕಲಿಗರ ಕಲ್ಯಾಣ ಮಂಟಪದ ಅಧ್ಯಕ್ಷ ನಾರಾಯಣಸ್ವಾಮಿ, ಕಾರ್ಯದರ್ಶಿ ಬೈರೇಗೌಡ,ವಿದ್ಯಾರ್ಥಿ ನಿಲಯದ ಅಧ್ಯಕ್ಷ ನಾರಾಯಣಸ್ವಾಮಿ,ರಾಜಣ್ಣ, ಧನಂಜಯ ಗಿರೀಶ್ ಹರಿಸ್ಥಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜೆಸ್ಕಾಂ ಇಲಾಖೆ ಅಧಿಕಾರಿಗಳ ಅಂಧ ದರ್ಬಾರ್

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಹುಮನಾಬಾದ್ ನಗರ ಹಾಗೂ ತಾಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅನಿಯಮಿತ ಲೋಡ್ ಶೆಡ್ಡಿಂಗ್, ಪದೇ ಪದೇ ವಿದ್ಯುತ್ ವ್ಯತ್ಯಯ, ಕರೆ ಮಾಡಿದರೂ ಸ್ಪಂದಿಸದ ಅಧಿಕಾರಿಗಳು ಹಾಗೂ ಜನರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವ ವಿದ್ಯುತ್ ಇಲಾಖೆಯ ನಡೆ ಜನರಿಗೆ ಬೇಸರ ಉಂಟುಮಾಡಿದೆ.

ಬೇಸಿಗೆಯ ತಾಪಮಾನ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ವಿದ್ಯುತ್ ಸಮಸ್ಯೆಯಿಂದ ಸಾರ್ವಜನಿಕರು,ವ್ಯಾಪಾರಸ್ಥರು,ರೈತರು ಹಾಗೂ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ವಿಶೇಷವಾಗಿ ರಾತ್ರಿ ಸಮಯದಲ್ಲಿ ಗಂಟೆಗಟ್ಟಲೆ ವಿದ್ಯುತ್ ಕಡಿತವಾಗುತ್ತಿರುವುದರಿಂದ ಜನರ ನಿದ್ದೆ ಹಾಳಾಗುತ್ತಿದೆ. ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯ ಮೇಲೂ ಪರಿಣಾಮ ಬಿದ್ದಿದೆ ಎಂದು ನಾಗರಿಕರು ಆರೋಪಿಸಿದ್ದಾರೆ.



ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಯಾವುದೇ ಶಾಶ್ವತ ಪರಿಹಾರ ಸಿಗುತ್ತಿಲ್ಲ ಎಂಬ ಅಸಮಾಧಾನ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. "ವಿದ್ಯುತ್ ಇಲಾಖೆಯ ಕೆಲ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸುವ ಬದಲು ತಮ್ಮದೇ ದರ್ಬಾರ್ ನಡೆಸುತ್ತಿದ್ದಾರೆ" ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಬೀದರ್ ಜಿಲ್ಲೆಗೆ ಇಬ್ಬರು ಸಚಿವರಿದ್ದರೂ ಹುಮನಾಬಾದ್ ಭಾಗದ ಮೂಲಭೂತ ಸಮಸ್ಯೆಗಳ ಬಗ್ಗೆ ಗಂಭೀರ ಗಮನ ಹರಿಸಲಾಗುತ್ತಿಲ್ಲ ಎಂಬ ಟೀಕೆಗಳು ಕೇಳಿಬರುತ್ತಿವೆ. ಜನರ



ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ನಗರದ ಹಲವು ಭಾಗಗಳಲ್ಲಿ ಹಳೆಯ ಟ್ರಾನ್ಸ್‌ಫಾರ್ಮರ್‌ಗಳು,ಜೀರ್ಣಗೊಂಡ ವಿದ್ಯುತ್ ತಂತಿಗಳು ಹಾಗೂ ತಾಂತ್ರಿಕ ದೋಷಗಳಿಂದ ಸಮಸ್ಯೆಗಳು ಉಂಟಾಗುತ್ತಿವೆ ಎಂದು ತಿಳಿದುಬಂದಿದೆ. ಆದ್ದರಿಂದ ತುರ್ತು ದುರಸ್ತಿ ಕಾರ್ಯ ಕೈಗೊಂಡು,ವಿದ್ಯುತ್ ಇಲಾಖೆಯ ಕಾರ್ಯವೈಖರಿಯನ್ನು ಪರಿಶೀಲಿಸುವಂತೆ ನಾಗರಿಕರು ಒತ್ತಾಯಿಸಿದ್ದಾರೆ.

**ಸೇವೆ ಮತ್ತು ಆಧ್ಯಾತ್ಮಿಕತೆಯ ಹೆಮ್ಮರ 'ಆರ್ಟ್ ಆಫ್ ಲಿವಿಂಗ್': ನರೇಂದ್ರ ಮೋದಿ, ಪ್ರಧಾನಿ**

## ರೈತರ ಮೇಲಿನ ಸಾಲಗಳನ್ನು ಮನ್ನಾ ಮಾಡಲಿ

ದೇಶದ ಬೆನ್ನೆಲುಬು ರೈತ. ರೈತರು ದುಡಿದರೆ ಮಾತ್ರ ದೇಶದ ಜನರಿಗೆ ಅನ್ನ ಸಿಗುತ್ತದೆ. ಆದರೆ ಇಂದು ರೈತ ಸಮುದಾಯ ಸಂಕಷ್ಟದ ಸುಳಿಯಲ್ಲಿ ಸಿಲುಕಿಕೊಂಡಿದೆ. ಅಕಾಲಿಕ ಮಳೆ, ಬರ, ಬೆಳೆ ನಾಶ, ಮಾರುಕಟ್ಟೆಯಲ್ಲಿ ಬೆಲೆ ಕುಸಿತ, ರಸಗೊಬ್ಬರ ಹಾಗೂ ಬೀಜಗಳ ಬೆಲೆ ಏರಿಕೆ ಸೇರಿದಂತೆ ಅನೇಕ ಸಮಸ್ಯೆಗಳ ನಡುವೆ ರೈತರು ಜೀವನ ಸಾಗಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರು ಬ್ಯಾಂಕ್ ಹಾಗೂ ಖಾಸಗಿ ಸಾಲದ ಬಾಧೆಯಿಂದ ಆತ್ಮವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ರಾಜ್ಯದಲ್ಲಿ ಸಾವಿರಾರು ರೈತರು ಕೃಷಿಗಾಗಿ ಸಾಲ ಪಡೆದು ಬೆಳೆ ಬೆಳೆದರೂ ಸಮರ್ಪಕ ಆದಾಯ ಸಿಗದೆ ಸಾಲ ತೀರಿಸಲು ಸಾಧ್ಯವಾಗುತ್ತಿಲ್ಲ. ಬ್ಯಾಂಕುಗಳ ನೋಟಿಸ್, ಬಡ್ಡಿದರಗಳ ಹೆಚ್ಚಳ ಹಾಗೂ ಖಾಸಗಿ ಸಾಲಗಾರರ ಕಿರುಕುಳದಿಂದ ಅನೇಕ ರೈತ ಕುಟುಂಬಗಳು ಮಾನಸಿಕ ಒತ್ತಡಕ್ಕೆ ಒಳಗಾಗಿವೆ. ಕೆಲವರು ಆತ್ಮಹತ್ಯೆಯಂತಹ ದುರ್ಘಟನೆಗಳಿಗೂ ತುತ್ತಾಗುತ್ತಿದ್ದಾರೆ. ಇದು ಅತ್ಯಂತ ನೋವಿನ ಸಂಗತಿ.

ಸರಕಾರಗಳು ರೈತರ ಸಮಸ್ಯೆಗಳನ್ನು ಕೇವಲ ಚುನಾವಣಾ ಭರವಸೆಗಳ ಮಟ್ಟಕ್ಕೆ ಸೀಮಿತಗೊಳಿಸಬಾರದು. ರೈತರ ಹಿತಕ್ಕಾಗಿ ಶಾಶ್ವತ ಯೋಜನೆಗಳನ್ನು ಜಾರಿಗೆ ತರಬೇಕು. ತಕ್ಷಣ ರಾಜ್ಯದಲ್ಲಿರುವ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡುವ ಮೂಲಕ ಅವರಿಗೆ ಆರ್ಥಿಕ ನೆಮ್ಮದಿ ನೀಡಬೇಕು. ಸಾಲಮನ್ನಾ ಮಾಡಿದರೆ ರೈತರಿಗೆ ಹೊಸ ಉತ್ಸಾಹ ದೊರೆಯುತ್ತದೆ. ಮತ್ತೆ ಕೃಷಿಯತ್ತ ಆಸಕ್ತಿ ಹೆಚ್ಚುತ್ತದೆ. ಇದಕ್ಕೂ ಜೊತೆಗೆ ಬೆಳೆ ವಿಮೆ, ಬೆಂಬಲ ಬೆಲೆ, ನೀರಾವರಿ ಯೋಜನೆ, ಉಚಿತ ಅಥವಾ ಸಬ್ಸಿಡಿ ವಿದ್ಯುತ್, ಗುಣಮಟ್ಟದ ಬೀಜ ಹಾಗೂ ರಸಗೊಬ್ಬರ ವಿತರಣೆ ವ್ಯವಸ್ಥೆಗಳನ್ನು ಬಲಪಡಿಸಬೇಕು. ರೈತರಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸಬೇಕು.

ರೈತ ಉಳಿದರೆ ದೇಶ ಉಳಿಯುತ್ತದೆ ಎಂಬ ಮಾತು ನಿಜ. ಆದ್ದರಿಂದ ರಾಜ್ಯ ಸರಕಾರ ರೈತರ ನೋವನ್ನು ಅರ್ಥ ಮಾಡಿಕೊಂಡು ತಕ್ಷಣ ಸಾಲಮನ್ನಾ ಘೋಷಣೆ ಮಾಡುವ ಮೂಲಕ ಅನ್ನದಾತರ ಬದುಕಿಗೆ ಹೊಸ ಆಶಾಕಿರಣ ನೀಡಬೇಕು.

## ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕಲಬುರಗಿ:** ಜಿಲ್ಲೆಯ ಆಳಂದ ಪಟ್ಟಣದಲ್ಲಿ ಹೊಸದಾಗಿ ಪ್ರಾರಂಭಿಸಲಾದ ಆಳಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಸಕ್ತ 2026–27ನೇ ಶೈಕ್ಷಣಿಕ ಸಾಲಿಗಾಗಿ ಪ್ರಥಮ ವರ್ಷದ ಡಿಪ್ಲೋಮಾ ವಿವಿಧ ಕೋರ್ಸಗಳಿಗಾಗಿ ಪ್ರವೇಶಾತಿಯನ್ನು "ಆಫ್–ಲೈನ್" ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಆಳಂದ ಸರಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಆರ್ಟಿಫಿಶಿಯಲ್ ಇಂಟಲಿಜೆನ್ಸ್ & ಮಶೀನ್ ಲರ್ನಿಂಗ್, ಸಿವಿಲ್ ಇಂಜಿನೀಯರಿಂಗ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನೀಯರಿಂಗ್ ಹಾಗೂ ಮೆಕ್ಯಾನಿಕಲ್ ಇಂಜಿನೀಯರಿಂಗ್ ಕೋರ್ಸು ಇಲ್ಲಿ ಲಭ್ಯವಿದ್ದು, ಪ್ರತಿ ಕೋರ್ಸಿಗೆ ತಲಾ 60 ಸಂಖ್ಯೆ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಇದೆ. ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಪ್ರವೇಶ ಬಯಸುವ ಅಭ್ಯರ್ಥಿಗಳು ಇದೇ ಮೇ 30ರ ಒಳಗಾಗಿ ಕಾಲೇಜಿಗೆ ಖುದ್ದಾಗಿ ಹಾಜರಾಗಿ ಅರ್ಜಿಗಳನ್ನು ಭರ್ತಿ ಮಾಡಿ ಪ್ರವೇಶ ಪಡೆಯಬಹುದಾಗಿದೆ.

ಪ್ರವೇಶದ ಅರ್ಜಿ ನಮೂನೆ ಹಾಗೂ ಮಾಹಿತಿ ಪುಸ್ತಕವನ್ನು ಕಾಲೇಜು ಮತ್ತು ತಾಂತ್ರಿಕಕ್ಷಣ ಇಲಾಖೆಯ ಅಂತರ್ಜಾಲ ವಿಳಾಸ dtek.karnataka.gov.in ಅಥವಾ dtetech.karnataka.gov.in/kartechnical ನಿಂದ ಡೌನ್‌ಲೋಡ್ ಮಾಡಿಕೊಂಡು ಪುಸ್ತಕದಲ್ಲಿನ ಸೂಚನೆಗಳನ್ವಯ ಅಭ್ಯರ್ಥಿಗಳು ಅರ್ಜಿಗಳನ್ನು ಭರ್ತಿ ಮಾಡಬೇಕದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಳಂದ ಸರಕಾರಿ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರ ಮೊಬೈಲ್ ಸಂ. 7760309348 ಗೆ ಸಂಪರ್ಕಿಸಲು ಕೋರಲಾಗಿದೆ.

## ದಂಡದ ಹಣ ಪಾವತಿಸದೇ ಕಾರಾಗೃಹದಲ್ಲಿಯೇ ಉಳಿದ ಬಂದಿಗೆ ಹಣ ಪಾವತಿಸಿ ಸಹಕಾರ



**ಕಲಬುರಗಿ:** ಇಂದು ದಿನಾಂಕ: 12–05–2026 ರಂದು ಕೇಂದ್ರ ಕಾರಾಗೃಹದ ಶಿಕ್ಷಾ ಬಂದಿ ಸಂಖ್ಯೆ: 1338 ರಮೇಶ್ ತಂದೆ ಶಿವರಾಯ ಕಲಗೂರ್ತಿ ಈತನು ದಂಡದ ಹಣ ಕಟ್ಟಲು ಆರ್ಥಿಕವಾಗಿ ದುರ್ಬಲರಾದ ಕಾರಣ ಹಣ ಹೊಂದಿಸಲು ಸಾಧ್ಯವಾಗಿರುವುದಿಲ್ಲ. ಇದನ್ನು ಈ ಸಂಸ್ಥೆಯ ಪ್ರಭಾರಿ ಮುಖ್ಯ ಅಧೀಕ್ಷಕರಾದ ಶ್ರೀ ರಾಕೇಶ್ ಕಾಂಬಳೆ ರವರು ಗಮನಿಸಿ ಸ್ಥಳೀಯ ಸಂಸ್ಥೆಗಳಾದ ಜಮೀಯತ್ ಉಲಮಾ ಸೊಸೈಟಿ ಕಲಬುರಗಿ ಸಂಸ್ಥೆಯವರನ್ನು ಸಂಪರ್ಕಿಸಿ ಸದರಿ ಬಂದಿಯಾದ ಶಿಕ್ಷಾ ಬಂದಿ ಸಂಖ್ಯೆ: 1338 ರಮೇಶ್ ತಂದೆ ಶಿವರಾಯ ಕಲಗೂರ್ತಿ ಈತನ ದಂಡ ಮೊತ್ತ ರೂ. 18,000.00, ಮೊತ್ತವನ್ನು ಈ ಮುಂದೆ ತಿಳಿಸಿದ ಜಮೀಯತ್ ಉಲಮಾ ಸೊಸೈಟಿ ಕಲಬುರಗಿ ಇವರುಗಳು ಸದರಿ ಮೊತ್ತವನ್ನು ಪಾವತಿಸಲು ಕೋರಲಾಗಿತ್ತು. ಅದರಂತೆ ಅವರುಗಳು ಆರ್ಥಿಕವಾಗಿ ದುರ್ಬಲರಾದ ಬಂದಿಗಳ ದಂಡದ ಹಣ ಪಾವತಿಸಿ ಸಹಕರಿಸಿ ಮಾನವೀಯತೆಯನ್ನು ಎತ್ತಿ ತೋರಿಸಿ ಇನ್ನೋಬ್ಬರಿಗೆ ಮಾದರಿಯಾಗುವ ರೀತಿಯಲ್ಲಿ ಕೆಲಸವನ್ನು ಮಾಡಿದಕ್ಕಾಗಿ ಈ ಸಂಸ್ಥೆಯ ಪ್ರಭಾರಿ ಮುಖ್ಯ ಅಧೀಕ್ಷಕರಾದ ಶ್ರೀ ರಾಕೇಶ್ ಕಾಂಬಳೆ ರವರು ಇಲಾಖೆಯ ವತಿಯಿಂದ ಅವರಿಗೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸಿದರು. ಹಣ ಪಾವತಿಸುವ ಸಂದರ್ಭದಲ್ಲಿ ಜಮೀಯತ್ ಉಲಮಾ ಸೊಸೈಟಿ ಕಲಬುರಗಿ ವತಿಯಿಂದ ಶ್ರೀ ಮಹ್ಮದ್ ಶರೀಫ್ ತಂದೆ ಮಹ್ಮದ್ ಇಸ್ಮಾಯಿಲ್, ಶ್ರೀ ಮಹ್ಮದ್ ವಾಜೀದ್ ತಂದೆ ಇಮಾಮ್ ಪಟೇಲ್, ಶ್ರೀ ಸಯ್ಯಾದ್ ಸಾಧೀಕ್ ತಂದೆ ಸಯ್ಯಾದ್ ಅಬ್ದುಲ್ ರಶೀದ್, ಶ್ರೀ ಜಾಕಿಯೊದ್ದೀನ್ ತಂದೆ ನಸಿರೂದ್ದೀನ್ ಈ ಸಂಸ್ಥೆಯ ಜೈಲರ್‌ಗಳಾದ ಶ್ರೀ ಸಾಗರ ಪಾಟೀಲ್, ಶ್ರೀ ಶ್ರೀಮಂತಗೌಡ ಪಾಟೀಲ್, ಸಂಸ್ಥೆಯ ಮುಖ್ಯ ವೀಕ್ಷಕರಾದ ಶ್ರೀ ಸಲೀಂ ಮುಲ್ಲಾ ಹಾಗೂ ಸಂಸ್ಥೆಯ ಶಿಕ್ಷಕರಾದ ಶ್ರೀ ನಾಗರಾಜ ಮೂಲಗೆ ಇವರು ಭಾಗವಹಿಸಿದರು.

# ಬಸವಾದಿ ಶರಣರ ಜಾಗೃತಿ ಸಮಾವೇಶ ಮೇ 15ರಂದು

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಈ ತಿಂಗಳ 15ರಂದು ಯಾದಗಿರಿ ಜಿಲ್ಲೆಯ ಶಹಾಪುರ ಪಟ್ಟಣದಲ್ಲಿ ಸಾಯಂಕಾಲ 5 ಗಂಟೆಗೆ ಬಸವಾದಿ ಶರಣರ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿಯ ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷರಾದ ಆರ್.ಜಿ ಶಟಕಾರ ಹೇಳಿದರು.

ಮಂಗಳವಾರ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಅಂದು ಅಲ್ಲಿಯ ಸಿ ಪಿ ಎಸ್ ಮೈದಾನದಿಂದ ವಚನ ಗಾಯನದೊಂದಿಗೆ ಮೆರವಣಿಗೆ ಹೊರಟು, 5 ಗಂಟೆಗೆ ಹಳೆ ಬಸ್ ನಿಲ್ದಾಣದ ಎದುರಿರುವ ಶಾಲಾ ಮೈದಾನದಲ್ಲಿ ಸಮಾವೇಶ ಜರುಗಲಿದೆ. ಜಾಗತಿಕ ಲಿಂಗಾಯತ ಮಹಾಸಭಾ, ಸೌಹಾರ್ದ ಕರ್ನಾಟಕ, ಬಸವಪರ ಸಂಘಟನೆಗಳ ಒಕ್ಕೂಟ, ದಲಿತಪರ ಸಂಘಟನೆಗಳು, ಕಾಯಕ ಜೀವಿಗಳ ಒಕ್ಕೂಟ, ರೈತ, ಮಹಿಳಾ, ವಿದ್ಯಾರ್ಥಿ, ಕಾರ್ಮಿಕ ಸಂಘಟನೆಗಳು ಸೇರಿ ಈ ಕಾರ್ಯಕ್ರಮ ಆಯೋಜಿಸುತ್ತಿದ್ದು, ಕಲ್ಯಾಣ ಕರ್ನಾಟಕದ ಬೀದರ, ಯಡ್ರಾಮಿ, ಶಾಬಾದ, ಜೇವರ್ಗಿ, ಭಾಲ್ಕಿ, ಕಮಲಾಪೂರ ಮುಂತಾದೆಡೆಯಿಂದ ಬಸವಾಭಿಮಾನಿಗಳು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮಾರಂಭವನ್ನು ಉದ್ದೇಶಿಸಿ ನಾಡಿನ ಬಸವಪರ ಮಠಾಧೀಶರು, ವಿಚಾರವಾದಿಗಳು ಮಾತನಾಡಲಿದ್ದಾರೆ. ಶರಣ ತತ್ವಗಳ ಕುರಿತು ಜಾಗೃತಿ ಮೂಡಿಸುವುದು ಹಾಗೂ ವೈದಿಕರ ಮುಖವಾಡ ಕಳಚುವುದೇ ಸಮಾರಂಭದ ಉದ್ದೇಶವಾಗಿದೆ ಎಂದರು.



ಶಹಾಪುರದಲ್ಲಿ ಬಸವಾದಿ ಶರಣರ ಹಿಂದೂ ಸಮಾವೇಶ ಎಂಬ ಕೋಮುವಾದಿ ಕಾರ್ಯಕ್ರಮ ನಡೆಸುತ್ತಿರುವುದು ಖಂಡನೀಯವಾಗಿದೆ. ಯಾ–ಕೆಂದರೆ ಅದು ಬಸವಾದಿ ಶರಣರ ದ್ರೋಹಿ ಕಾರ್ಯಕ್ರಮವಾಗಿದೆ. ಶರಣರನ್ನು ಕೋಮುವಾದಿ ವೃತ್ತದೊಳಗೆ ತೆಗೆದುಕೊಳ್ಳಲು ಹವಣಿಸುತ್ತಿರುವ ದುಷ್ಟ ಯೋಜನೆಯಾಗಿದೆ. 900 ವರ್ಷಗಳ ಹಿಂದೆಯೇ ವೈದಿಕ ಪ್ರಣಿತ ಮೂಲಗಳಾಗಿದ್ದ ವೇದ ಆಗಮ ಪುರಾಣ ಇತ್ಯಾದಿಗಳನ್ನು ಖಂಡಿಸಿ ಬಹುದೊಡ್ಡ ತಾತ್ವಿಕ ಆಂದೋಲನವನ್ನು ಕೈಗೊಂಡಿದ್ದ ಶರಣರಿಗೆ ಈಗ ಮತ್ತೆ ವೈದಿಕರ ಉರುಳನ್ನು ಅವರ ಕೊರಳಿಗೆ ಹಾಕಲು ಹೆಣಗುತ್ತಿರುವದು ಅತ್ಯಂತ ಹೇಯ ಕಾರ್ಯವಾಗಿದೆ ಎಂದರು.

ಸೌಹಾರ್ದ ಕರ್ನಾಟಕದ ಡಾ.ಮೀನಾಕ್ಷಿ ಬಾಳಿ ಮಾತನಾಡಿ, ಯಾರಾದರೂ ಹಿಂದೂ ಸಮಾವೇಶ ಮಾಡಲು ಅವರಿಗೆ ಅವರದೇ ಆದ ಹಕ್ಕುಗಳಿವೆ. ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಬಸವಾದಿ ಶರಣರ ಆಶಯಗಳನ್ನು ಎತ್ತಿ ಹಿಡಿಯುತ್ತ ಯಾರಾದರೂ ಬಸವಾದಿ ಶರಣರ ಸಮಾವೇಶವೂ ಮಾಡಬಹುದು. ಆದರೆ ವೈದಿಕ ವಿರೋಧಿ ಬಸವಾದಿ ಶರಣರ ಮುಖಕ್ಕೆ ಹಿಂದುತ್ವದ ಕೆಸರು, ಮಸಿ ಬಳಿಯುವ ಕಾರ್ಯಕ್ರಮ ಮಾಡುವುದು ಸಲ್ಲದು. ಹಿಂದೂತ್ವ ಅಂದರೆ ಮನುವಾದಿ ವಿಚಾರಧಾರೆ. ಈ ಕಕ್ಷೆಯೊಳಗೆ ಶರಣರನ್ನು ಸೇರಿಸುವುದು ಅವರಿಗೆ ಮಾಡುವ ಅಪಚಾರವಾಗುತ್ತದೆ ಎಂದು ಹೇಳಿದರು.

ಸಕಲ ಜೀವಾತ್ಮರಿಗೆ ಲೇಸು ಬಯಸಿದ ಶರಣರಿಗೂ ದಲಿತರನ್ನು, ಶೂದ್ರರನ್ನು, ಮಹಿಳೆಯರನ್ನು ಹೊರಗಿಟ್ಟು ಅವರಿಗೆ ದೇವರನ್ನು ಪೂಜಿಸುವ ಹಕ್ಕಿಲ್ಲ ಎಂದು ಹೇಳುವ ಚಾತುರ್ವರ್ಣ ವ್ಯವಸ್ಥೆಗೂ ಎತ್ತಣ ಸಂಬಂಧ. ಬಸವ ತತ್ವವನ್ನು ಅಪವ್ಯಾಖ್ಯಾನಕ್ಕೆ ಒಳಪಡಿಸಿ ದಿಕ್ಕು ತಪ್ಪಿಸಲು ಹೊರಟರೆ ನಾವು ಜೀವದ ಹಂಗು ತೊರೆದು ವಿರೋಧಿಸುತ್ತೇವೆ. ನಮ್ಮ ನಾಡಿನ ಹೆಮ್ಮೆಯ ಸಾಂಸ್ಕೃತಿಕ ನಾಯಕನಾಗಿರುವ ಬಸವಣ್ಣನವರನ್ನು ಉಳಿಸಿಕೊಳ್ಳಲು ಬೃಹತ್ ಆಂದೋಲನ ಕಟ್ಟಲಿದ್ದೇವೆ. ಈವರೆಗೆ ತಪ್ಪಿಯೂ ಬಸವಾದಿ ಶರಣರ ಕುರಿತು ಚಕಾರವೆತ್ತದ ಸನಾತನಿಗಳಿಗೆ ಈಗ ಇದ್ದಕ್ಕಿದ್ದಂತೆ ಶರಣರ ಮೇಲೆ ಪ್ರೀತಿ ಉಕ್ಕುತ್ತಿರುವುದೇಕೆ ಎಂಬ ಕಪಟತೆಯನ್ನು ಅರಿಯದಷ್ಟು ಬಸವ ಚಿಂತಕರು ಅಮಾಯಕರಲ್ಲ. ವೈದಿಕ ಕೋಮುವಾದಿಗಳ ಕಪಟ ಕುತಂತ್ರವನ್ನು ತಿಳಿಸಿ ಹೇಳಲು ನಾವು 15ರಂದು ಬಸವಾದಿ ಶರಣರ ಜಾಗೃತಿ ಸಮಾವೇಶ ಹಮ್ಮಿಕೊಂಡಿದ್ದೇವೆ ಎಂದರು.

ಜಾಗತಿಕ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳಾದ ರವೀಂದ್ರ ಶಾಬಾದಿ, ವಚನ ಸಮೂಹ ಸಂಸ್ಥೆಯ ಅಧ್ಯಕ್ಷ ಅಲ್ಲಮಪ್ರಭು ನಾವದಗೇರಿ ಹಾಗೂ ಜನವಾದಿ ಮಹಿಳಾ ಸಂಘಟನೆ ಜಿಲ್ಲಾಧ್ಯಕ್ಷೆ ರೇಷ್ಮಾ ಕುಂದನ್ ಮಾತನಾಡಿದರು.

ಮಹಾಸಭಾದ ಪದಾಧಿಕಾರಿಗಳಾದ ಶಾಂತಪ್ಪ ಪಾಟೀಲ, ಹಣಮಂತರಾಯ ಪಾಟೀಲ, ಹೋರಾಟಗಾರರಾದ ಆರ್.ಪಿ.ರಾಜಾ, ಗೌಸೊದ್ದಿನ್, ಡಿ.ವಾಯ್.ಎಫ್.ವಾಯ್ ಸತೀಶ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

## ಏಕ್ ಸಂಗೀತ ಕಿ ಸುನೇರಿ ಶಾಮ್–ಆಶಾ ಭೋಸ್ಲೆ ಜೀ ಕೆ ನಾಮ್

• ಮಲ್ಲಮ್ಮ ನುಡಿ ವಾರ್ತೆ ಬೀದರ

ನಗರದಲ್ಲಿ 13 ಮೆ. ರಂದು ಡಾ. ಚೆನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಸಂಜೆ 5:30 ಗಂಟೆಗೆ ಆಶಾ ಭೋಸ್ಲೆ ಜೀ ಅವರ ಶೃದ್ಧಾಂಜಲಿ ನಿಮಿತ್ಯ ಸಂಗೀತಾಭಿಮಾನಿಗಳಿಗಾಗಿ ವಿಶೇಷವಾಗಿ "ಏಕ್ ಸಂಗೀತ ಕಿ ಸುನೇರಿ ಶಾಮ್–ಆಶಾ ಭೋಸ್ಲೆ ಜೀ ಕೆ ನಾಮ್" ಎಂಬ ಭವ್ಯ ಸಂಗೀತ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಖ್ಯಾತ ಗಾಯಕ ಹಾಗೂ ಆಯೋಜಕರಾದ ಬಿರುಸಿಂಗ್ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ.



ಕಾರ್ಯಕ್ರಮವನ್ನು ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ ಅವರು ಉದ್ಘಾಟಿಸಲಿದ್ದು, ಸೋನಿ–9 ಸಂಪಾದಕರಾದ ದೇವಿಂದ್ರ ಆರ್.ಸೋನಿ ಗೌರವಾಧ್ಯಕ್ಷತೆ ವಹಿಸಲಿದ್ದಾರೆ. ದಲಿತ ಮುಖಂಡರಾದ ಡಾ. ಕಾಶಿನಾಥ ಚಲವಾ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ರಾಜ್ಯ ತೆಲಂಗಾಣಾದ ಹೈದ್ರಾಬಾದ, ಮಹಾರಾಷ್ಟ್ರ, ಕರ್ನಾಟಕದ ಕಲಬುರಗಿ ಹಾಗೂ ರಾಯಚೂರದಿಂದ ಸಂಗೀತ ಕಲಾವಿಧರು ಆಗಮಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ವಿದ್ಯಾಸಾಗರ ಶಿಂದೆ. ನಗರ ಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಪ್ರಶಾಂತ ದೊಡ್ಡಿ, ನಗರ ಸಭೆ ಸದಸ್ಯರಾದ ದಿಗಂಬರ ಮಡಿವಾಳ ಹಾಗೂ ನವಾಜಖಾನ್, ದಲಿತ ಮುಖಂಡರಾದ ಮಾರುತಿ ಬೌದ್ಧೆ, ಸಮಾಜ ಕಲ್ಯಾಣ ಇಲಾಖೆ ಹುಮನಾಬಾದದ ಸಹಾಯಕ ನಿರ್ದೇಶಕರಾದ ಡಾ. ಲಿಂಗರಾಜ ಅರಸ, ವಿದ್ಯಾಪೀಠ ಪಾಠಶಾಲೆಯ ಅಧ್ಯಕ್ಷರಾದ ಶಂಭುಲಿಂಗ ಕುದ–ರೆ, ಡಾ॥ ಶೇಶಿ ಪಾಟೀಲ ಚೌಳಿ, ಇ.ಎನ್.ಟಿ ತಜ್ಞರಾದ ಡಾ॥ ನಾಗರಾಜ ಭಾಗವಹಿಸಲಿದ್ದಾರೆ ಎಂದು ಆಯೋಜಕರಾದ ಬಿರುಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀಟ್ ಪರೀಕ್ಷೆ ರದ್ದು: ನಾಚಿಕೆ ಗೇಡು ಸಂಗತಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪರೀಕ್ಷೆ ಅಕ್ರಮದ ಆರೋಪದ ಹಿನ್ನೆಲೆಯಲ್ಲಿ ನೀಟ್ ಯುಜಿ 2026 ಪರೀಕ್ಷೆಯನ್ನು ರದ್ದುಪಡಿಸಿರುವುದು ದೇಶದ ಶಿಕ್ಷಣ ವ್ಯವಸ್ಥೆಗೆ ಅತ್ಯಂತ ನಾಚಿಕೆಗೇಡು ಸಂಗತಿ ಎಂದು ಶಿಕ್ಷಣ ತಜ್ಞರೂ ಆದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಪ್ರತಿಕ್ರಿಯಿಸಿದ್ದಾರೆ.



ಪರೀಕ್ಷೆ ರದ್ದುಪಡಿಸಿ ಮರು ಪರೀಕ್ಷೆ ಘೋಷಿಸಿರುವುದು ಲ್ಷವಿಡೀ ಪರಿಶ್ರಮ ಪಟ್ಟು ಸಿದ್ಧತೆ ನಡೆಸಿದ್ದ ಲಕ್ಷಾಂತರ ವಿದ್ಯರ್ಥಿಗಳು ಹಾಗೂ ಪೋಷಕರಲ್ಲಿ ತೀವ್ರ ನಿರಾಶೆ, ಅನಿಶ್ಚಿತತೆ ಹಾಗೂ ಮಾನಸಿಕ ಒತ್ತಡ ಉಂಟು ಮಾಡಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ನಡೆದಿರುವ ಘಟನೆ ಅತ್ಯಂತ ದುರದೃಷ್ಟಕರವಾಗಿದೆ. ಇದು, ಪ್ರಾಮಾಣಿಕ ವಿದ್ಯರ್ಥಿಗಳ ಕನಸುಗಳನ್ನು ಭಗ್ನಗೊಳಿಸಿದೆ ಎಂದು ಹೇಳಿದ್ದಾರೆ. ವಿದ್ಯರ್ಥಿಗಳ ಭವಿಷ್ಯದ ಜತೆ ಯಾರೂ ಚೆಲ್ಲಾಟ ಆಡಬಾರದು. ಪ್ರಕರಣಕ್ಕೆ ಕಾರಣರಾದವರ ವಿರುದ್ಧ ಕ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂಕಷ್ಟದ ಸಮಯದಲ್ಲಿ ವಿದ್ಯರ್ಥಿಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹವು ದೇಶದಾದ್ಯಂತ ಇರುವ ತನ್ನ ಎಲ್ಲ ಕೇಂದ್ರಗಳ ಹಾಗೂ ಆನ್‌ಲೈನ್ ವೇದಿಕೆಗಳ ಮೂಲಕ ನೀಟ್ ಮರು ಪರೀಕ್ಷೆ ತಯಾರಿಗೆ ಉಚಿತ ನೆರವು ನೀಡುವ ಘೋಷಣೆ ಮಾಡಿದೆ. ಉಚಿತ ಸಹಾಯ ಪುನರಾರ್ತನೆ ತರಗತಿಗಳು, ಸಂದೇಹ ನಿವಾರಣಾ ತರಗತಿಗಳು, ಪರಿಣಿತ ನೀಟ್ ಅಧ್ಯಾಪಕರಿಂದ ಮೆಂಟರಿಂಗ್ ಒಳಗೊಂಡಿದೆ.

ನೀಟ್ ಮರು ಪರೀಕ್ಷೆ ತಯಾರಿಗೆ ಉಚಿತ ಸಹಾಯ ಪಡೆಯಲು ಆಸಕ್ತ ವಿದ್ಯರ್ಥಿಗಳು https://shaheengroup.org/neet-re-exam-coaching/ ಲಿಂಕ್ ಮೂಲಕ ತಮ್ಮ ಹೆಸರು ನೋಂದಾಯಿಸಬಹುದು ಎಂದು ತಿಳಿಸಿದ್ದಾರೆ.

## ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ದುರಂತ: ನಾಲ್ಕು ಅಂಗಡಿ ಭಸ್ಮ

• ಮಲ್ಲಮ್ಮ ನುಡಿ ವಾರ್ತೆ ಬೀದರ

ವಿಧಾನಸಭಾ ಕ್ಷೇತ್ರದ ಬೆನಕನಹಳ್ಳಿ ಗ್ರಾಮದಲ್ಲಿ ದೇವಸ್ಥಾನದ ಹಿಂಭಾಗದಲ್ಲಿರುವ ಜೈ ಸಿಂಗ್ ಚೌಹಾಣ್ ಅವರ ನಾಲ್ಕು ಅಂಗಡಿಗಳಿಗೆ ನಿನ್ನೆ ಮಧ್ಯಾಹ್ನ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅವಘಡ ಸಂಭವಿಸಿ ಸಂಪೂರ್ಣವಾಗಿ ಸುಟ್ಟು ಹೋಗಿರುವ ಘಟನೆ ನಡೆದಿದೆ.

ಅಗ್ನಿ ದುರಂತದಲ್ಲಿ ವಾಟರ್ ಪ್ಲಾಂಟ್, ಜನರಲ್ ಸ್ಟೋರ್, ಕಿರಾಣಿ ಅಂಗಡಿ ಹಾಗೂ ದೇವಸ್ಥಾನದ ಪೂಜಾ ಸಾಮಗ್ರಿಗಳ ಅಂಗಡಿ ಸಂಪೂರ್ಣ ಹಾನಿಗೊಳಗಾಗಿವೆ. ಅಲ್ಲದೆ ಐದುರಿಂದ ಆರು ಫ್ರಿಡ್ಜ್‌ಗಳು, ವಾಟರ್ ಪ್ಲಾಂಟ್‌ನ ಉಪಕರಣಗಳು, ಕಿರಾಣಿ ಸಾಮಗ್ರಿಗಳು ಹಾಗೂ ನಾಲ್ಕು ದ್ವಿಚಕ್ರ ವಾಹನಗಳು ಬೆಂಕಿಗೆ ಆಹುತಿಯಾಗಿವೆ.

ಕಷ್ಟಪಟ್ಟು ಸಾಲ ಮಾಡಿ ಆರಂಭಿಸಿದ್ದ ಅಂಗಡಿಗಳು ಬೆಂಕಿಗೆ ಆಹುತಿಯಾಗಿರುವುದರಿಂದ ಜೈ ಸಿಂಗ್ ಚೌಹಾಣ್ ಅವರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಸುಮಾರು 30 ರಿಂದ 35 ಲಕ್ಷ ರೂಪಾಯಿ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.



ಅಗ್ನಿ ಅವಘಡದ ಸಂದರ್ಭದಲ್ಲಿ ಎರಡು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸಲು ಪ್ರಯತ್ನಿಸಿದರೂ ಬೆಂಕಿಯ ತೀವ್ರತೆಯಿಂದಾಗಿ ಕಾರ್ಯಾಚರಣೆ ಕಷ್ಟಕರವಾಗಿತ್ತು.

ಘಟನೆಯ ಮಾಹಿತಿ ತಿಳಿದ ನಂತರ ಬಿಜೆಪಿ ಮುಖಂಡರು ಹಾಗೂ ಬೀದರ ಕ್ಷೇತ್ರದ ನಾಯಕರು ಆದ ಶ್ರೀ ಈಶ್ವರ್ ಸಿಂಗ್ ಠಾಕೂರ್ ಅವರು ಸ್ಥಳಕ್ಕೆ ಭೇಟಿ ನೀಡಿ ಹಾನಿಯನ್ನು ಪರಿಶೀಲಿಸಿದರು. ಈ ವೇಳೆ ಕೆಇಬಿ ಅಧಿಕಾರಿಯಾದ ಶ್ರೀ ಗೋಖಲೆ ಅವರು ಉಪಸ್ಥಿತರಿದ್ದು, ಘಟನೆ ಕುರಿತು ತನಿಖೆ ನಡೆಸುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಬೀದರ ತಹಶೀಲ್ದಾರ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಈಶ್ವರ್ ಸಿಂಗ್ ಠಾಕೂರ್ ಅವರು ಹಾನಿಯ ಸಂಪೂರ್ಣ ವರದಿ ಸಿದ್ಧಪಡಿಸಿ ಪರಿಹಾರ ನೀಡುವಂತೆ ಮನವಿ ಮಾಡಿದರು. ಅಲ್ಲದೆ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿ ಪ್ರಕರಣ ದಾಖಲಿಸುವಂತೆ ಸೂಚಿಸಿದರು.

ಹಾನಿಗೆ ಒಳಗಾದ ಜೈ ಸಿಂಗ್ ಚೌಹಾಣ್ ಅವರಿಗೆ ಧೈರ್ಯ ತುಂಬಿದ ಈಶ್ವರ್ ಸಿಂಗ್ ಠಾಕೂರ್ ಅವರು, ಕಾನೂನು ಪ್ರಕಾರ ಸೂಕ್ತ ಪರಿಹಾರ ದೊರಕಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮಾಂತರ ಮಂಡಲ ಅಧ್ಯಕ್ಷರಾದ ಶ್ರೀ ದೀಪಕ್ ಗಾದಗೆ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ರಾಜೇಂದ್ರ ಪೂಜಾರಿ ಹಾಗೂ ಗ್ರಾಮದ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ

## ಕುಡಿಯುವ ನೀರಿನ ಸಮಸ್ಯೆಗಳಿದ್ದಲ್ಲಿ ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಸಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲೆಯ ಯಾವುದೇ ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಕೂಡಲೆ ಬಾಡಿಗೆ ಮೇಲೆ ಕೊಳವೆ ಬಾವಿ ಪಡೆದು ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ 3–4 ವರ್ಷಗಳ ಸಮಸ್ಯಾತ್ಮಕ ಗ್ರಾಮಗಳನ್ನು ಮೊದಲ ಪಟ್ಟಿ ಮಾಡಿ ಅಲ್ಲಿ ಹೆಚ್ಚು ನಿಗಾ ವಹಿಸಬೇಕು ಮತ್ತು ಎಲ್ಲಿಯೂ ಕುಡಿಯುವ ನೀರಿನ ತೊಂದರೆಯಾಗದಂತೆ ಎಚ್ಚರದಿಂದ ಕಾರ್ಯನಿರ್ವಹಿಸಿ ಎಂದರು.

21ನೇ ಶತಮಾನದಲ್ಲಿ ನಾವಿದ್ದೇವೆ. ಇಂದಿಗೂ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಮಾಡದಿದ್ದರೆ ಅದು ನಮ್ಮ ಆಡಳಿತದ ವೈಫಲ್ಯ ಎಂಬುದನ್ನು ಮರೆಯದಿರಿ. ಗ್ರಾಮೀಣ ಮತ್ತು ನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿದಲ್ಲಿ ಕೂಡಲೆ ಜಿಲ್ಲಾ ಪಂಚಾಯತ್ ಸಿ.ಇ.ಓ ಮತ್ತು ಡಿ.ಯು.ಡಿ.ಸಿ ಅವರ ಗಮನಕ್ಕೆ ತರಬೇಕು. ಹಳೇ ಬೋರವೆಲ್‌ಗಳಿದಲ್ಲಿ ಅದನ್ನು ಫ್ಲಶ್ ಮಾಡಬೇಕು. ಟ್ಯಾಂಕರ್ ಮೂಲಕ ನೀರು ಪೂರೈಕೆ ನಮ್ಮ ಕೊನೆ ಆದ್ಯತೆಯಾಗಿರಲಿ ಎಂದರು.



ಈಗಾಗಲೆ ಅರ್ಧ ಬೇಸಿಗೆ ಕಳೆದು ಹೋಗಿದೆ. ಇನ್ನು ಒಂದು ತಿಂಗಳ ಕಾಲ ಸವಾಲು ನಮ್ಮ ಮುಂದಿದೆ. ನೀರು ಜೀವ ಜಲ. ಅದಿಲ್ಲದಿದ್ದರೆ ಸಕಲ ಪ್ರಾಣಿಗೂ ಸಂಕಟ ಇದ್ದಂತೆ. ಇನ್ನು ಬೇಸಿಗೆ ಕಾಲದ ಕ್ರಾಪ್ ಸಮೀಕ್ಷೆ ವಾರಾಂತ್ಯದಲ್ಲಿ ಪೂರ್ಣಗೊಳಿಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡಿದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಇ.ಇ. ಜಗದೇವ ಜೀವಣಗಿ ಮಾತನಾಡಿ ಜಿಲ್ಲೆಯಲ್ಲಿ 26 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಬಾಡಿಗೆ ಕೊಳವೆ ಬಾವಿ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ ಎಂದಾಗ ಡಿ.ಸಿ. ಅವರು ಮಾತನಾಡಿ, ರೈತರೊಂದಿಗೆ ಬಾವಿ ಬಾಡಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕಿಸಿಕೊಂಡು ದಾಖಲಾತಿ ನಿರ್ವಹಣೆ ಮಾಡಬೇಕು ಎಂದರು.

ಕೆ.ಯು.ಡಿ.ಐ.ಎಫ್.ಸಿ. ಅಧೀಕ್ಷಕ ಅಭಿಯಂತ ಅರ್.ಪಿ.ಜಾಧವ ಮಾತನಾಡಿ, ಕಲಬುರಗಿ ಮಹಾನಗರಕ್ಕೆ ಭೀಮಾದಿಂದ 60 ಎಂ.ಎಲ್.ಡಿ, ಬೆಣ್ಣೆತೋರಾದಿಂದ 22 ಎಂ.ಎಲ್.ಡಿ. ಪಡೆದು ನೀರು ಪೂರೈಸಲಾಗುತ್ತಿದೆ. ಭೀಮಾ ನದಿಯಿಂದ ಮುಂದಿನ 22 ದಿನಕ್ಕೆ ಆಗುವಷ್ಟು ಮಾತ್ರ ನೀರು ಶೇಖರಣೆ ಇದ್ದು, ಮುಂಗಾರು ಮಳೆ ತಡವಾದರೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಹೀಗಾಗಿ ನಾರಾಯಣಪುರ ಜಲಾಶಯದಿಂದ ಮುಂಜಾಗ್ರತೆಯಾಗಿ ನೀರು ಬಿಡಿಸಿಕೊಳ್ಳಬೇಕು ಎಂದರು.

ಪಿ.ಡಿ.ಓ ಗಳು ಜವಾಬ್ದಾರಿಯಿಂದ ವರ್ತಿಸಿ: ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಪಿ.ಡಿ.ಓ ಗಳು ಕುಡಿಯುವ ನೀರಿನ ವಿಷಯದಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕು. ಹಣ ಇಲ್ಲ ಎನ್ನುವ ಬೇಜವಾಬ್ದಾರಿತನ ಉತ್ತರ ನೀಡಬಾರದು. ಹಣಕ್ಕೆ ಯಾವುದೇ ಕೊರತೆ ಇಲ್ಲ. ಟಾಸ್ಕ್ ಫೋರ್ಸ್ ಕಮಿಟಿಯಲ್ಲಿ ಎಲ್ಲಾ ರೀತಿಯ ಕಾಮಗಾರಿಗಳನ್ನು ಅನುಮೋದನೆ ಪಡೆದು ಕೈಗೆತ್ತಿಕೊಳ್ಳಬಹುದಾಗಿದೆ. ಇದಲ್ಲದೆ ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ 17.30 ಕೋಟಿ ರೂ. ಜಿಲ್ಲೆಗೆ ನೀಡಲಾಗಿದೆ. ಗ್ರಾಮೀಣ ಭಾಗದಲ್ಲಿ ನೀರು ಪೂರೈಕೆಗೆ 7 ಸರ್ಕಾರಿ ಟ್ಯಾಂಕರ್‌ಗಳಿವೆ, ಇದನ್ನು ಸಮರ್ಪಕ ಬಳಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಮಾತನಾಡಿ, ಸಿಡಿಲಿಂದ ಸಾವನಪ್ಪುವುದನ್ನು ತಡೆಯಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದೊಂದೆ ದಾರಿಯಾಗಿದ್ದು, ಹೆಚ್ಚು ರೈತಾಪಿ ಜನರಿಗೆ ಅರಿವು ಮೂಡಿಸಬೇಕು. ಹೀಟ್ ವೇವ್ ಕುರಿತು ಹೆಚ್ಚು ಪ್ರಚಾರ ಮಾಡಬೇಕು. ಇನ್ನು ತಾಲೂಕಾವಾರು ಟಾಸ್ಕ್ ಫೋರ್ಸ್ ಸಮಿತಿ ಕರೆದು ಸಭೆ ನಡಾವಳಿ ಕಳುಹಿಸಿದಲ್ಲಿ ಅನುಮೋದನೆ ನೀಡಲಾಗುವುದು ಎಂದು ತಹಶೀಲ್ದಾರ, ತಾಲೂಕಾ ಪಂಚಾಯತ್ ಇ.ಓ ಗಳಿಗೆ ನಿರ್ದೇಶನ ನೀಡಿದರು.

ಇದಕ್ಕೂ ಮೊದಲು ಜಿಲ್ಲಾಧಿಕಾರಿಗಳು ಸೊನ್ನ ಬ್ಯಾರೇಜ್, ಅಮರ್ಜಾ, ಬೆಣ್ಣೆತೋರಾ, ಚಂದ್ರಂಪಳ್ಳಿ, ಗಂಡೋರಿ ನಾಲಾ, ಲೋವರ್ ಮುಲ್ಲಾಮಾರಿ ಜಲಾಶಯಗಳಲ್ಲಿ ಇಂದಿನ ನೀರಿನ ಸ್ಥಿತಿಗತಿಯನ್ನು ಇಂಜಿನೀಯರ್‌ಗಳಿಂದ ಡಿ.ಸಿ. ಮಾಹಿತಿ ಪಡೆದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತಾರಾದ ಸಾಹಿತ್ಯಾ ಆಲದಕಟ್ಟಿ, ಪ್ರಭುರೆಡ್ಡಿ ಸೇರಿದಂತೆ ತಾಲೂಕಿನ ತಹಶೀಲ್ದಾರರು, ತಾಲೂಕಾ ಪಂಚಾಯತ್ ಇ.ಓ. ಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ವಿಶ್ವ ರೆಡ್ ಕ್ರಾಸ್ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ವೀ.ವಿ.ಸಂಘಧ, ವೀರಶೈವ ಮಹಾವಿದ್ಯಾಲಯದಲ್ಲಿ, ಯೂತ್ ರೆಡ್ ಕ್ರಾಸ್ ಘಟಕದಿಂದ ವಿಶ್ವ ರೆಡ್ ಕ್ರಾಸ್ ದಿನಾಚರಣೆಯನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಜಿ ಮಲ್ಲನಗೌಡ ಇವರು ವಹಿಸಿ ಮಾತನಾಡುತ್ತಾ ರೆಡ್ ಕ್ರಾಸ್ ಕೇವಲ ಒಂದು ಸಂಸ್ಥೆಯಲ್ಲ. ಅದು ಮಾನವೀಯತೆಯ ಸಂಕೇತ. ಯುದ್ಧದ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ ನೆರವಾಗಲು ಆರಂಭವಾದ ಈ ಚಳುವಳಿ, ಇಂದು ಪ್ರಕೃತಿ ವಿಕೋಪ, ಅಪಘಾತ ಅಥವಾ ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಜನರ ಜೀವ ಉಳಿಸುವ ಕೆಲಸ ಮಾಡುತ್ತಿದೆ, ಮತ್ತು ವಿದ್ಯಾರ್ಥಿಗಳು ರೆಡ್ ಕ್ರಾಸ್ ಸ್ವಯಂ ಸೇವಕರಾಗಿ ಸೇವಾ ಮನೋಭಾವನೆಯನ್ನು ಬೆಳಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿ ಮಾತುಗಳನ್ನು ಹೇಳಿದರು.

ಈ ಕಾರ್ಯಕ್ರಮದ ವೇದಿಕೆಯ ಮೇಲೆ ಡಾ ರಾಜಶ್ರೀ ಪಾಟೀಲ್ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ, ರಾಧಸ್ವಾಮಿ, ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ಡಾ.ಕವಿತ.ಎಂ.ಸಂಗನಗೌಡ, ದೈಹಿಕ ಶಿಕ್ಷಣ ನಿರ್ದೇಶಕರು,ಬೋಧಕ,ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. , ಡಾ.ಶರಣಬಸವ, ಮುಖ್ಯಸ್ಥರು, ಸಸ್ಯಶಾಸ್ತ್ರ ವಿಭಾಗ ಇವರು ಪ್ರಾಸ್ತಾವಿಕ ನುಡಿಗಳನ್ನು ಮಾತನಾಡಿದರು. ರೆಡ್ ಕ್ರಾಸ್ ಘಟಕದ ಸಂಚಾಲರಾದ ಡಾ.ಶರಣಗೌಡ ಇವರು ಅತಿಥಿಗಳನ್ನು ಸ್ವಾಗತಿಸಿದರು. ಡಾ.ವೈ.ಭ್ರಮರಾಂಭ, ಉಪನ್ಯಾಸಕರು ಕನ್ನಡ ವಿಭಾಗ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀಮತಿ ಅನುರಾಧ.ಕೆ, ಉಪನ್ಯಾಸಕರು ಜೈವಿಕ ತಂತ್ರಜ್ಞಾನ ವಿಭಾಗ ಇವರು ಕಾರ್ಯಕ್ರಮವನ್ನು ವಂದಿಸಿದರು.

# ಜನಾರ್ಧನರಾವ ಬಿರಾದಾರಗೆ ಗೌರವ ಡಾಕ್ಟರೇಟ್

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ




ಸಾಮಾಜಿಕ,ಸಾಂಸ್ಕೃತಿಕ,ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸುವ ನಿಸ್ವಾರ್ಥ ಸೇವೆ ಗುರುತಿಸಿ ನನ್ನನ್ನು ಪುಣೆಯಲೌಸೀನಾಸಂಶೋಧನಾ ಕೇಂದ್ರದವರು ಗೌರವ ಡಾ–ಕ್ಟರೇಟ್‌ಗೆ ಆಯ್ಕೆಮಾಡಿದ್ದು ಅತೀವ ಸಂತೋಷವಾಗಿದೆ. ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡಲು ಪ್ರೇರಣೆ ನೀಡಿದಂತಾಗಿದೆ.'

ಜನಾರ್ಧನರಾವ ಬಿರಾದಾರ ಗೌರವ ಡಾಕ್ಟರೇಟ್ ಪುರಸ್ಕೃತ ಭಾಲ್ಕಿ.

ಮೇ.12:ಮಹಾರಾಷ್ಟ್ರದ ಪುಣೆ–ಯ ಲೌಸೀನಾ ಸಂಶೋಧನಾ ಕೇಂದ್ರದವರು ಕೊಡಮಾಡುವ ಗೌರವ ಡಾಕ್ಟರೇಟ್‌ಗೆ ಸಮಾಜ ಸೇವಕ ಜನಾರ್ಧನರಾವ ಬಿರಾದಾರ ಅವರು ಭಾಜನರಾಗಿದ್ದಾರೆ.

ಜನಾರ್ಧನರಾವ ಬಿರಾದಾರ ಅವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ 40 ವರ್ಷದಿಂದ ನಿಸ್ವಾರ್ಥವಾಗಿ ಸಾಮಾಜಿಕ,ಶೈಕ್ಷಣಿಕ,ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವಿರತವಾಗಿ ಪರಿಶ್ರಮಿಸುತ್ತಿದ್ದಾರೆ.ಸರ್ವ ಸಮುದಾಯದ ಏಳಿಗೆಗಾಗಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಪತ್ತೆ ಹಚ್ಚಿ ಅವರ ಭವಿಷ್ಯದ ಶಿಕ್ಷಣಕ್ಕಾಗಿ ಹಣಕಾಸಿನ ನೆರವು ನೀಡಿದ್ದಾರೆ. ಅಲ್ಲದೆ ಸಮುದಾಯದ ಜನರನ್ನು ಮೇಲೆತ್ತುವ ಕಾರ್ಯ ಮಾಡುತ್ತಿದ್ದಾರೆ. ಅವರನ್ನು ಆಯ್ಕೆಮಾಡಿದ್ದು ಸಮಾಜ ಸೇವೆಗೆ ಸಂದ ಗೌರವವಾಗಿದೆ.ಅವರ ಸೇವೆಯಿಂದ ಸಮಾಜದಲ್ಲಿ ಹಲವು ಧನಾತ್ಮಕ ಪರಿವರ್ತನೆಯಾಗುವುದನ್ನು ಗಮನಿಸಿ ಲೌಸೀನಾ ಸಂಶೋಧನಾ ಕೇಂದ್ರದವರು ಗೌರವ ಡಾಕ್ಟ–ರೇಟ್ ನೀಡಲು ನಿರ್ಧರಿಸಿದ್ದಾರೆ. ಇದೇ ಮೇ 24 ರಂದು ಪುಣೆಯ ಲೌಸೀನಾ ಸಂಶೋಧನಾ ಕೇಂದ್ರದಲ್ಲಿ ನಡೆಯುವ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ಕೇಂದ್ರದ ಕುಲಸಚಿವರು ತಿಳಿಸಿದ್ದಾರೆ.

# ಗುರು-ಶಿಷ್ಯರ ಸಂಬಂಧ ಪವಿತ್ರವಾದುದು



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮೇ.12: ಗುರು–ಶಿಷ್ಯರ ಸಂಬಂಧ ಅತ್ಯಂತ ಪವಿತ್ರವಾದುದು ಮತ್ತು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರಗೆಳೆದು ಅವರನ್ನು ಸಾಧಕರನ್ನಾಗಿ ಮಾಡುವಲ್ಲಿ ಗುರು ಮಹತ್ವದ ಪಾತ್ರ ವಹಿಸುತ್ತಾನೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಪತ್ರಾಂಕಿತ ವ್ಯವಸ್ಥಾಪಕ ಶಿವಕುಮಾರ ಘುಲಾರಿ ಹೇಳಿದರು.ತಾಲೂಕಿನ ಜ್ಯಾಂತಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1993–94ನೆಯ ಸಾಲಿನ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ಗುರುವಂದನ ಮತ್ತು ಸ್ನೇಹಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಹಳೆ ವಿದ್ಯಾರ್ಥಿಗಳು ಶಾಲಾ ದಿನಗಳನ್ನು ಮತ್ತು ಗುರುಗಳ ಮೇಲಿಟ್ಟ ಪ್ರೀತಿ, ವಿಶ್ವಾಸ ಮತ್ತು ಗೌರವವನ್ನು ತೋರಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ತಿಳಿಸಿದರು.ಬೀದರ್ ಸರಕಾರಿ ಪದವಿಪೂರ್ವ ಬಾಲಕರ ಕಾಲೇಜಿನ ಉಪನ್ಯಾಸಕ ಶಿವಕುಮಾರ ಸಾಲಿ, ಜಿಲ್ಲಾ ನಮ್ಮ ಕರ್ನಾಟಕ ಸೇನೆ ಅಧ್ಯಕ್ಷ ಗಣೇಶ ಪಾಟೀಲ್ ಮಾತನಾಡಿದರು. ಸೋಮನಾಥ ಎಸ್‌ಎಲ್ ಪಾಟೀಲ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಈ ಸಂದರ್ಭದಲ್ಲಿ ಎಂಜಿಎಸ್‌ಎಸ್‌ಕೆ ನಿರ್ದೇಶಕ ಸಂತೋಷ ಪಾಟೀಲ್, ಗ್ರಾಪಂ ಮಾಜಿ ಅಧ್ಯಕ್ಷ ವಿಜಯಕುಮಾರ ಹಣಮಶೆಟ್ಟಿ, ಸುರೇಶ ಕಪಲಾಪುರೆ, ಸಂಗಮೇಶ ಬಿರಾದಾರ್, ಹಳೆ ವಿದ್ಯಾರ್ಥಿಗಳಾದ ವೀರಶೆಟ್ಟಿ ನೀಡವಾದೆ, ರಮೇಶ ಪಾಟೀಲ್, ಸುರೇಶ ಹಣಮಶೆಟ್ಟಿ, ಸಂತೋಷ ಸುಲಾರ, ಸುರೇಶ ಬೀದರ್, ಸಂತೋಷ, ಸೂರ್ಯಕಾಂತ, ನೀಲೋಚನಾ, ಕವಿತಾ, ಮಂಗಲಾ, ಸವಿತಾ, ಮಂಜುಳಾ, ಸವಿತಾ ಸೇರಿದಂತೆ ಮುಂತಾದವರು ಇದ್ದರು.

ಸನ್ಮಾನ :ನಿವೃತ್ತ ಶಿಕ್ಷಕರಾದ ಮಲಶೆಟ್ಟಿ ಗಾದಗೆ, ಗುಡಸಾಂತಪ್ಪ ಪಾಟೀಲ್, ಬಸಯ್ಯ ಸ್ವಾಮಿ, ಶಿವಕುಮಾರ, ಶಾಮರಾವ, ಪ್ರಭು ಹೋಡಮನಿ ಮತ್ತು ಧುಳಪ್ಪ ಪಂಚಾಳ ಅವರನ್ನು 1993–94ನೆಯ ಸಾಲಿನ ಹಳೆಯ ವಿದ್ಯಾರ್ಥಿಗಳು ಸನ್ಮಾನಿಸಿ, ಗೌರವ ಸಲ್ಲಿಸಿದರು. ಅನ್ನಪೂರ್ಣ ತಳವಾಡೆ ಸ್ವಾಗತ ಗೀತೆ ಹಾಡಿದರು.

# ರಮಾನಂದ ನಾಯಕರಿಗೆ ಅಂಕೋಲಾ ದಿನಕರ ಪ್ರತಿಷ್ಠಾನದಿಂದ ಶೃದ್ಧಾಂಜಲಿ

• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ



ನಾಡುಕಂಡ ಸರಳ ಸಜ್ಜನ ರಾಜಕಾರಣಿ,ಮೌಲ್ಯಾಧಾರಿತ ವ್ಯಕ್ತಿತ್ವದ ರಮಾನಂದ ನಾಯಕರ ಆಕಸ್ಮಿಕ ಅಗಲುವಿಕೆಗೆ ಸಮಾಜಕ್ಕೆ, ಸಾಂಸ್ಕೃತಿಕಲೋಕಕ್ಕೆ ಬಹುದೊಡ್ಡ ನಷ್ಟವೆಂದು ನಿವೃತ್ತ ಪ್ರಾಚಾರ್ಯ ಡಾ. ರಾಮಕೃಷ್ಣ ಗುಂದಿ ಹೇಳಿದರು.ರಮಾನಂದ ನಾಯಕರು ಬಹುಮುಖ ವ್ಯಕ್ತಿತ್ವ ಹೊಂದಿದ್ದು, ಹವ್ಯಾಸಿ ಯಕ್ಷಗಾನಕಲಾವಿದರಾಗಿದ್ದರೆಂದರು.ಅವರು ಅಂಕೋಲೆಯ ಸಾಹಿತಿ ಮೋಹನ ಹಬ್ಬು ಅವರ ಮನೆಯಂಗಳದಲ್ಲಿ ದಿನಕರ ಪ್ರತಿಷ್ಠಾನ ಏರ್ಪಡಿಸಿದ ರಮಾನಂದ ನಾಯಕರ ಶೃದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಿದ್ದರು. ದೈವಾದೀನರಾದ,ಉತ್ತರಕನ್ನಡ ಜಿಲ್ಲಾ ಪರಿಷತ್ತಿನ ಪ್ರಪ್ರಥಮ ಅಧ್ಯಕ್ಷ, ಬಹುಮುಖಿ ವ್ಯಕ್ತಿತ್ವದ ರಮಾನಂದ ನಾಯಕ ಹಿಚ್ಕಡರ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.ಪ್ರೊ. ಮೋಹನ ಹಬ್ಬು ಮಾತನಾಡಿ ರಮಾನಂದ ನಾಯಕ ನನ್ನ ವಿದ್ಯಾರ್ಥಿಯಾಗಿದ್ದು, ಅಂದಿನ ವಿಧೆಯತೆ ಇಂದು ಬಹು ಎತ್ತರಕ್ಕೇರಿದರೂ ಅದೇ ವಿಧೆಯತೆಯನ್ನು ಕಾಪಾಡಿಕೊಂಡು ಬಂದಿರುವುದು ಅವರ ಹೆಗ್ಗಳಿಕೆ ಎಂದರು.ಹೊರಜಗತ್ತಿಗೆ ಅವರು ರಾಜಕಾರಣಿಯಾಗಿ ಕಂಡರೂ ಸಾಂಸ್ಕೃತಿಕವಾಗಿ ಸಿರಿವಂತರಾಗಿದ್ದಾರೆ. ಮಾನವೀಯ ಮೌಲ್ಯಗಳಿಗೆ ಅವರು ಹೆಚ್ಚು ಬೆಲೆ ಕೊಡುತ್ತಿದ್ದರು ಎಂದರು.ಬೇಲೇಕೇರಿಯ ಆರ್. ವಿ. ನಾಯಕರು ತಮ್ಮ ಒಡನಾಟದ ದಿನಗಳನ್ನು ನೆನಪಿಸಿಕೊಂಡರು.ಡಾ. ಅರ್ಚನಾ ರಮಾನಂದರ ಸೇವಾ ಮನೋಭಾವವನ್ನು ಸ್ಮರಿಸಿಕೊಂಡರು.ಲೇಖಕ ಮಹಾಂತೇಶ ರೇವಡಿ ಮಾತನಾಡಿ ರಮಾನಂದ ಮೌಲ್ಯಗಳ ಗಣಿಯಾಗಿದ್ದರೆಂದರು.ಲೇಖಕಿ ಹೊನ್ನಮ್ಮ ರಮಾನಂದ ನಾಯಕರು ಜನಪರ ನಿಲುವಿನ ಸ್ವಚ್ಛ ಮನಸ್ಸಿನ ಹೃದಯವಂತ ವ್ಯಕ್ತಿಯಾಗಿದ್ದಾರೆಂದರು.ಶಿಕ್ಷಕ ಜಯಶೀಲ ಆಗೇರ ಮಾತನಾಡಿ ರಮಾನಂದ ನಾಯಕರು ತಮ್ಮ ಅನುಪಮ ಸೇವೆ ಪ್ರಾಮಾಣಿಕತೆಯಿಂದ ಬಹುಕಾಲ ಜನಮಾನಸದ ನೆನಪಿನಲ್ಲಿ ಉಳಿಯುತ್ತಾರೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರತಿಷ್ಠಾನದ ಕಾರ್ಯದರ್ಶಿ ಜಗದೀಶ ನಾಯಕ ಹೊಸ್ಕೇರಿ ರಮಾನಂದ ನಾಯಕ ಹಾಗೂ ದಿನಕರ ಪ್ರತಿಷ್ಠಾನದ ನಡುವಿನ ಅವಿನಾವಭಾವ ಸಂಬಂಧವಿತ್ತೆಂದರು.ಅಂಕೋಲಾ, ಹುಬ್ಬಳ್ಳಿ ರೈಲುಯೋಜನೆಯ ಜಾರಿಗಾಗಿ ಅವರು ಮಾಡಿದ ಪ್ರಯತ್ನವನ್ನು ನೆನಪಿಸಿಕೊಂಡರು.ಸಾಹಿತ್ಯ ಸಮ್ಮೇಳನಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರೆಂದರು.ಶೃದ್ಧಾಂಜಲಿ ಸಭೆಯಲ್ಲಿ ಶ್ರೀಮತಿ ಪ್ರಭಾ ಹಬ್ಬು, ಲಲಿತಾ ನಾಯ್ಕ ಇತರರು ಉಪಸ್ಥಿತರಿದ್ದು ತಮ್ಮ ನಮನ ಸಲ್ಲಿಸಿದರು.

# ವಾಡಿ (ಜಂ): ಬೃಹತ್ ತ್ಯಾಜ್ಯ ಉತ್ಪಾದಕರು ಘನತ್ಯಾಜ್ಯ ನಿರ್ವಹಣಾ ನಿಯಮಗಳು-2026ನ್ನು ಕಡ್ಡಾಯವಾಗಿ ಪಾಲಿಸಲು ಸೂಚನೆ

ಕಲಬುರಗಿ,ಮೇ.12–ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು–2026ವನ್ನು ದೇಶವ್ಯಾಪಿ ಅಳವಡಿಸಿಕೊಳ್ಳಲು ಸರ್ಕಾರದ ಆದೇಶವಿದ್ದು, ಈ ಕೆಳಕಂಡ ಅಂಶಗಳನ್ನು ಹೊಂದಿರುವವರನ್ನು ಬೃಹತ್ ತ್ಯಾಜ್ಯ ಉತ್ಪಾದಕರೆಂದು ಗುರುತಿಸಲಾಗಿದೆ ಎಂದು ವಾಡಿ (ಜಂ) ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ವಾಡಿ ಪುರಸಭೆಯು ಸದರಿ ನಿಯಮಗಳನ್ನು ಅಳವಡಿಸಿಕೊಳ್ಳುತ್ತಿದೆ. ಪ್ರತಿದಿನ 100 ಕೆ.ಜಿ.ಯಷ್ಟು ಅಥವಾ ಹೆಚ್ಚಿನ ತ್ಯಾಜ್ಯ ಉತ್ಪಾದಕರು, 20,000 ಚ.ಮೀ. ಗಿಂತ ಹೆಚ್ಚಿನ ಸ್ಥಳ ಹೊಂದಿದ ಉದ್ದಿಮೆ, ಸಂಸ್ಥೆ, ವಸತಿ, ಇತರೆ ಹಾಗೂ ಪ್ರತಿದಿನ 40,000 ಲೀ. ನೀರು ಉಪಯೋಗ ಮಾಡುವವರು.

ಈ ಮೇಲ್ಕಂಡ ವರ್ಗಕ್ಕೆ ಸೇರುವ ವ್ಯಾಪಾರಿಗಳು, ಉದ್ದಿಮೆದಾರರು ಮತ್ತು ಇತರೆ ವಸತಿ ಮತ್ತು ಸಂಘ–ಸಂಸ್ಥೆಯ ಮಾಲೀಕರು ತಮ್ಮಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ತಾವೇ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಇಲ್ಲವಾದಲ್ಲಿ ಪುರಸಭೆಯಿಂದ ವಿಲೇವಾರಿ ಮಾಡಬೇಕಾದಲ್ಲಿ ಬಳಕೆದಾರರ ಶುಲ್ಕವನ್ನು ಪಾವತಿಸಿ ಈ ತ್ಯಾಜ್ಯವನ್ನು ವಿಲೇವಾರಿ ಮಾಡಿಬೇಕಾಗಿರುತ್ತದೆ. ಇದಕ್ಕೆ ತಪ್ಪಿದ್ದಲ್ಲಿ ಅಂತಹವರ ವಿರುದ್ಧ ಘನತ್ಯಾಜ್ಯ ವಸ್ತು ನಿರ್ವಹಣೆ ನಿಮಯಗಳು–2026ರನ್ವಯ ಸೂಕ್ತ ಕ್ರಮಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

# ಸಾರಿಗೆ ನೌಕರರ ಬೇಡಿಕೆ ಈಡೇರಿಕೆಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು: ಮುಖಂಡರ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.12: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ವತಿಯಿಂದ ನಗರದ ಕೋಠಾರಿ ಭವನದಲ್ಲಿ ಮಂಗಳವಾರ ನಡೆದ ಮುಷ್ಕರ ಸಿದ್ದತಾ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಮುಖಂಡರು ಒತ್ತಾಯಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿಯ ಮಹಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ಜಯದೇವರಾಜೇ ಅರಸ್ ಅವರು, ರಾಜ್ಯ ರಸ್ತೆ ಸಾರಿಗೆ ನೌಕರರು ಹಲವು ವರ್ಷಗಳಿಂದ ವೇತನ ಪರಿಷ್ಕರಣೆ, ಹುದ್ದೆ ಭರ್ತಿ, ನಿವೃತ್ತಿ ಸೌಲಭ್ಯ ಸೇರಿದಂತೆ ಅನೇಕ ನ್ಯಾಯಸಮ್ಮತ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿರುವುದು ಖಂಡನೀಯ. ನೌಕರರ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಂಡುಹಿಡಿಯದಿದ್ದರೆ ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಮುಖ್ಯಅತಿಥಿಯಾಗಿ ಭಾಗವಹಿಸಿದ್ದ ಕೆಎಸ್‌ಆರ್‌ಟಿಸಿ ಸ್ಟಾಫ್ & ವರ್ಕರ್ಸ್ ಫೆಡರೇಷನ್ (ಎಐ–ಟಿಯುಸಿ) ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜಯಭಾಸ್ಕರ್ ಡಿ.ಎ ಅವರು ಮಾತನಾಡಿ, ಸಾರಿಗೆ ನೌಕರರು ಕೋವಿಡ್ ಅವಧಿಯಲ್ಲೂ ಜೀವದ ಹಂಗು ತೊರೆದು ಸಾರ್ವಜನಿಕ ಸೇವೆ ಸಲ್ಲಿಸಿದ್ದಾರೆ. ಇಂತಹ ನೌಕರರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು) ಪ್ರಧಾನ ಕಾರ್ಯದರ್ಶಿ ಕಾಂ. ಎಚ್.ಎಸ್. ಮಂಜುನಾಥ ಮಾತನಾಡಿ, ಸಾರಿಗೆ ನೌಕರರ ಏಕತೆ ಇಂದಿನ ಅಗತ್ಯವಾಗಿದೆ. ಸರ್ಕಾರ ನೌಕರರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸದಿದ್ದರೆ ರಾಜ್ಯಮಟ್ಟದಲ್ಲಿ ಉಗ್ರಹೋರಾಟ ಅನಿವಾರ್ಯವಾಗಲಿದೆ ಎಂದು ಹೇಳಿದರು.

ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿಯ ಪ್ರಧಾನ ಕಾರ್ಯದರ್ಶಿ ಎನ್. ನಾರಾಯಣ ಸ್ವಾಮಿ ಮಾತನಾಡಿ, ನೌಕರರ ವೇತನ, ಭದ್ರತೆ ಹಾಗೂ ಸೇವಾ ಸೌಲಭ್ಯಗಳ ಕುರಿತು ಸರ್ಕಾರ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಅಧ್ಯಕ್ಷ ಜಗದೀಶ್ ಎಚ್. ಅವರು ಮಾತನಾಡಿ, ನೌಕರರ ಹೋರಾಟವು ಯಾವುದೇ ವ್ಯಕ್ತಿಗತ ಹಿತಾಸಕ್ತಿಗಾಗಿ ಅಲ್ಲ; ಸಾರಿಗೆ ವ್ಯವಸ್ಥೆ ಮತ್ತು ನೌಕರರ ಭವಿಷ್ಯಕ್ಕಾಗಿ ನಡೆಯುತ್ತಿರುವ ಹೋರಾಟವಾಗಿದೆ ಎಂದರು.

ಅಧ್ಯಕ್ಷೀಯ ಭಾಷಣ ಮಾಡಿದ ಚಂದ್ರಕಾಂತ ಗದ್ದಗಿ ಅವರು, ಸಾರಿಗೆ ನೌಕರರ ಹಕ್ಕುಗಳ ರಕ್ಷಣೆಗೆ ಎಲ್ಲ ಸಂಘಟನೆಗಳು ಒಂದಾಗಿ ಹೋರಾಟ ನಡೆಸುತ್ತಿರುವುದು ಶ್ಲಾಘನೀಯ. ಸರ್ಕಾರ ಸಮಸ್ಯೆಗಳನ್ನು ಮಾತುಕತೆಯ ಮೂಲಕ ಬಗೆಹರಿಸಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಕಾಂ. ಎಚ್.ಡಿ. ರೇವಪ್ಪ, ಸಂಗಮನಾಥ ರಬಶೆಟ್ಟಿ, ಕಾಂ. ಸಿದ್ದಪ್ಪ ಪಾಲ್ಕಿ, ರಾಮು, ಭೀಮರಾವ್ ಯರಗೋಳ ಹಾಗೂ ಬಸವರಾಜ ಕಣ್ಣಿ ಅಧ್ಯಕ್ಷ ಮಂಡಳಿಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಾಮಚಂದ್ರ ಹೈಯ್ಯಾಳಕರ್, ಗಣಪತಿ ಗೋಳಾ, ಖಾಜಪ್ಪ ಕೋರಳ್ಳಿ ಹಾಗೂ ಸೂರ್ಯಕಾಂತ ಟೈಗರ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಸಂಘಟನಾ ಕಾರ್ಯದರ್ಶಿ ಕಾಂ. ನಾಗೇಂದ್ರಪ್ಪ ಚವ್ಹಾಣ ಸ್ವಾಗತಿಸಿದರು. ವಿಠಲ್ ಭೀಮನ್ ಕಾರ್ಯಕ್ರಮ ನಿರೂಪಿಸಿದರು. ಎಸ್.ಬಿ. ಡಲ್ಲು ವಂದನಾರ್ಪಣೆ ಸಲ್ಲಿಸಿದರು.

# ಪ್ರತಿಭಾ ಪುರಸ್ಕಾರ : ವಿದ್ಯಾರ್ಥಿಗಳಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ಹಾಗೂ ಮಹೇಂದ್ರ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ 2025–26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಂಗಳವಾರ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಿತು.

ನಗರದ ಸ್ಟೇಷನ್ ಬಜಾರ್‌ನಲ್ಲಿರುವ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರಾದ ಸುರೇಶ್ ಅಕ್ಕಣ್ಣ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ವಿದ್ಯಾರ್ಥಿಗಳು ಪರಿಶ್ರಮ, ಶಿಸ್ತು ಹಾಗೂ ಗುರಿ ಹೊಂದಿದ ಅಧ್ಯಯನದ ಮೂಲಕ ಉತ್ತಮ ಸಾಧನೆ ಮಾಡಬೇಕು. ಶಿಕ್ಷಣವೇ ಜೀವನದಲ್ಲಿ ಯಶಸ್ಸಿಗೆ ಪ್ರಮುಖ ಅಸ್ತ್ರವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸಹ ಲಭ್ಯವಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಗುರಿಗಳನ್ನು ಸಾಧಿಸಬೇಕು," ಎಂದು ಹೇಳಿದರು.

ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ವಿಜಯಕುಮಾರ್ ಜಮಖಂಡಿ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮಾಶಂಕರ್ ಫಿರೋಜಾಬಾದ್ ಹಾಗೂ ವರದಿಗಾರ ಚಂದ್ರು ಹಿರೇಮಠ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಸುಜಾತಾ ಎಸ್. ಬಿರಾದಾರ ವಹಿಸಿದ್ದರು. ಎನ್‌ಎಸ್‌ಎಸ್ ವಿಭಾಗೀಯ ಅಧಿಕಾರಿ ಡಾ. ಚಂದ್ರಶೇಖರ್ ದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅಗ್ರಶ್ರೇಣಿ ಹಾಗೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಮಿಲಿಂದ್ ಪ್ರಶಾಂತ್, ಶಿವಾ, ಗೌತಮ್ ಶಿವಲಿಂಗ, ಪ್ರಜ್ವಲ್ ಸೇರಿದಂತೆ ಹಲವು ವಿದ್ಯಾರ್ಥಿಗಳನ್ನು ಸನ್ಮಾನಿಸಿ ನಗದು ಬಹುಮಾನ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ಮುಖ್ಯಗುರುಗಳಾದ ರಮೇಶ್ ಕುಮಾರ್ ವಿ. ದೇವಣಿ, ರಾಜಕುಮಾರ್ ಪಾಟೀಲ್, ಅಂಜನಾದೇವಿ ಹಾಗೂ ಚನ್ನವೀರಯ್ಯ ಡಿ. ಹಿರೇಮಠ್ ಅವರನ್ನು ಗೌರವಿಸಲಾಯಿತು.

ಎನ್‌ಎಸ್‌ಎಸ್ ನೋಡಲ್ ಅಧಿಕಾರಿ ಪಾಂಡು ಎಲ್. ರಾಠೋಡ್ ಕಾರ್ಯಕ್ರಮ ನಿರೂಪಿಸಿದರು. ರೇಣುಕಾ ಚಿಕ್ಕಮೇಟಿ ಸ್ವಾಗತಿಸಿದರು. ಶ್ರೀಶೈಲ್ ಕೂರ್ದ್ ವಂದಿಸಿದರು.

ಮಹೇಂದ್ರ ಫೌಂಡೇಷನ್ ಅಧ್ಯಕ್ಷರಾದ ಜ್ಯೋತಿ ಚಂದ್ರಶೇಖರ್ ದೊಡ್ಡಮನಿ, ಉಪನ್ಯಾಸಕರಾದ ಬಲರಾಮ ಚವ್ಹಾಣ, ಅಲ್ಲಾಪಟೇಲ್, ಅನಿಲ್ ಸುಗಂಧಿ, ಡಾ. ಶರಣಬಸಪ್ಪ ಮಹಾಜನ್, ಡಾ. ಶೀಲಾವತಿ ವಾಡೇಕರ್, ಸಿದ್ದಲಿಂಗಪ್ಪ ಪೂಜಾರಿ, ಶಶಿಧರ್ ಭೂಸನೂರ, ಮಹಿಬೂಬ್ ನದಾಫ್, ಪಲ್ಲವಿ ಕುಲಕರ್ಣಿ ಹಾಗೂ ಸಿಬ್ಬಂದಿಗಳಾದ ನೇಸರ ಬಿಳಗೀಮಠ, ಮಲ್ಲಪ್ಪ, ಲಕ್ಷ್ಮಿಕಾಂತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಾಣೆಯಾದ ವಯೋವೃದ್ಧೆಯ ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಮೇ.12–ಕಾಳಗಿ ತಾಲೂಕಿನ ತೊನಸನಳ್ಳಿ(ಟಿ) ಗ್ರಾಮದ 82 ವರ್ಷದ ಸುಭದ್ರಮ್ಮ ಗಂಡ ಪರಮೇಶ್ವರ ನಿಂಗದೆ ಇವರು ದಿನಾಂಕ: 18–09–2025 ರಂದು ರಾತ್ರಿ 9 ಗಂಟೆಗೆ ಊಟ ಮಾಡಿ ಮನೆಯಲ್ಲಿ ಮಲಗಿಕೊಂಡಿದ್ದು, ನಂತರ ದಿನಾಂಕ: 19–09–2025 ರ ಬೆಳಿಗ್ಗೆ 2 ರಿಂದ 5 ಗಂಟೆಯ ಅವಧಿಯಲ್ಲಿ ಮನೆಯಿಂದ ಹೋಗಿ ಕಾಣೆಯಾಗಿದ್ದಾರೆ ಎಂದು ಮಾಡಬೂಳ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತಿಳಿಸಿದ್ದಾರೆ. ಕಾಣೆಯಾದ ಸುಭದ್ರಮ್ಮ ಪರಮೇಶ್ವರ ನಿಂಗದೆ ಅವರು ಸುಮಾರು 4–5 ವರ್ಷಗಳಿಂದ ಅಸ್ತಮಾದಿಂದ ಬಳಲುತ್ತಿದ್ದು, ಎಲ್ಲಾ ಕಡೆ ತೋರಿಸಿದರೂ ಕಡಿಮೆ ಆಗಿರುವುದಿಲ್ಲ. ಸುಭದ್ರಮ್ಮ ಇವರನ್ನು ಎಲ್ಲಾ ಕಡೆ ಹುಡುಕಿದರೂ ಸಿಕ್ಕಿರುವುದಿಲ್ಲ. ಇವರು ಅಂದಾಜು 6 ಅಡಿ ಎತ್ತರ ಇದ್ದು, ಸಾಧಾರಣ ಮೈಕಟ್ಟು, ಸಾದಾಗಪ್ಪು ಮೈಬಣ್ಣ, ತಳ್ಳನೆಯ ಮೈಕಟ್ಟು ಉದ್ದನೆಯ ಮುಖ ಇರುತ್ತದೆ. ಕನ್ನಡ ಭಾಷೆ ಮಾಡನಾಡುತ್ತಾರೆ. ಮೈಮೇಲೆ ಚಾಕಲೇಟ್ ಬಣ್ಣದ ಸೀರೆ ಮತ್ತು ಬಿಳಿ ಬಣ್ಣದ ಜಂಪರ್ ಧರಿಸಿರುತ್ತಾರೆ. ಕಾಣೆಯಾದ ಈ ವಯೋವೃದ್ಧೆಯ ಸುಳಿವು ಸಿಕ್ಕಲ್ಲಿ ಕೂಡಲೇ ಮಾಡಬೂಳ ಪೊಲೀಸ್ ಠಾಣೆಯ ಪಿ.ಎಸ್.ಐ. ಇವರ ಮೊಬೈಲ್ ಸಂಖ್ಯೆ 9480803571 ಹಾಗೂ ಕಾಳಗಿ ಪಿ.ಎಸ್.ಐ. ಇವರ ಮೊಬೈಲ್ ಸಂಖ್ಯೆ 9480803542 ಗಳಿಗೆ ತಿಳಿಸುವಂತೆ ಕೋರಲಾಗಿದೆ.

# ಬೇಡವಾದ ಮಕ್ಕಳನ್ನು ಅನಾಥ ಮಾಡಬೇಡಿ ಸರ್ಕಾರಿ ದತ್ತು ಸಂಸ್ಥೆಗೆ ನೀಡಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)



ಮೇ.12: ಮಕ್ಕಳು ಈ ದೇಶದ ಆಸ್ತಿ. ಪೋಷಕರಿಗೆ ಬೇಡವಾದ ಅಥವಾ ಅನಾಥ ಮಕ್ಕಳನ್ನು ಎಲ್ಲೆಂದರಲ್ಲಿ ಬಿಟ್ಟು ಹೋಗದೆ, ರ್ಕಾರದ ವಿಶೇಷ ದತ್ತು ಸಂಸ್ಥೆಗೆ ಹಸ್ತಾಂತರಿಸಿ ಅವರ ಸುಭದ್ರ ಭವಿಷ್ಯಕ್ಕೆ ಸಹಕರಿಸಿ ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಮನವಿ ಮಾಡಿದರು.

ನಗರದರ್ಕಾರಿ ವಿಶೇಷದತ್ತುಸಂಸ್ಥೆಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಇಬ್ಬರು ಮಕ್ಕಳಿಗೆ ದತ್ತು ಪರ್ವ ಪೋಷಕತ್ವದ ಆದೇಶ ನೀಡಿ ಮಾತನಾಡಿದರು. ಜಿಲ್ಲೆಯಲ್ಲಿ 2024 ಅಕ್ಟೋಬರ್ ನಿಂದ ಆರಂಭವಾದ ಈ ಸಂಸ್ಥೆಯು ಈವರೆಗೆ 7 ಮಕ್ಕಳಿಗೆ ಕಾನೂನಾತ್ಮಕವಾಗಿ ದತ್ತು ನೀಡುವ ಮೂಲಕ ಅವರ ಬಾಳಿಗೆ ಬೆಳಕಾಗಿದೆ.

ಕಾರಾ ಮರ್ಗಸೂಚಿಯನ್ವಯ ಮಂಡ್ಯ ಹಾಗೂ ಹೊನ್ನಾವರದ ದಂಪತಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಇಬ್ಬರು ಮಕ್ಕಳನ್ನು ದತ್ತು ಹಸ್ತಾಂತರಿಸಿದ ಅವರು, ಸಂಸ್ಥೆಯಲ್ಲಿರುವ ಮಕ್ಕಳ ಪಾಲನೆ ಮತ್ತು ಪೋಷಣೆಯನ್ನು ಅಚ್ಚುಕಟ್ಟಾಗಿ ನರ್ವಹಿಸುವಂತೆ ಸಿಬ್ಬಂದಿಗಳಿಗೆ ನರ್ದೇಶನ ನೀಡಿದರು.

ಪರಿತ್ಯಕ್ತ ಅಥವಾ ಅನಾಥ ಮಕ್ಕಳು ಕಂಡುಬಂದಲ್ಲಿ ಕೂಡಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕವನ್ನು ಸಂರ್ಕಿಸಿ ಮಾಹಿತಿ ನೀಡಬೇಕು. ಮಕ್ಕಳನ್ನು ಕಾನೂನುಬದ್ಧವಾಗಿ ದತ್ತು ಪಡೆಯುವ ಮೂಲಕ ಅವರಿಗೆ ಸುಂದರ ಬದುಕು ನೀಡಿ ಎಂದು ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ತಿಳಿಸಿದರು.

ಈ ಸಂರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸುಧೀಪ್ ಕುಮಾರ್ ಉಂಕಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ದತ್ತು ಕೇಂದ್ರದ ಸಿಬ್ಬಂದಿಗಳು ಮತ್ತು ಪೋಷಕರು ಹಾಜರಿದ್ದರು.

# ಸದ್ಯಕ್ಕೆ ಚಿನ್ನ ಖರೀದಿಸಬೇಡಿ ಎಂಬ ಪ್ರಧಾನಿ ಹೇಳಿಕೆಗೆ ಸ್ವಾಗತ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಪ್ರಧಾನಿ ನರೇಂದ್ರ ಮೋದಿಯವರು ಚಿನ್ನದ ಮೇಲೆ ಹೂಡಿಕೆ ಮಾಡಬೇಡಿ, ಖರೀದಿ ಮಾಡಬೇಡಿ ಎಂದು ಕರೆ ಕೊಟ್ಟಿರುವುದನ್ನು ಸ್ವಾಗತಿಸಲಾಗುವುದು ಎಂದು ಭಾರತೀಯ ಜನತಾ ಪಾರ್ಟಿಯ ಕೈಗಾರಿಕಾ ಪ್ರಕೋಷ್ಠಕ ಸಹ ಸಂಚಾಲಕ ಮಲ್ಲಿಕಾರ್ಜುನ ಮರತೂರಕರ್ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಕರೆನ್ಸಿ ಬಳಕೆಯನ್ನು ತಡೆಗಟ್ಟಲು ಪ್ರಧಾನಿಯವರು ಆ ರೀತಿ ಕರೆ ಕೊಟ್ಟಿರಬಹುದು ಎಂದು ಭಾವಿಸುತ್ತೇನೆ. ಅಂದರೆ ಚಿನ್ನದ ಬಿಸ್ಕತ್, ನಾಣ್ಯ ಖರೀಸುವುದು, ಚಿನ್ನದ ಮೇಲೆ ಬಂಡವಾಳ ಹೂಡಿಕೆ ಮಾಡುವುದು, ಇಂತಹುದನ್ನು ನಿಲ್ಲಿಸಿ ಎಂದು ಪ್ರಧಾನಿ ಹೇಳಿರಬಹುದು ಎಂದು ಭಾವಿಸುತ್ತೇನೆ. ಆದರೆ ಮದುವೆ, ನಾಮಕರಣದಂತಹ ಶುಭ ಸಮಾರಂಭಗಳಿಗೆ ಖರೀದಿಸುವ ಬಳಕೆಯ ಆಭರಣ ಚಿನ್ನ ಖರೀದಿಗೆ ಯಾವುದೇ ರೀತಿಯ ತೊಂದರೆ ಅವರ ಹೇಳಿಕೆಯಿಂದ ಆಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಪೆಟ್ರೋಲ್, ಡೀಸೆಲ್, ಚಿನ್ನವನ್ನು ಹೆಚ್ಚಿನ ರೀತಿಯಲ್ಲಿ ಆಮದುಮಾಡಿಕೊಳ್ಳಲಾಗುತ್ತಿದೆ. ವ್ಯಾವಹಾರಿಕವಾಗಿ ಡಾಲರ್ ಬಳಕೆ ಮಾಡುವುದರಿಂದ ವಿದೇಶಿ ವಿನಿಮಯದ ರೂಪದಲ್ಲಿ ವಿದೇಶಗಳಿಗೆ ಲಾಭವಾಗುತ್ತದೆ. ಆ ಕಾರಣಕ್ಕೆ ಚಿನ್ನ ಖರೀದಿಸಬಾರದು ಎಂದು ಅವರು ಹೇಳಿರಬಹುದು ಎಂದು ಅವರು ವ್ಯಾಖ್ಯಾನಿಸಿದರು.

# ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 3 ವರ್ಷದ ಡಿಪ್ಲೋಮಾ ಕೋರ್ಸ್ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 12 : 2026–27ನೇ ಸಾಲಿನ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 3 ವರ್ಷದ ಡಿಪ್ಲೋಮಾ ಕೋರ್ಸ್ಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕರು ಹೈದರ್‌ಖಾನ್ ಅವರು ತಿಳಿಸಿದ್ದಾರೆ.

ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 3 ವರ್ಷದ ಡಿಪ್ಲೋಮಾ ಕೋರ್ಸ್ ಪ್ರಥಮ ವರ್ಷ ಮತ್ತು ಲ್ಯಾಟರಲ್ ಎಂಟ್ರಿ ಮುಖಾಂತರ 3ನೇ ಸಮಿಸ್ಟರ್, 2ನೇ ವರ್ಷದ ಡಿಪ್ಲೋಮಾ ಕೋರ್ಸ್ (ಡಿ.ಹೆಚ್.ಟಿ.ಡಿ) ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಿದೆ.

ಪ್ರಸ್ತುತ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ (ಡಿ.ಹೆಚ್.ಟಿ.ಟಿ) ಕೋರ್ಸ್ ಕಲಿಕೆಗಾಗಿ 39 ಪುರುಷ ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಈ ಕೆಳಕಂಡ ಸಂಸ್ಥೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು 2500 ರೂ.ಗಳ ಶಿಷ್ಯವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲೀಷನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. 2026ರ ಜುಲೈ 1ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು 15 ರಿಂದ 23ರ ವರ್ಷ ಒಳಗಿರಬೇಕು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು 15 ರಿಂದ 25ರ ಒಳಗಿರಬೇಕು, ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೋಢೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾಗಿರುತ್ತದೆ.

ಮೂರು ವರ್ಷದ ಡಿಪ್ಲೋಮಾ ಕೋರ್ಸ್ಗಾಗಿ ಲಭ್ಯವಿರುವ ಅಭ್ಯರ್ಥಿಗಳ ಸಂಖ್ಯೆ ಮತ್ತು ಸಂಸ್ಥೆಗಳ ವಿವರ : ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ ಬೆಟಗೇರಿ (ಕರ್ನಾಟಕ) 22 ಅಭ್ಯರ್ಥಿಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ (ತಮಿಳುನಾಡು) 12 ಅಭ್ಯರ್ಥಿಗಳು, ಎಸ್.ಪಿ.ಕೆ.ಎಂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ 3 ಅಭ್ಯರ್ಥಿಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳಂ) 2 ಅಭ್ಯರ್ಥಿಗಳು, ಒಟ್ಟು 39 ಅಭ್ಯರ್ಥಿಗಳು ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಿಲಿಂಗ್‌ಗಾಗಿ ಕರೆಯಲಾಗುವುದು.

ಆಸಕ್ತಿ ಇರುವ ಅಭ್ಯರ್ಥಿಗಳು ಆನ್‌ಲೈನ್ ಡೌನ್‌ಲೋಡ್ ಮಾಡಿಕೊಳ್ಳಲು ಲಿಂಕ್ https://khtigadag.ac.in/AdmissionForm.pdf ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ ಗದಗ ಬೆಟಗೇರಿ 582102ಗೆ 2026ರ ಮೇ 30ರ ಒಳಗೆ ಅರ್ಜಿಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅರ್ಜಿ ಫಾರಂಗಳಿಗಾಗಿ ಪ್ರಾಂಶುಪಾಲರು ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪುರ, ಗದಗ, ಬೆಟಗೇರಿ 582102 ಮೊ.ನಂ.9916143619, ಕಛೇರಿ ದೂ.ಸಂ.08372 259664, ಅಥವಾ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾಡಳಿತ ಸಂಕೀರ್ಣ, ಸಿ–ಬ್ಲಾಕ್, ಕೊಠಡಿ ಸಂ.ಸಿ–6, 2ನೇ ಮಹಡಿ ಚಿತ್ತಾಪೂರ ರೋಡ್ ಯಾದಗಿರಿ 585 202, ದೂ.ಸಂ.08473 253387, ಮೊ.ನಂ.8217050337ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿವಿಧ ಯೋಜನೆಗಳಡಿ ನೀಡಲಾಗಿರುವ ಸಾಲದ ವಸೂಲಿಗಾಗಿ ಒಂದಾವರ್ತಿ ತೀರುವಳಿ ಯೋಜನೆಗೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 12 : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆರ್ಥಿಕ ವರ್ಷ 2013–14 ರಿಂದ 2018–19ನೇ ಸಾಲಿನ ವಿವಿಧ ಯೋಜನೆಗಳಡಿ ನೀಡಲಾಗಿರುವ ಸಾಲದ ವಸೂಲಿಗಾಗಿ ಒಂದಾವರ್ತಿ ತೀರುವಳಿ ಯೋಜನೆ (One Time Settlement Scheme (OTS) ಅವಕಾಶ ಕಲ್ಪಿಸಿದೆ ಎಂದು ಯಾದಗಿರಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಜಿಲ್ಲಾ ವ್ಯವಸ್ಥಾಪಕರು ಸಂತೋಷ ಭರತನೂರ ಅವರು ತಿಳಿಸಿದ್ದಾರೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆರ್ಥಿಕ ವರ್ಷ 2013–14 ರಿಂದ 2018–19ನೇ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತರಿಂದ ಅಂದರೆ ಮುಸಲ್ಮಾನರು, ಕ್ರಿಶ್ಚಿಯನ್, ಜೈನರು, ಭೌದ್ಧ ಧರ್ಮಿಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದವರಿಂದ, ಶ್ರಮಶಕ್ತಿ, ಮೈಕ್ರೋಸಾಲ (ಮಹಿಳಾ ಸ್ವ–ಸಹಾಯ ಸಂಘ), ಸ್ವಾವಲಂಬನಾ ಮಾರ್ಜಿನ ಮನಿ, ಎನ್.ಎಮ್.ಡಿ.ಎಫ್.ಸಿ. ನೇರಸಾಲ, ಎನ್.ಎಮ್.ಡಿ.ಎಫ್.ಸಿ. ವಿದೇಶಿ ವಿದ್ಯಾಭ್ಯಾಸ ಭೂ ಖರೀದಿ ಯೋಜನೆ, ಮೈಕ್ರೋ ಕೋವಿಡ್ 19, ಅರಿವು ಯೋಜನೆ, ಪಶುಸಂಗೋಪನಾ ಯೋಜನೆಗಳಡಿ ನೀಡಲಾಗಿರುವ ಸಾಲದ ವಸೂಲಿಗಾಗಿ, ಸಾಲದ ಮೊತ್ತವನ್ನು ಪೂರ್ಣವಾಗಿ ಅಸಲು ಪಾವತಿಸಿದ ಫಲಾನುಭವಿಗಳಿಗೆ ಬಡ್ಡಿಯನ್ನು ಮನ್ನಾ ಮಾಡಲು ಮಾರ್ಗ ಸೂಚಿಗಳನ್ವಯ ಒಂದಾವರ್ತಿ ತೀರುವಳಿ ಯೋಜನೆ (One Time Settlement Scheme (OTS) ಜಾರಿಗೊಳಿಸಲಾಗಿದ್ದು, ಈ ಯೋಜನೆಯ 2026ರ ಮೇ 1 ರಿಂದ 2026ರ ಜುಲೈ 31ರ ವರೆಗೆ ಜಾರಿಯಲ್ಲಿದ್ದು, ಸದರಿ ಅವಧಿಯಲ್ಲಿ ಬಾಕಿ ಉಳಿದ ಸಾಲದ ಅಸಲು ಮೊತ್ತವನ್ನು ಮಾತ್ರ ಪಾವತಿಸಿ ಸಾಲ ಮುಕ್ತಾಯದ ಪ್ರಮಾಣ ಪತ್ರ ಪಡೆದುಕೊಳ್ಳಬೇಕು. ಫಲಾನುಭವಿಗಳು ನಿಗಮದ ವೆಬ್‌ಸೈಟ್ kmdconline.karnatakagov.in ಮುಖಾಂತರ UPI/ Card/ Net Banking ಮೂಲಕ ಪಾವತಿಸಬಹುದು, ನಿಗಮವು ನಿಗಧಿಪಡಿಸಿದ ದಿನಾಂಕ ಒಳಗೆ ಸಾಲ ಪಾವತಿಮಾಡದ ಫಲಾನುಭವಿಗಳು ಸಂಪೂರ್ಣ ಸಾಲವನ್ನು ಬಡ್ಡಿಯೊಂದಿಗೆ ಪಾವತಿಸಬೇಕಾಗುತ್ತದೆ. ನಿಗಮದ ನಿಯಮಾವಳಿಯಂತೆ, ಬಾಕಿ ವಸೂಲಾತಿಗಾಗಿ ಕ್ರಮಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿ ದೂ.ಸಂ.08473253785 ಹಾಗೂ ಇಲಾಖಾ ಸಹಾಯವಾಣಿ ಸಂ.8277799990ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ-04 ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.12 : ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ 4ರಡಿ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಉಚಿತ ಯುಜಿಡಿ ಮನೆ ಸಂಪರ್ಕ ಕಲ್ಪಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತರು ಜಾತಿ ಪ್ರಮಾಣ ಪತ್ರ, ಆಸ್ತಿ ಮಾಲೀಕತ್ವ ದಾಖಲಾತಿ / ಖಾತೆ / ಪಹಣಿ / ನೋಂದಣಿ ದಾಖಲೆ, ಆಧಾರ್ ಕಾರ್ಡ್ ಪ್ರತಿ, ಸಲ್ಲಿಸಲಾದ ದಾಖಲೆಗಳು ನಿಜವಾಗಿದ್ದು, ತಪ್ಪು ಮಾಹಿತಿ ನೀಡಿಲ್ಲ ಎಂಬುದಾಗಿ ನೋಟರಿ ಅಫಿಡೆವಿಟ್‌ದೊಂದಿಗೆ ದಿನಾಂಕ:15–06–2026ರೊಳಗಾಗಿ ಪಾಲಿಕೆಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಭೀಮಾಶಂಕರ ಮೊ.ಸಂ:8076165543 ಅಥವಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜೈಪಾಲರೆಡ್ಡಿ ಮೊ.ಸಂ: 7989813605ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶೈಕ್ಷಣಿಕ ಸಾಲ ಯೋಜನೆಯಡಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.12 : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2026–27ನೇ ಸಾಲಿನಲ್ಲಿ ಮುಸ್ಲಿಂ, ಜೈನ್, ಸಿಖ್ಖ್, ಪಾರ್ಸಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಂದ ಅರಿವು ಸಿಇಟಿ/ ನೀಟ್ ಶೈಕ್ಷಣಿಕ ಸಾಲ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾದಿಕಾರದಿಂದ ಸಿಇಟಿ/ ನೀಟ್ ಮುಂಖಾತರ ಎಂ.ಬಿ.ಬಿ.ಎಸ್/ಬಿ.ಡಿ.ಎಸ್./ ಆಯುಷ್/ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್/ ಬ್ಯಾಚುಲರ್ ಆಫ್ ಇಂಜಿನಿಯರಿಂಗ್/ಬ್ಯಾಚುಲರ್ ಆಫ್ ಟೆಕ್ನಾಲಜಿ/ ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ಇಂತಹ ಕೋರ್ಸಗಳಿಗೆ ಅಯ್ಕೆಯಾದ ವಿದ್ಯಾರ್ಥಿಗಳಿಗೆ ಸಾಲವನ್ನು ನೀಡಲಾಗುವುದು, ಆಸಕ್ತ ವಿದ್ಯಾರ್ಥಿಗಳು ದಿನಾಂಕ: 30–05–2026ರೊಳಗಾಗಿ ಆನ್‌ಲೈನ್ ನಿಗಮದ ವೆಬ್‌ಸೈಟ್ ವಿಳಾಸ: http://kmdconline.karnataka.govin ಗೆ ಲಿಂಕ್‌ಗೆ ಕ್ಲಿಕ್ ಮಾಡಬೇಕು. ನಂತರ ಅರ್ಜಿಯನ್ನು ತುಂಬಿ ನೇರವಾಗಿ ನಿಗಮದ ಜಿಲ್ಲಾ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ನಂ.12–11–49,1 ನೇ ಮಹಡಿ ಅಮೀರ ಟ್ರೇಡಿಂಗ್ ಕಾಂಪ್ಲೆಕ್ಸ್, ಅರಬ್ ಮೋಹಲ್ಲಾ ರಾಯಚೂರು ದೂರವಾಣಿ ಸಂಖ್ಯೆ: 08532 250825ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತವಾಗಿ ವಿವಿಧ ಕೌಶಲ್ಯ ತರಬೇತಿ ಪಡೆಯಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.12–ಪಿ.ಎಮ್.ಎ.ಜೆ.ಎ.ವೈ. (PMAJAY) ಯೋಜನೆಯಡಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನ ಸಿಪೆಟ್ (CIPET) ಸಂಸ್ಥೆಯಲ್ಲಿ "ಸಹಾಯಕ ಮೆಷಿನ್ ಆಪರೇಟರ್–ಪ್ಲಾಸ್ಟಿಕ್ಸ್ ಪ್ರೊಸೆಸಿಂಗ್" ಮತ್ತು "ಸಹಾಯಕ ಮೆಷಿನ್ ಆಪರೇಟರ್–ಇಂಜೆಕ್ಷನ್ ಮೌಲ್ಡಿಂಗ್" ವಿಷಯದಲ್ಲಿ ಉಚಿತ ಕೌಶಲ್ಯ ತರಬೇತಿ ಪಡೆಯಲು ಆಸಕ್ತಿಯುಳ್ಳ ಪರಿಶಿಷ್ಠ ಜಾತಿಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೈಸೂರಿನ ಸಿಪೆಟ್ ಸಂಸ್ಥೆಯ ಪ್ರಾಚಾರ್ಯರು, ನಿರ್ದೇಶಕರು ಹಾಗೂ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ತರಬೇತಿ ಪಡೆಯಲು ಎಸ್.ಎಸ್.ಎಲ್.ಸಿ.,ಪಿ.ಯು.ಸಿ., ಐಟಿಐ, ಡಿಪ್ಲೋಮಾ/ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ಈ ತರಬೇತಿ ಅವಧಿಯು 3 ತಿಂಗಳು ಇದ್ದು, 2026ರ ಮೇ15 ರಿಂದ ತರಬೇತಿ ಪ್ರಾರಂಭವಾಗಲಿದೆ. ಈ ತರಬೇತಿ ಸಂದರ್ಭದಲ್ಲಿ ಉಚಿತ ಆಹಾರ ಹಾಗೂ ವಸತಿ ಸೌಲಭ್ಯ ಒದಗಿಸಲಾಗುತ್ತದೆ. ಮತ್ತಿತರರ ಹೆಚ್ಚಿನ ಮಾಹಿತಿಗಾಗಿ ಸಿಪೆಟ್, ಸಿ.ಎಸ್.ಟಿ.ಎಸ್., 437/ಎ, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು–570016ನ್ನು, ಮೊಬೈಲ್ ಸಂಖ್ಯೆ 9483431968,9739196375 ಗಳಿಗೆ ಹಾಗೂ ಸಿಪೆಟ್ ಸಂಸ್ಥೆಯ www.cipet.gov.in ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಲಾಗಿದೆ.

# ಹಸ್ತಪ್ರತಿ, ದಾಖಲೆಗಳನ್ನು ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಸಮೀಕ್ಷೆಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 12 : ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ರಾಷ್ಟ್ರದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳ ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಇವುಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಶ್ರೀ ರಮೇಶ ಕೋಲಾರ ಅವರು ಹೇಳಿದರು.



ಯಾದಗಿರಿ ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಮೇ.12 ರಂದು ಅವರ ಅಧ್ಯಕ್ಷತೆಯ ಸಭೆಯಲ್ಲಿ ಜ್ಞಾನ ಭಾರತಂ ಮಿಷನ್ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಸಮೀಕ್ಷೆ, ಗಣತಿ ಕಾರ್ಯಕ್ಕೆ ಹಸ್ತಪ್ರತಿಗಳ ಸಮೀಕ್ಷೆಯ ಪೋಸ್ಟರ್‌ಗಳನ್ನು ಸಮೀಕ್ಷಾ ತಂಡದ ಬಿಡುಗಡೆ ಮಾಡಲಾಯಿತು ಹಾಗೂ ಸಮೀಕ್ಷೆ ತಂಡದವರಿಗೆ ಸಮೀಕ್ಷೆ ನಡೆಸಲು ಗುರುತಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ರಾಷ್ಟ್ರದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರಗಳು, ಹಸ್ತಪ್ರತಿಗಳು ಮತ್ತು ದಾಖಲೆಗಳ ಇಂದಿನ ತಂತ್ರಜ್ಞಾನ ಮೂಲಕ ಶಾಶ್ವತವಾಗಿ ಉಳಿಸಲು ಇವುಗಳ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ, ಅನು ಮತ್ತು ಪ್ರಕಟಣೆಯನ್ನು ಮಾಡುವ ಮೂಲಕ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಒಂದೇ ರಾಷ್ಟ್ರೀಯ ವೇದಿಕೆಯ ಮೂಲಕ ಸಾರ್ವಜನಿಕ ಪ್ರವೇಶವನ್ನು ಒದಗಿಸಿ ಭವಿಷ್ಯದ ಪೀಳಿಗೆಗೆ ಅವುಗಳ ಜ್ಞಾನ ಸಂಪತ್ತಿನ ಸಂರಕ್ಷಣೆ ಮತ್ತು ಬಳಕೆಗೆ ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣ ಯೋಜನೆ ಏರ್ಪಡಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ಇಡೀ ದೇಶದಲ್ಲಿರುವ ಹಸ್ತಪ್ರತಿಗಳ ಮಾಹಿತಿಯನ್ನು ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿರುವ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಅಪ್‌ಲೋಡ್ ಮಾಡುವ ಮೂಲಕ ಸಂಗ್ರಹಣೆಗೊಳ್ಳುವ ಹಸ್ತಪ್ರತಿಗಳ ರಾಷ್ಟ್ರೀಯ ಭಂಡಾರದ (NationalRepository) ದತ್ತಾಂಶದ ಮಾಹಿತಿಯನ್ನು ವಿಶ್ವಕ್ಕೆ ಹಂಚಿಕೊಳ್ಳುವ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೊಳಿಸಿದೆ ಎಂದು ತಿಳಿಸಿದರು.

ಈ ಮಹತ್ವಪೂರ್ಣವಾದ ಜ್ಞಾನಭಾರತ್ ಮಿಷನ್ ಯೋಜನೆಯೊಂದಿಗೆ ರಾಜ್ಯ ಸರ್ಕಾರವು ಕೈಜೋಡಿಸುವ ಸಲುವಾಗಿ ರಾಜ್ಯದಾದ್ಯಂತ ಹಸ್ತಪ್ರತಿಗಳ ಸಮೀಕ್ಷೆ ಕಾರ್ಯವನ್ನು ಪ್ರಾರಂಭಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಈ ಯೋಜನೆಯ ಸಮನ್ವಯವನ್ನು ಸುಗಮಗೊಳಿಸಲು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಜ್ಞಾನ ಭಾರತಂ ಮಿಷನ್ ಜಾರಿಗೆ ರಾಜ್ಯದ ನೋಡೆಲ್ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ

ಸ್ಥಾಯಿ ಸಮಿತಿಯನ್ನು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚನೆ ಮಾಡಿ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿದೆ. ಈ ವಿಷಯವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು "ಕೇಂದ್ರ ಸಂಸ್ಕೃತಿ ಮಂತ್ರಾಲಯದ ಜ್ಞಾನ ಭಾರತಂ ಮಿಷನ್ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಸಮೀಕ್ಷೆ/ಗಣತಿ ಕಾರ್ಯಕ್ಕೆ ಹೆಚ್ಚಿನ ಪ್ರಚಾರವನ್ನು ಮತ್ತು ಜಾಗೃತಿಯನ್ನು ನೀಡುವುದರ ಮುಖಾಂತರ ಹಸ್ತಪ್ರತಿಗಳ ಸಮೀಕ್ಷೆ ಕಾರ್ಯಕ್ಕೆ ಚಾಲನೆ ನೀಡಿ ಯಶಸ್ವಿಗೊಳಿಸಲು ಎಲ್ಲಾ ರೀತಿಯ ಕ್ರಮ ಜರುಗಿಸಲು ನಿರ್ದೇಶನ ನೀಡಿದೆ ಎಂದರು.

ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ರಾಷ್ಟ್ರೀಯ ಹಸ್ತಪ್ರತಿ ಸಮೀಕ್ಷೆಯ ಜಾರಿಗೆ ಸಮನ್ವಯ ವಹಿಸುವುದು. ಗ್ರಂಥಾಲಯಗಳು, ದೇವಾಲಯಗಳು, ಮಠಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಖಾಸಗಿ ಸಂಗ್ರಹಗಳಲ್ಲಿ ಇರುವ ಹಸ್ತಪ್ರತಿಗಳನ್ನು ಗುರುತಿಸಿ ದಾಖಲಿಸುವುದು. ಸಂಗ್ರಹಸ್ಥಳಗಳಿಗೆ ಪ್ರವೇಶ ಕಲ್ಪಿಸಿ, ಸಂರಕ್ಷಕರ ಸಹಕಾರವನ್ನು ಸಮೀಕ್ಷಾ ಪ್ರಕ್ರಿಯೆಯಲ್ಲಿ ಖಚಿತಪಡಿಸುವುದು. ಸಮೀಕ್ಷಾ ತಂಡಗಳಿಗೆ ದಾಖಲೀಕರಣ ಹಾಗೂ ಪಟ್ಟಿ ಮಾಡಿಕೆ ಕಾರ್ಯಗಳಲ್ಲಿ ಸಹಾಯ ಮಾಡುವುದು. ಸ್ಥಳೀಯ ಸಂಸ್ಥೆಗಳು ಮತ್ತು ಹಸ್ತಪ್ರತಿ ಸಂರಕ್ಷಕರಲ್ಲಿ ಮಿಷನ್‌ನ ಉದ್ದೇಶಗಳ ಕುರಿತು ಜಾಗೃತಿ ಮೂಡಿಸುವುದು. ರಾಜ್ಯ ನೋಡೆಲ್ ಇಲಾಖೆಗೆ ನಿಯಮಿತ ಅವಧಿಯಲ್ಲಿ ಪ್ರಗತಿಯ ವರದಿ ಸಲ್ಲಿಸುವುದು. ಜ್ಞಾನ ಭಾರತಂ ವತಿಯಿಂದ ಅಗತ್ಯ ಆಡಳಿತಾತ್ಮಕ ಹಾಗೂ ಲಾಜಿಸ್ಟಿಕ್ ಬೆಂಬಲ ಒದಗಿಸಲಾಗುವುದು ಎಂದು ತಿಳಿಸಿದರು.

ಕ್ಲಸ್ಟರ್ ಕೇಂದ್ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Cluster Center) ಯಾದಗಿರಿ ಜಿಲ್ಲೆಯ ಸಂಯೋಜಕರು, ಪಂ.ಸರ್ವೇಶಾಚಾರ್, ಅಕಮಂಚಿ ವೇದೇಶ ವಿದ್ಯಾಪೀಠ, ಮಣ್ಣೂರು, ಕಲಬುರಗಿ, ಸಂಯೋಜಕರು (CoOrdinator) ಮೊ.ಸಂ.09449950523, ಸಮೀಕ್ಷೆ ಜಾರಿಯ ವಿಧಾನ ಸಮೀಕ್ಷೆಯು ಉನ್ನತ ದತ್ತಾಂಶ ಗುಣಮಟ್ಟ ಮತ್ತು ನಕಲಿ ನಿವಾರಣೆಯನ್ನು ಖಚಿತಪಡಿಸುವ ತಂತ್ರಜ್ಞಾನ ಆಧಾರಿತ ವಿಧಾನದಲ್ಲಿ ಜಾರಿಗೊಳ್ಳಬೇಕು. ಸಂಗ್ರಹ ನಕ್ಷೆಗೊಳಿಸುವಿಕೆ ಹಸ್ತಪ್ರತಿ ಸಂಗ್ರಹಗಳು ಮತ್ತು ಸಂರಕ್ಷಕರ ಗುರುತುಪಡಿಸುವಿಕೆ. ಕ್ಷೇತ್ರ ಸಮೀಕ್ಷೆ–ಭೌತಿಕ ಪರಿಶೀಲನೆ, ಸ್ಥಿತಿ ಮೌಲ್ಯಮಾಪನ ಮತ್ತು ಜಿಯೋಟ್ಯಾಗಿಂಗ್. ದಾಖಲೀಕರಣ–ಮಾನದಂಡಿತ ಮೆಟಾಡೇಟಾ ವಿವರಗಳನ್ನು ದಾಖಲು ಮಾಡುವುದು. ಡಿಜಿಟಲ್ ಅಪ್ಲೋಡ್–ಜ್ಞಾನ ಭಾರತಂ ಸಮೀಕ್ಷಾ ಅಪ್ಲಿಕೇಶನ್ ಮೂಲಕ ದತ್ತಾಂಶ ದಾಖಲಾತಿ. ಕೈಪಿಡಿ ಸಮೀಕ್ಷೆ–ಡಿಜಿಟಲ್ ಸೌಲಭ್ಯ ಸೀಮಿತವಾಗಿರುವ ಪ್ರದೇಶಗಳಲ್ಲಿ ಮುದ್ರಿತ ಪ್ರಶ್ನಾವಳಿ ಬಳಕೆ. ಪರಿಶೀಲನೆ–ಕೇಂದ್ರ ಮಟ್ಟದ ಪರಿಶೀಲನೆ ಮತ್ತು ರಾಜ್ಯ, ಜ್ಞಾನ ಭಾರತಂ ವತಿಯಿಂದ ಯಾದೃಚ್ಛಿಕ ತಪಾಸಣೆ. ಸಮೀಕ್ಷೆಯ ಕಾಲಮಿತಿ ಸಮೀಕ್ಷೆಯನ್ನು 2026ರ ಮಾರ್ಚ್ ರಿಂದ 2026ರ ಮೇ ವರೆಗೆ ಮೂರು ತಿಂಗಳ ಅವಧಿಯಲ್ಲಿ ನಡೆಸಬೇಕು. ನಿರೀಕ್ಷಿತ ಫಲಿತಾಂಶಗಳು ರಾಜ್ಯವಾರು ಸಮಗ್ರ ಹಸ್ತಪ್ರತಿ ದತ್ತಾಂಶ ಭಂಡಾರ ನಿರ್ಮಾಣ. ಅಪರೂಪದ ಹಾಗೂ ಅಪಾಯದಲ್ಲಿರುವ ಹಸ್ತಪ್ರತಿಗಳ ಗುರುತಿಸುವಿಕೆ. ಉಖಖ ಆಧಾರಿತ ರಾಷ್ಟ್ರೀಯ ಹಸ್ತಪ್ರತಿ ಸಂಗ್ರಹ ನಕ್ಷೆಯ ಅಭಿವೃದ್ಧಿ. ಹಸ್ತಪ್ರತಿ ಸಂರಕ್ಷಣೆಯಲ್ಲಿ ಸಂಸ್ಥಾತ್ಮಕ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ಬಲವರ್ಧನೆ ಎಂದರು.

ಈ ಸಂದರ್ಭದಲ್ಲಿ ಯಾದಗಿರಿ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು (ಜಿಲ್ಲಾ ನೋಡಲ್ ಅಧಿಕಾರಿ) ರಾಮಚಂದ್ರಪ್ಪ ಹಾಗೂ ಇನ್ನಿತರರು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ನಗರದ ವಿವಿಧ? ಕಡೆ ಮೇ.14ರಂದು ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆರಾಯಚೂರು

ಮೇ.12 : ಕೆಪಿಟಿಸಿಎಲ್‌ನ ಟಿಎಲ್‌ಎಮ್ ಉಪ ವಿಭಾಗದ ವ್ಯಾಪ್ತಿಯ 110 /11ಕೆವಿ ಜವಾಹರ ನಗರ ಸಬ್ ಸ್ಟೇಷನ್‌ನಿಂದ ವಡವಟ್ಟಿ (ಜವಾಹರ ನಗರ ಲೈನ್) ಜಂಗಲ್ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಮೇ.14ರ ಬೆಳಿಗ್ಗೆ ಬೆಳಿಗ್ಗೆ 8 ಗಂಟೆಯಿಂದ 12ಗಂಟೆಯವರಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 8ರಿಂದ ರಾಯಚೂರು ನಗರದ ತಾಯಾಮ್ಮ ಕಾಲೋನಿ, ಎಮ್.ವಿ.ಜಿ ಕಾಲೋನಿ, ಇಂಡಸ್ಟ್ರೀಯಲ್ ಏರಿಯಾ, ಗದ್ವಾಲ್‌ರಸ್ತೆ, ಅಶ್ವಿನಿ ಕಾಲೋನಿ, ಪಂಚಮುಖಿ ಕಾಲೋನಿ, ವಾಸವಿ ನಗರ, ಎನ್.ಜಿ.ಓ ಕಾಲೋನಿ, ನೀಲಕಂಠೇಶ್ವರ ನಗರ, ಎಕ್ಬಾಲ್ ನಗರ, ಅಂಬೇಡ್ಕರ್ ನಗರ, ಫಾರೂಕ್‌ಅನ್ವರ್ ಕಂಪನಿ, ಅಯ್ಯ ಬೌಡಿ, ನವಾಬ ಗಡ್ಡಾ, ಗಾಜಗಾರಪೇಟೆ, ಹನುಮಾನ್‌ಟಾಕೀಸ್, ನಗರೇಶ್ವರಟೆಂಪಲ್, ಜವಾಹರ ನಗರ ಸ್ಕೂಲ್, ಬೋಲಮಾನದೊಡ್ಡಿರೋಡ್, ಹನುಮಾನ್ ಟಾಕೀಜ್, ವಿದ್ಯಾನಗರ, ವಾಸವಿ ನಗರ, ಎಲ್‌ವಿಡಿ ಕಾಲೇಜ್, ಜವಾಹರ ನಗರ, ಟೆಲಿಫೋನ್ ಎಕ್ಸೇಚೆಂಜ್, ರಾಯಚೂರು ವಾಣಿ, ತಿಮ್ಮಾಪೂರು ಪೇಟೆ, ಪಟೇಲ್ ರೋಡ್, ಕೃಷ್ಣದೇವರಾಯನಗರ, ಶಂಕರಸಿಂಗ್ ಕಾಲೋನಿ, ಸೆಂಟ್ರಲ್ ಸ್ಕೂಲ್, ಮಾಣಿಕ ಪ್ರಭು ಲೇಔಟ್, ಡೆಂಟಲ್ ಕಾಲೇಜ್, ನವೋದಯ ಇಂಜನೀಯರಿಂಗ್ ಕಾಲೇಜ್, ವಿಜಯಲಕ್ಷ್ಮಿ ಲೇಔಟ್, ಲಕ್ಷ ??ಣ ಲೇಔಟ್, ಅಮರಖೇಡ್ ಲೇಔಟ್, ಮಾಣಿಕ ನಗರ, ಗರ್ನಮೆಂಟ್ ಪಾಲಿಟೆಕ್ನಿಕ್, ಐಟಿಐ ಕಾಲೇಜ್, ಸಾವಿತ್ರಿ ಕಾಲೋನಿ, ನಿರ್ಮಿತಿ ಕೇಂದ್ರ ಮತ್ತು ನಿರ್ಮಿತಿ ಕೇಂದ್ರದ ಸುತ್ತಮುತ್ತಲಿನ ಪ್ರದೇಶ, ನಿಸರ್ಗ ಲೇಔಟ್ ಮತ್ತು ನಿಸರ್ಗ ಲೇಔಟ್‌ನ ಸುತ್ತಲಿನ ಎಲ್ಲಾ ಸರಕಾರಿ ಶಾಲಾ ವಸತಿ ನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ನಿಲಯ, ಗದ್ವಾಲ್ ರೋಡ್, ಅಯ್ಯಾಳಪ್ಪ ಸರ್ಕಲ್, ಅಶ್ವಿನಿ ಕಾಲೋನಿ, ಜಲಾಲ್‌ನಗರ, ಮಡ್ಡಿಪೇಟೆ, ಬಸವನಭಾವಿ ಸರ್ಕಲ್, ಮಾರ್ಕೆಟ್ ಯಾರ್ಡ್, ಗಂಜ್ ಏರಿಯಾ, ಸಿಯಾತಾಲಾಬ್‌ನ

ಕೆಲವು ಪ್ರದೇಶ, ಸುದ್ದಿಮೂಲ ದಿನಪತ್ರಿಕೆ, ಕ್ಲಾರಿಟಿಡಯಾಗ್ನಾಸ್ ಸೆಂಟರ್, ಪೂರ್ಣಿಮಾ ಟಾಕೀಸ್ ಹೊಸ ಶಿವಮ್ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆ. 21ರಿಂದ ಆ.23ರವರೆಗೆ ಸಮಾಧಾನ್ ಸಮರೋಹ್: ನ್ಯಾ. ಸಿದ್ಧರಾಮಪ್ಪ ಕಲ್ಯಾಣರಾವ್

• ಮಲ್ಲಮ್ಮ ನುಡಿ ವಾರ್ತೆರಾಯಚೂರು

ಮೇ.12: ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಸರ್ವೋಚ್ಚ ನ್ಯಾಯಾಲಯವು ಸಮಾಧಾನ್ ಸಮರೋಹ್ ಎನ್ನುವ ವಿಶೇಷ ಲೋಕಾ ಅದಾಲತ್ ಅನ್ನು 2026ರ ಆಗಸ್ಟ್ 21 ರಿಂದ 23ರವರೆಗೆ ಆಯೋಜಿಸಲಾಗಿದೆ ಎಂದು ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ.ಗಳು, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರಿ ಸದಸ್ಯ ಕಾರ್ಯದರ್ಶಿಗಳಾದ ಸಿದ್ಧರಾಮಪ್ಪ ಕಲ್ಯಾಣರಾವ್ ಅವರು ತಿಳಿಸಿದ್ದಾರೆ.

ವಿಶೇಷ ಲೋಕ್ ಅದಾಲತ್ ಅನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ ಮಾಡುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ನ್ಯಾಯಾಲಯಗಳ ನ್ಯಾಯಾಧೀಶರೊಂದಿಗೆ ವಿಡಿಯೋ ಸಂವಾದ ಸಭೆ ನಡೆಸಲಾಯಿತು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ಮಹತ್ವದ ಸಭೆಯಲ್ಲಿ ಸುಪ್ರೀಂಕೋರ್ಟ್‌ನ ಮಾರ್ಗದರ್ಶನದಂತೆ ಬಾಕಿ ಇರುವ ಪ್ರಕರಣಗಳ ಶೀಘ್ರ ವಿಲೇವಾರಿ ಕುರಿತು ಚರ್ಚೆ ನಡೆಸಲಾಯಿತು.

ಈ ವೇಳೆ ಕರ್ನಾಟಕದ ನಾನಾ ಜಿಲ್ಲೆಗಳ ನ್ಯಾಯಾಧೀಶರು ಭಾಗವಹಿಸಿ, ತಮ್ಮ ತಮ್ಮ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿ ಹಾಗೂ ಪರಿಹಾರ ಕ್ರಮಗಳ ಬಗ್ಗೆ ವಿವರಿಸಿದರು. ಅಧಿಕಾರಿಗಳು, ಪ್ರಕರಣಗಳನ್ನು ನ್ಯಾಯಾಲಯದ ಹೊರಗಡೆಯೇ ಪರಸ್ಪರ ಸಮಾಧಾನದಿಂದ (ರಾಜಿ) ಬಗೆಹರಿಸುವ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ನ್ಯಾಯಾಲಯಗಳ ಮೇಲಿನ ಭಾರ ಕಡಿಮೆಯಾಗುವುದಲ್ಲದೆ, ಸಾರ್ವಜನಿಕರಿಗೆ ಕಡಿಮೆ ಅವಧಿಯಲ್ಲಿ ನ್ಯಾಯ ದೊರಕಲು ಸಹಕಾರಿ ಆಗಲಿದೆ. ಈ ಸಭೆಯು ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಜನಸ್ನೇಹಿಯಾಗಿಸಲು ಒಂದು ಪ್ರಮುಖ ಹೆಜ್ಜೆಯಾಗಿದ್ದು, ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ನಿವಾರಣೆಗೆ ಹೊಸ ದಿಕ್ಕು ತೋರಿಸಲಿದ್ದು, ಎಲ್ಲಾ ವಕೀಲರು, ಕಕ್ಷಿದಾರರು,

ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ಬಗೆಯ ಕೇಸುಗಳನ್ನು ವಿಶೇಷ ಲೋಕ ಅದಾಲತ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರಿ ಸದಸ್ಯ ಕಾರ್ಯದರ್ಶಿಗಳಾದ ಸಿದ್ಧರಾಮಪ್ಪ ಕಲ್ಯಾಣರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗೃಹಲಕ್ಷ್ಮೀ ಹಣ ಸಾಲದ ಖಾತೆಗೆ ಜಮಾಮಾಡಿಕೊಳ್ಳದಂತೆ ಎಚ್ಚರ ವಹಿಸಲು ಪಾಮಯ್ಯ ಮುರಾರಿ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.12: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯಡಿ ಮಹಿಳೆಯರ ಖಾತೆಗೆ ಜಮೆಯಾಗುವ ಹಣವನ್ನು ಬ್ಯಾಂಕಗಳು ಸಾಲದ ಖಾತೆ–ಗೆ ಬಲವಂತವಾಗಿ ಜಮಾ ಮಾಡಿಕೊಳ್ಳದಂತೆ ಎಚ್ಚರ ವಹಿಸಬೇಕೆಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಇತ್ತೀಚೆಗೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳ ಖಾತೆಗೆ ಜಮಾ ಆದ ಹಣವನ್ನು ಬಲವಂತವಾಗಿ ಅವರ ಸಾಲದ ಖಾತೆಗೆ ಜಮಾ ಅಥವಾ ವರ್ಗಾವಣೆ ಮಾಡಿದರೆ, ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಕಲಿಸಲಾಗುತ್ತದೆ ಎಂದರು.

ಈಗಾಗಲೇ ಸಾಲಕ್ಕೆ ಮುರಿದುಕೊಂಡಿರುವ ಗೃಹಲಕ್ಷ್ಮಿ ಹಣವನ್ನು ಫಲಾನುಭವಿಗಳ ಎಸ್.ಬಿ ಖಾತೆಗೆ ಹಿಂತಿರುಗಿಸುವಂತೆ ಎಲ್ಲಾ ಬ್ಯಾಂಕಿನ ಜಿಲ್ಲಾ ಸಂಯೋಜ–ಕರಿಗೆ ನಿರ್ದೇಶನ ನೀಡಿದ್ದಾರೆ. ಮತ್ತು ಇಂತಹ ಘಟನೆಗಳು ಪುನರಾವರ್ತಿತಗೊಂಡಲ್ಲಿ ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳ ವಿರುದ್ದ ಎಫ್.ಐ.ಆರ್ ದಾಖಲಿಸುವುದರೊಂದಿಗೆ ಸೂಕ್ತ ಶಿಸ್ತಿನ ಕ್ರಮಕ್ಕೆ ಅವರ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ಫಲಾನುಭವಿಗಳು ಈ ಸಂಬಂಧ ದೂರುಗಳಿದ್ದರೆ ್ಣಣಠಿ://ಛಿಟ.ಡಿಛು.ಠಡಿರ.ಟಿ ಪೋರ್ಟಲ್ ನಲ್ಲಿ ಅಥವಾ 14448 ಸಂಖ್ಯೆಗೆ ಕಾಲ್ ಮಾಡುವ ಮೂಲಕ ದೂರು ದಾಖಲಿಸಬಹುದಾಗಿದೆ. ಹಾಗೂ ವ್ಯವಸ್ಥಾಪಕರು ಜಿಲ್ಲಾ ಅಗ್ರಘನ್ಯ ಬ್ಯಾಂಕ್, ನವೋದಯ ಮೆಡಿಕಲ್ ಕಾಲೇಜ್ ಕ್ಯಾಂಪಸ್, ರಾಯಚೂರು ಇಲ್ಲಿಯೂ ದೂರು ದಾಖಲಿಸಬಹುದು ಎಂದರು.

ಈ ಸಂಬಂಧ ಸೂಚನ ಫಲಕವನ್ನು ಎಲ್ಲಾ ಬ್ಯಾಂಕಗಳಲ್ಲಿ ಕಡ್ಡಾಯವಾಗಿ ಗ್ರಾಹಕರಿಗೆ ಸ್ಪಷ್ಟವಾಗಿ ಕಾಣುವಂತೆ ಅಳವಡಿಸುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನವನ್ನು ಸಭೆಯಲ್ಲಿ ನೀಡಿದ್ದಾರೆ ಎಂದು ಜಿಲ್ಲಾ ಅಗ್ರಘನ್ಯ ಬ್ಯಾಂಕ್ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಡಿ (ಜಂ): ತ್ಯಾಜ್ಯವನ್ನು ವಿಂಗಡಣೆ ಮಾಡಿ ತ್ಯಾಜ್ಯ ಸಂಗ್ರಹ ವಾಹನಗಳಿಗೆ ನೀಡಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.12–ಘನತ್ಯಾಜ್ಯವಸ್ತುನಿರ್ವಹಣೆ ನಿಯಮಗಳು–2026ನ್ನು ದೇಶವ್ಯಾಪಿ ಅಳವಡಿಸಿಕೊಳ್ಳಲು ಸರ್ಕಾರದ ಆದೇಶವಿದ್ದು, ಅದರಂತೆ ವಾಡಿ ಪುರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕರು, ಉದ್ದಿಮೆದಾರರು ಹಾಗೂ ವಿವಿಧ ಸಂಘ–ಸಂಸ್ಥೆಗಳು ಕೆಳಕಂಡಂತೆ ತ್ಯಾಜ್ಯ ವಿಂಗಡಣೆ ಮಾಡಿ ತ್ಯಾಜ್ಯ ಸಂಗ್ರಹ ವಾಹನಗಳಿಗೆ ನೀಡಬೇಕೆಂದು ವಾಡಿ (ಜಂ) ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಆದ್ದರಿಂದ ವಾಡಿ ಪುರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕಡ್ಡಾಯವಾಗಿ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ/ ಅಪಾಯಕಾರಿ ತ್ಯಾಜ್ಯ ಎಂದು ಪ್ರತ್ಯೇಕವಾಗಿ ವಿಂಗಡಿಸಿ ಪುರಸಭೆಯ ತ್ಯಾಜ್ಯ ಸಂಗ್ರಹ ವಾಹನಗಳಿಗೆ ನೀಡಬೇಕು.

# ಕಾರ್ಮಿಕ ಇಲಾಖೆಯಿಂದ ವಿವಿಧ ಸೌಲಭ್ಯಗಳ ಲಭ್ಯ: ಕಾರ್ಮಿಕ ಅಧಿಕಾರಿ ಆರತಿ


• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಮೇ.12 : ಕಾರ್ಮಿಕ ಇಲಾಖೆಯು ಕಾರ್ಮಿಕರ ಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಕೈಗಾರಿಕಾ ಶಾಂತಿಯನ್ನು ಕಾಪಾಡುವ ಪ್ರಮುಖ ಸರ್ಕಾರಿ ಸಂಸ್ಥೆಯಾಗಿದೆ. ಅಸಂಘಟಿತ ಮತ್ತು ಸಂಘಟಿತ ಕಾರ್ಮಿಕರ ಹಕ್ಕುಗಳ ರಕ್ಷಣೆ, ಕನಿಷ್ಠ ವೇತನ ಜಾರಿ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಕಾರ್ಮಿಕ ಕಾಯ್ದೆಗಳ ಅನುಷ್ಠಾನವನ್ನು ನಿರ್ವಹಿಸುತ್ತಿದ್ದು, ಕಾರ್ಮಿಕರು ಇಲಾಖೆಯ ಅಧಿಕೃತ ವೆಬ್‌ಸೈಟ್ ಮೂಲಕ ನೋಂದಣಿ ಮತ್ತು ವಿವಿಧ ಸೇವೆಗಳನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಆರತಿ ಅವರು ತಿಳಿಸಿದ್ದಾರೆ. ಯೋಜನೆಗಳು, ಸೌಲಭ್ಯಗಳು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ 18 ರಿಂದ 60 ವರ್ಷದೊಳಗಿರುವ ಕಳೆದ 12 ತಿಂಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕನಿಷ್ಠ 90 ದಿನಗಳ ಕೆಲಸ ನಿರ್ವಹಿಸಿರಬೇಕು. ನೋಂದಣಿ ಶುಲ್ಕ 100 ರೂಪಾಯಿ ಹಾಗೂ ನವೀಕರಣ ಶುಲ್ಕ 50ರೂ. ಶೈಕ್ಷಣಿಕ ಧನಸಹಾಯ, ಮದುವೆ ಧನಸಹಾಯ, ವೈದ್ಯಕೀಯ ಧನಸಹಾಯ, ಪ್ರಮುಖ ವೈದ್ಯಕೀಯ ಧನ ಸಹಾಯ, ಹೆರಿಗೆ ಸೌಲಭ್ಯ, ತಾಯಿ ಮಗು ಸಹಾಯ ಹಸ್ತ, ಅಂತ್ಯಕ್ರಿಯೆ ವೆಚ್ಚ ಮತ್ತು ಅನುಗ್ರಹರಾಶಿ ಪರಿಹಾರ, ಪಿಂಚಣಿ ಸೌಲಭ್ಯ, ಕುಟುಂಬ ಪಿಂಚಣಿ ಸೌಲಭ್ಯ, ದುರ್ಬಲತೆ ಪಿಂಚಣಿ ಸೌಲಭ್ಯ, ಅಪಘಾತ ಪರಿಹಾರ, ಟೂಲ್ ಕಿಟ್ ಸೌಲಭ್ಯ, ಶ್ರಮಿಕ ಸಂಜೀವಿನಿ ಸಂಚಾರಿ ಚಿಕಿತ್ಸಾಲಯ ಪಡೆಯಬಹುದಾಗಿದೆ. ವಿವಿಧ ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ: ಯೋಜನೆಗೆ ಅರ್ಹ ಅಭ್ಯರ್ಥಿಗಳು 18 ರಿಂದ 60 ವರ್ಷದೊಳಗಿರಬೇಕು. ಪ್ರಸ್ತುತ 101 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಅನ್ವಯಿಸುತ್ತದೆ. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಸೌಲಭ್ಯ ಹೊಂದಿರಬಾರದು. ಇವರಿಗೆ ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ.

ಕರ್ನಾಟಕ ರಾಜ್ಯ ಮೋಟರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ: ವಯೋಮಿತಿ 18 ರಿಂದ 60 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು. ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತದೆ ನೋಂದಣಿ ಹಾಗೂ ನವೀಕರಣ ಶುಲ್ಕ 50ರೂ. ಆಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ.

ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ: ವಯೋಮಿತಿ 18 ರಿಂದ 60 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು. ಕರ್ನಾಟಕದಲ್ಲಿ ಗಿಗ್ ವೃತ್ತಿ(ಡೆಲಿವರಿ) ನಿರ್ವಹಿಸುತ್ತಿರುವವರಿಗೆ ಮಾತ್ರ ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ: ವಯೋಮಿತಿ 18 ರಿಂದ 59 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆ: ಯೋಜನೆಯಡಿ 18 ರಿಂದ 40 ವರ್ಷದೊಳಗಿರಬೇಕು. ಮಾಸಿಕ ಆದಾಯ 15,000 ರೂ. ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ/ಇ.ಪಿ.ಎಫ್/ಎನ್.ಪಿ.ಎಸ್ ಯೋಜನೆಯ ಫಲಾನುಭವಿಗಳಾಗಿರಬಾರದು ವಯಸ್ಸಿನ ಆಧಾರಿತ ಮಾಸಿಕ ವಂತಿಕೆಯನ್ನು ಪಾವತಿಸಿದ ಅಸಂಘಟಿತ ವಲಯದ ಕಾರ್ಮಿಕರಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ನಿಶ್ಚಿತ 3000 ರೂ.ಗಳ ಪಿಂಚಣಿ ಸೌಲಭ್ಯ ದೊರೆಯುತ್ತದೆ. (ವಯೋಮಿತಿ ಆದಾರದ 55 ರಿಂದ 200 ರೂಪಾಯಿ) ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ: 18 ರಿಂದ 40 ವರ್ಷದೊಳಗಿರಬೇಕು. ವಾರ್ಷಿಕ ವಹಿವಾಟು ಗರಿಷ್ಠ 1.50 ಕೋಟಿ ರೂ.ಗಳ ಒಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ/ಇ.ಪಿ.ಎಫ್/ಎನ್.ಪಿ.ಎಸ್/ಪಿಎಂಎಸ್‌ವೈಎಂ/ಪಿ.ಎಂ.ಕೆ.ಎಂ.ವೈ. ಯೋಜನೆಯ ಫಲಾನುಭವಿಗಳಾಗಿರಬಾರದು. (ವಯೋಮಿತಿ ಆದಾರದ 55 ರಿಂದ 200 ರೂಪಾಯಿ) ವಯಸ್ಸಿನ ಆಧಾರಿತ ಮಾಸಿಕ ವಂತಿಕೆಯನ್ನು ಪಾವತಿಸಿದ ಅಸಂಘಟಿತ ವಲಯದ ಕಾರ್ಮಿಕರಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ನಿಶ್ಚಿತ 3000ರೂ.ಗಳ ಪಿಂಚಣಿ ಸೌಲಭ್ಯ ದೊರೆಯುತ್ತದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ಡೇಟಾಬೇಸ್ ಇ–ಶ್ರಮ್ ಯೋಜನೆ: 16 ರಿಂದ 59 ವಯೋಮಾನದವರಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರದವರು ಈ ಯೋಜನೆಗೆ ಒಳಪಡಬಹುದಾಗಿದೆ. ಪ್ರಸ್ತುತ ಒಂದು ವರ್ಷದ ಅವಧಿಗೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಪ್ರಯೋಜನ ಪಡೆಯಬಹುದು (ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ದುರ್ಬಲತೆ ಹೊಂದಿದಲ್ಲಿ 2 ಲಕ್ಷ ರೂ. ಹಾಗೂ ಭಾಗಶಃ ಅಂಗವೈಕಲ್ಯಕ್ಕೆ 1 ಲಕ್ಷ ರೂ. ಪರಿಹಾರವು ಯೋಜನೆಯಡಿ ಇರುತ್ತದೆ. ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ) ಸೊಸೈಟಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದುನ್ನು ಉತ್ತೇಜಿಸಲು, ನೇಮಕಾತಿ ಮಾಡಿಕೊಂಡ ಸಂಸ್ಥೆಗೆ ಅಂತಹ ನೌಕರರ ಇ.ಎಸ್.ಐ ಹಾಗೂ ಇ.ಪಿ.ಎಫ್ ವಂತಿಕೆಯನ್ನು ಮರುಪಾವತಿಸುವ ಮೂಲಕ ಆರ್ಥಿಕ ಸಹಾಯ ನೀಡುವುದು ತರಬೇತಿ ಪಡೆಯುವ ಅಪ್ರೆಂಟಿಸ್‌ಗಳಿಗೆ ನೀಡಿದ ಶಿಷ್ಯ ವೇತನವನ್ನು ಮಾಲೀಕರಿಗೆ ಮರು ಪಾವತಿಸುವುದು ಮಾಲೀಕರು ಪಾವತಿಸುವ ಇ.ಎಸ್.ಐ ಮತ್ತು ಇ.ಪಿ.ಎಫ್ ವಂತಿಕೆ ಮರುಪಾವತಿ, ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಶಿಷ್ಯವೇತನ ಮರುಪಾವತಿ, ಅಪ್ರೆಂಟಿಸ್ ತರಬೇತಿ ನಂತರ ಖಾಯಂ ಮಾಡಿಕೊಂಡಲ್ಲಿ ವೇತನ ಮರು ಪಾವತಿ, ಹೊಸದಾಗಿ ಖಾಯಂ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳ ವೇತನ ಮರು ಪಾವತಿ ಯೋಜನೆಗಳು ಇರುತ್ತದೆ. ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ರಾಯಚೂರು ಜಿಲ್ಲಾ ಕಾರ್ಮಿಕ ಅಧಿಕಾರಿ ಆರತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೊದಲು ಮಾನವನಾಗು



ಸುಮಾರು 40 ವರುಷಗಳ ಹಿಂದೆಯೇ ಕಾವ್ಯನಂದ ಅನ್ನುವ ಕಾವ್ಯನಾಮದಿಂದ ಡಾ. ಸಿದಯ್ಯ ಪುರಾಣಿಕರು ಮಾನವನ ಜೀವನ ಹಾಗು ಮಾನವೀಯ ಮೌಲ್ಯತೆ ಕುರಿತು ಕವಿತೆಯಿಂದ ಅಮೂಲ್ಯ ಸಂದೇಶವನ್ನು ನೀಡಿದ್ದಾರೆ. ಅವರು ಬರೆದ ಕವಿತೆ ಸಾಲುಗಳು ಹೀಗಿವೆ.

ಓದಿ ಬ್ರಾಹ್ಮಣನಾಗು, ಕಾದಿ ಕ್ಷತ್ರಿಯನಾಗು, ಶೂದ್ರ ವೈಶ್ಯನೇ ಆಗು, ದುಡಿದು ಗಳಿಸಿ ಏನಾದರೂ ಆಗು, ನಿನ್ನೊಲವಿನಂತಾಗು, ಏನಾದರೂ ಸರಿಯೇ ಮೊದಲು ಮಾನವನಾಗು.

ಹಿಂದೂ ಮುಸ್ಲಿಮನಾಗು, ಬೌದ್ಧ ಕ್ರಿಸ್ತನೇ ಆಗು, ಚಾರ್ವಾಕನೇ ಆಗು, ಏನಾದರೂ ಸರಿಯೇ ಮೊದಲ ಮಾನವನಾಗು.

ರಾಜಕಾರಣಿಯಾಗು, ರಾಷ್ಟ್ರ ಭಕ್ತನೇ ಆಗು, ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು, ಏನಾದರೂ ಆಗು ನೀ ಬಯಸಿದಂತಾಗು, ಏನಾದರೂ ಸರಿಯೇ ಮೊದಲು ಮಾನವನಾಗು.

ಇತ್ತೀಚಿನ ದಿನಮಾನದ ಪರಿಸ್ಥಿತಿಯನ್ನು ಅರಿತು ಡಾ. ಸಿದ್ದಯ್ಯ ಪುರಾಣಿಕ ಅವರು ಬಹಳ ನೋವಿನಿಂದ ಈ ಕವಿತೆಯನ್ನು ಬರೆದಿದ್ದಾರೆ ಅನ್ನಬಹುದು.

ಹೌದು ಆತ್ಮೀಯರೇ ಇವತ್ತಿನ ದಿನಮಾನದಲ್ಲಿ ನಾವು ನಮ್ಮ ಸುತ್ತಲಿನ ಪರಿಸರದಲ್ಲಿ ನೋಡಿದಾಗ ನಡೆಯುತ್ತಿರುವ, ಕೊಲೆ ಸುಲಿಗೆ, ದರೋಡೆ, ಅತ್ಯಾಚಾರ, ಅನಾಚಾರ, ಜಾತಿ ರಾಜಕಾರಣ ವೈಷ್ಯಮ್ಯ, ಇತ್ಯಾದಿ ಹೇಸಿಗೆಯ ಕೃತ್ಯಗಳು ಕಂಡಾಗ ಮಾನವಂತ ಮನುಷ್ಯರ ಮನಸು ಅತ್ಯಂತ ನೋವನ್ನು ಅನುಭವಿಸುತ್ತದೆ.

ಪ್ರಾಣಿಗಳಿಗೆ ಬುದ್ದಿ ಕಡಿಮೆ ಇದ್ದರೂ ಅವು ಯಾರಿಗೂ ತೊಂದರೆ ಕೊಡದೆ ಪರಿಸರಕ್ಕೆ ತಕ್ಕಂತೆ ಬದುಕುವ ಕಲೆಯನ್ನು ಅರಿತು ಪರಿಸರಕ್ಕೆ ಹೊಂದಿಕೊಂಡು ಸಾಗುತ್ತವೆ. ಆದರೇ ಮನುಷ್ಯರಾದ ನಾವುಗಳು ಬುದ್ದಿ ಜೀವಿಗಳಾದ ನಾವುಗಳು ಬುದ್ದಿ ಭ್ರಷ್ಟರಾದವರಂತೆ ವರ್ತಿಸಿ, ಮಾನವೀಯತೆಯನ್ನು ಮರೆತು, ದ್ವೇಷ, ಅಸೂಯೆ, ಮತ್ಸರವನ್ನು ಮನದಲ್ಲಿ ತುಂಬಿಕೊಂಡು ಕ್ರೂರ ಮೃಗಗಳಂತೆ ಮೆರೆದಾಡುತಿದ್ದೇವೆ, ನಮ್ಮ ಸ್ವಾರ್ಥ ಸಾಧನೆಗಾಗಿ ಒಬ್ಬರ ಮೇಲೆ ಒಬ್ಬರು ದ್ವೇಷ ಸಾಧಿಸುತ್ತಿದ್ದೇವೆ, ಮನುಷ್ಯರೆನ್ನುವದನ್ನು ಮರೆತು ಜಾತಿ ಜಂಜಾಟದಲ್ಲಿ ಮಿಂದೆದ್ದು ನಮ್ಮ ಬದುಕನ್ನು ನಾಶ ಪಡಿಸಿಕೊಳ್ಳುತಿದ್ದೇವೆ. ಅಹಂಕಾರ, ಮದ ಮತ್ಸರಗಳ ಮೋಹಕ್ಕೆ ಬಲಿಯಾಗಿ ನಮ್ಮ ಅರಿವು ಅನ್ನುವ ಬೆಳಕಿನ ಕಿಟಕಿಂ–ಯ ಮುಚ್ಚಿಕೊಂಡು ಮತಿ ಬ್ರಮಣೆಯಾದವರಂತೆ ಮೈ ಮರೆತು ಮೂರ್ಖರಾಗಿ ಮೆರೆಯುತ್ತಿದ್ದೇವೆ.

ಉದಾಹರಣೆಗಾಗಿ ಇತ್ತೀಚಿನ ಇರಾನ್, ಇಸ್ರೇಲ್, ಹಾಗು ಅಮೇರಿಕಾನಡುವಿನ ಯುದ್ಧವನ್ನೇತೆಗೆದುಕೊಳ್ಳಿ, ಯುದ್ಧದ ಪರಿಣಾಮ ಅನೇಕ ಮಕ್ಕಳು, ಯುವಕರು ಜನಸಾಮಾನ್ಯರು ಬಲಿಯಾದರು, ಪಶ್ಚಿಮ ಬಂಗಾಳ ಚುನಾವಣೆ ಸಂಧರ್ಭದಲ್ಲಿ ಹಿಂಸಾಚಾರ ಭುಗಿಲೆದ್ದು ಅನೇಕರು ತಮ್ಮ ಪ್ರಾಣ ಆಸ್ತಿ ಪಾಸ್ತಿಯನ್ನೇ ಕಳೆದುಕೊಂಡರು. ಇದಕ್ಕೆಲ್ಲ ಕಾರಣ ನಮ್ಮಲ್ಲಿ ತುಂಬಿರುವ ನಾನು ಅನ್ನುವ ಅಹಂಕಾರ, ಮದ, ಮತ್ಸರ ಹಾಗು ನಮ್ಮಲ್ಲಿರುವ ಸಂಸ್ಕಾರ, ಸಂಸ್ಕೃತಿಯ ಕೊರತೆ. ಹಾಗಾಗಿ "ಸಾರ ಸಜ್ಜನರ ಸಂಘ ಹೆಜ್ಜೇನು ಸವಿದಂತೆ" ಅನ್ನುವ ಹಿರಿಯರ ಮಾತಿನಂತೆ ಮನುಷ್ಯರಾದ ನಾವುಗಳು ಒಳ್ಳೆಯವರ ಸಂಗ ಮಾಡಬೇಕು. ಕವಿ ಡಾ. ಸಿದ್ದಯ್ಯ ಪುರಾಣಿಕರ ಮಾತಿನಂತೆ ನಾವುಗಳು ಜೀವನದಲ್ಲಿ ಎಷ್ಟೇ ದೊಡ್ಡ ಅಧಿಕಾರಿಯಾದರು ಸರಿ, ಶ್ರೀಮಂತನಾದರೂ ಸರಿ, ಆದರೆ ನಮ್ಮಲ್ಲಿ ಇರಬೇಕಾದದ್ದು ಮುಖ್ಯವಾಗಿ ಮಾನವೀಯತೆಯ ಗುಣ ಆ ಮಾನವೀಯತೆ ಗುಣ ಇಲ್ಲದಿದ್ದರೆ ನಮ್ಮಲ್ಲಿ ಎಷ್ಟೇ ಸಂಪತ್ತು ಇದ್ದರೂ ನಮ್ಮ ಬದುಕು ವ್ಯರ್ಥ. ಹಾಗಾಗಿ ನಾವು ಬಡವರಾದರು ಸರಿ ಶ್ರೀಮಂತರಾದರು ಸರಿ ವಿಶೇಷವಾಗಿ ನಮ್ಮಲ್ಲಿ ಇರಬೇಕಾದದ್ದು ಮಾನವೀಯತೆಯ ಮೌಲ್ಯಗಳು, ಮತ್ತು ಸಂಸ್ಕಾರ.



– ಓಂಕಾರ ಪಾಟೀಲ

ಕಾರ್ಯದರ್ಶಿಗಳು :ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಬೀದರ.

# ಕಾನೂನು ಬಾಹಿರವಾಗಿ ಮರ ಕಡಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದಲ್ಲಿ (ಅರಣ್ಯ ಇಲಾಖೆ) ಅನುಮತಿ ಪಡೆಯದೆ ಕಾನೂನು ಬಾಹಿರವಾಗಿ ಮರಗಳನ್ನು ಕಟಾವು ಮಾಡಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಂಡು ಹಾಗು NGT(National Green Tribunal) ಅದೇಶ ಉಲ್ಲಂಘಿಸಿದ ಗುತ್ತಿಗೆಧಾರರನ್ನು ಕಪ್ಪು ಪಟ್ಟಿ(Black list) ಸೇರಿಸುವ ಬಗ್ಗೆ. ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಿದ್ದೇಶ ಊಳೂರು ಸಮಾಜಿಕ ಹೋರಾಟಗಾರರು ನಾನು ಈ ಮೂಲಕ ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಉಲ್ಲೇಖ (1)ರ ಅನ್ವಯ ಸ್ಪಷ್ಟೀಕರಣ ನೀಡಲು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ ಬಳ್ಳಾರಿ ರವರಿಗೆ ಪತ್ರ ಬರೆದಿರುತ್ತಾರೆ. ಅಂದರೆ ಲೋಕೋಪಯೋಗಿ ಇಲಾಖೆಯವರು ಇದುವರೆಗೂ ಸದರಿ ಪತ್ರಕ್ಕೆ ಸ್ಪಷ್ಟೀಕರಣ ನೀಡಿರುವುದಿಲ್ಲ ಮತ್ತು ಧೃಢಿಕೃತ ನಕಾಶೆಯನ್ನು ಸಹ ನೀಡದೇ ಇರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಾಂತಾಗಿದೆ. ಅಧಿಕಾರಿಗಳು ಸ್ಪಷ್ಟ ನಿರ್ಲಕ್ಷ್ಯದಿಂದ ಈಗಾಗಲೇ 25 ಮರಗಳನ್ನು ಅನಧಿಕೃತವಾಗಿ ಕಡಿದು ಹಾಕಿರುತ್ತಾರೆ. ಬಳ್ಳಾರಿ ಬಿರು ಬಿಸಿಲಿನ ಬೇಗೆಯಲ್ಲಿ ಬೇಯುತ್ತಿರುವ ಬಳ್ಳಾರಿ ಜನತೆಗೆ ಶುದ್ದ ಗಾಳಿ, ನೆರಳು ಇಲ್ಲದ್ದಂತೆ ಮಾಡಿರುವ ಲೋಕೋಪಯೋಗಿ ಇಲಾಖೆ ಹಾಗು ಸದರಿ ಕಾಮಗಾರಿಯ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಮತ್ತು ಅರಣ್ಯ ಇಲಾಖೆ ಕ್ರಮಕೈಗೊಳ್ಳಬೇಕು. ಉಲ್ಲೇ(2) ಅನ್ವಯ ವಿವಿಧ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಗಳ ಪ್ರಕಾರ ಅನಧಿಕೃತವಾಗಿ ಅರಣ್ಯ ಇಲಾಖೆ ನಿಯಮಗಳು ಮತ್ತು ಆದೇಶಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಅನುಮತಿ ಇಲ್ಲದೆ ಆಕ್ರಮವಾಗಿ 25 ಮರಗಳನ್ನು ಕಡಿದು ಹಾಕಿರುತ್ತಾರೆ. ಉಲ್ಲೇಖ (1) ಮತ್ತು (2)ರ ಅನ್ವಯ ಅರಣ್ಯ ಇಲಾಖೆ ಮತ್ತು ದಿನಪತ್ರಿಕೆಗಳ ವರದಿಗಳಿಂದಾದರೂ ಎಚ್ಚೆತ್ತುಕೊಂಡು ಮಾನ್ಯ ಘನ ಸರ್ಕಾರ ಅರಣ್ಯ ಇಲಾಖೆ ಹಾಗೂ ಜಿಲ್ಲಾಡಳಿತ ಸಂಬಂಧಿಸಿದ ಅಧಿಕಾರಿಗಳು ಸದರಿ ಕಾಮಗಾರಿಗೆ ಬಲಿಯಾಗುವ ಇನ್ನೂಳಿದ ಮರ(ವೃಕ್ಷ)ಗಳನ್ನಾದರೂ ಉಳಿಸಿ–ಬೆಳೆಸಿ, ಬಳ್ಳಾರಿ ಬಿಸಿಲಿಗೆ ಬೇಗೆಯಲ್ಲಿ ಬೇಯುತ್ತಿರುವ ಬಳ್ಳಾರಿ ಜನತೆಗೆ ಶುದ್ದ ಗಾಳಿ, ನೆರಳು ಮತ್ತು ಪಕ್ಷಿಗಳಿಗೆ ನೆಲೆಯಾಗಲು ಅರಣ್ಯ ಇಲಾಖೆಯ ನಿಯಮಗಳನ್ನು ಪಾಲಿಸಿ ಇನ್ನೂಳಿದ ಗಿಡಮರಗಳನ್ನು ಸಂರಕ್ಷಿಸಿ ಮತ್ತು ಈಗಾಗಲೇ ಕಡಿದಿರುವ ಮರಗಳಿಗೆ ಪರ್ಯಾಯವಾಗಿ 1ಮಕ್ಕೆ 10 ಮರಗಳನ್ನು ನೆಟ್ಟು, ಬಳ್ಳಾರಿ ನಗರದ ಹಸಿರೀಕರಣಕ್ಕೆ ಅನುವು ಮಾಡಿಕೊಡಲು ಕೋರುತ್ತೇನೆ. ಈ ಮೇಲಿನ ಎಲ್ಲಾ ಪ್ರಸ್ತಾಪಿತ ಅಂಶಗಳನ್ನು ಸೂಕ್ಷ್ಮವಾಗಿ ಮತ್ತು ಕೂಲಂಕುಷವಾಗಿ ಪರಿಶೀಲಿಸಿ ಘನ ಸರ್ಕಾರ, ಅರಣ್ಯ ಇಲಾಖೆ, ಕರ್ನಾಟಕ ಅರಣ್ಯ ಅಧಿನಿಯಮ 1969 ರಡಿ ಮರ ಕಡಿತ ಉಲ್ಲಂಘನೆಯಾದರೆ ಸಂಬಂಧಪಟ್ಟ ಆದೀಕಾರಿಯದ್ದೇ ನೇರ ಹೋಣೆಗಾರರನ್ನಾಗಿ ಮಾಡುವುದು. NGT(National Green Tribunal Act 2010) ರ ನಿಯಮಗಳ ಪ್ರಕಾರ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಯಮಗಳು ಉಲ್ಲಂಘಿಸಿದ ಗುತ್ತಿಗೆದಾರರನ್ನು ಸರ್ಕಾರಿ ಟೆಂಡರ್ ನಿಂದ ನಿಷೇಧಿಸಬಹುದು, ಮತ್ತು ನಿಯಮಗಳ ಆದೇಶದಂತೆ ತತ್ಷಣವೇ ಕಾಮಗಾರಿಗಳನ್ನು ಸ್ಥಗಿತಗೋಳಿಸಿಬಹುದು ಹಾಗು ಗುತ್ತಿಗೆದಾರರನ್ನು ಕಪ್ಪುಪಟ್ಟಿ(Black List ) ಗೆ, ಸೇರಿಸಬಹುದಾಗಿದೆ. ಆದುದ್ದರಿಂದ, ಕರ್ತವ್ಯಲೋಪ/ನಿರ್ಲಕ್ಷ್ಯ ಎಸಗಿರುವ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ನಿರ್ಧಾಕ್ಷಣ್ಯ ಕ್ರಮಕೈಗೊಂಡು ಸಂಬಂಧಿಸಿದ ಗುತ್ತಿಗೆದಾರರನ್ನು ಕಪ್ಪು ಪಟ್ಟಿ(Black List)ಗೆ ಸೇರಿಸಬೇಕೆಂದು ಕೋರಿದ್ದಾರೆ.

# ಭಾರತೀಯ ರೈಲ್ವೆಯು ಕಲಬುರಗಿ ಮೂಲಕ ಎಸ್‌ಎಂವಿಟಿ ಬೆಂಗಳೂರು ಬೀದರ್ ದ್ವೈ-ವಾರದ ವಿಶೇಷ ರೈಲು ಶಾಶ್ವತ ರೈಲು ಸೇವೆಯಾಗಿ ಕ್ರಮಬದ್ಧ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಮೇ.12 : ಭಾರತೀಯ ರೈಲ್ವೆಯು ಪ್ರಯಾಣಿಕರ ಬೇಡಿಕೆಯ ಮೇರೆಗೆ ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈ–ವಾರದ ವಿಶೇಷ ರೈಲು ಸೇವೆಗಳನ್ನು ಶಾಶ್ವತ ರೈಲುಗಳಾಗಿ ಕ್ರಮಬದ್ಧಗೊಳಿಸಲಿದೆ. ಈ ಸೇವೆಯಿಂದ ವರ್ಷವಿಡೀ ಪ್ರಯಾಣಿಕರಿಗೆ ಸಂಪರ್ಕ ಮತ್ತು ಸುಧಾರಿತ ಪ್ರಯಾಣ ಯೋಜನೆಯನ್ನು ಖಚಿತಪಡಿಸುತ್ತದೆ ಎಂದು ಮಧ್ಯ ರೈಲ್ವೆ ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ಇಲಾಖೆಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಈ ರೈಲು ಸೇವೆಗಳ ಕ್ರಮಬದ್ಧಗೊಳಿಸುವಿಕೆಯು ಕರ್ನಾಟಕ ಮತ್ತು ಆಂಧ್ರಪ್ರದೇಶದಾದ್ಯಂತ ಪ್ರಮುಖ ನಗರ ಮತ್ತು ಪ್ರಮುಖ ವಾಣಿಜ್ಯ, ಶೈಕ್ಷಣಿಕ, ತೀರ್ಥಯಾತ್ರೆ ಮತ್ತು ಆರೋಗ್ಯ ಕೇಂದ್ರಗಳ ನಡುವೆ ಪ್ರಯಾಣಿಸುವ ಪ್ರಯಾಣಿಕರಿಗೆ ಪ್ರಯೋಜನವನ್ನು ನೀಡುತ್ತದೆ. ಈ ರೈಲುಗಳು ವಿಶೇಷವಾಗಿ ಸೋಲಾಪುರ ವಿಭಾಗದ ಕಲಬುರಗಿ, ಶಹಾಬಾದ್ ಮತ್ತು ವಾಡಿ ನಿಲ್ದಾಣಗಳಿಂದ ಬೆಂಗಳೂರು ಮತ್ತು ಇತರ ಮಧ್ಯಂತರ ನಿಲ್ದಾಣಗಳಿಗೆ ಪ್ರಯಾಣಿಕರಿಗೆ ವಿಶ್ವಾಸಾರ್ಹ ಮತ್ತು ಆರಾಮದಾಯಕ ರೈಲು ಸಂಪರ್ಕವನ್ನು ಹೆಚ್ಚಿಸುತ್ತವೆ. ಈ ಸೇವೆಯು ಕಲ್ಯಾಣ ಕರ್ನಾಟಕ ಎಂದೂ ಕರೆಯಲ್ಪಡುವ ಉತ್ತರ ಕರ್ನಾಟಕ ಮತ್ತು ಬೆಂಗಳೂರಿನ ನಡುವೆ ಪ್ರಯಾಣಿಸುವ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು, ವ್ಯಾಪಾರ ಪ್ರಯಾಣಿಕರು, ಯಾತ್ರಿಕರು ಮತ್ತು ಕುಟುಂಬಗಳನ್ನು ಪೂರೈಸುವ ನಿರೀಕ್ಷೆಯಿದೆ. ಜೊತೆಗೆ ಗುಂಟಕಲ್, ರಾಯಚೂರು ಮತ್ತು ಧರ್ಮಾವರಂನಂತಹ ಪ್ರಮುಖ ಜಂಕ್ಷನ್‌ಗಳಿಗೆ ಪ್ರವೇಶವನ್ನು ಸುಧಾರಿಸುತ್ತದೆ.

ಅಸ್ತಿತ್ವದಲ್ಲಿರುವ ವಿಶೇಷ ರೈಲು ಸಂಖ್ಯೆ 06539 ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ವಿಶೇಷ ರೈಲು ಸಂಖ್ಯೆ 16559 ಆಗಿ ಪರಿವರ್ತಿಸಿ ದಿನಾಂಕ 15.05.2026 ರಿಂದ ಜಾರಿಗೆ ಬರುವಂತೆ ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ವಿಶೇಷ ರೈಲು ಎಂದು ಶಾಶ್ವತ ಸೇವೆಗೆ ಕ್ರಮಬದ್ಧಗೊಳಿಸಲಾಗುತ್ತದೆ. ಅದೇರೀತಿ ಅಸ್ತಿತ್ವದಲ್ಲಿರುವ ವಿಶೇಷ ರೈಲು ಸಂಖ್ಯೆ 06540 ಬೀದರ್–ರೈಲು ಸಂಖ್ಯೆ 16560 ರೈಲಾಗಿ ಪರಿವರ್ತಿಸಿ ಬೀದರ್– ಎಸ್‌ಎಂವಿಟಿ ಬೆಂಗಳೂರು ದ್ವೈವಾರದ ವಿಶೇಷ ರೈಲಿನ ಸೇವೆ ಶಾಶ್ವತವಾಗಿ ಕ್ರಮಬದ್ಧಗೊಳಿಸಲಾಗುತ್ತದೆ.

ರೈಲು ಸಂಖ್ಯೆ 16559 ಎಸ್‌ಎಂವಿಟಿ ಬೆಂಗಳೂರು–ಬೀದರ್ ದ್ವೈವಾರದ ಪ್ರತಿ ಶುಕ್ರವಾರ ಮತ್ತು ಭಾನುವಾರ ರಾತ್ರಿ 21:15 ಕ್ಕೆ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರಿನಿಂದ ಹೊರಟು ಮರುದಿನ ಮಧ್ಯಾಹ್ನ 12:15 ಕ್ಕೆ ಬೀದರಿಗೆ ತಲುಪಲಿದೆ.

ರೈಲು ಸಂಖ್ಯೆ 16560 ಬೀದರ್– ಎಸ್‌ಎಂವಿಟಿ ಬೆಂಗಳೂರು ದ್ವೈವಾರಕ್ಕೊಮ್ಮೆ ಪ್ರತಿ ಶನಿವಾರ ಮತ್ತು ಸೋಮವಾರ ಮಧ್ಯಾಹ್ನ 2:00 ಗಂಟೆಗೆ ಬೀದರಿನಿಂದ ಹೊರಟು ಮರುದಿನ ಬೆಳಿಗ್ಗೆ 04:00 ಗಂಟೆಗೆ ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ತಲುಪಲಿದೆ.

ಈ ರೈಲುಗಳು ಹುಮನಾಬಾದ, ಕಲಬುರಗಿ, ಶಹಾಬಾದ್, ವಾಡಿ, ಯಾದಗಿರಿ, ಕೃಷ್ಣ, ರಾಯಚೂರು, ಮಂತ್ರಾಲಯ ರಸ್ತೆ, ಅದೋನಿ, ಗುಂತಕಲ್, ಅನಂತಪುರ, ಧರ್ಮಾವರಂ, ಹಿಂದೂಪುರ ಮತ್ತು ಯಲಹಂಕಗಳಲ್ಲಿ ನಿಲುಗಡೆ ಹೊಂದಲಿವೆ.



ಈ ರೈಲಿನಲ್ಲಿ 1 AC-II ಶ್ರೇಣಿ, 2 AC-ಖಖಖ ಶ್ರೇಣಿ, 11 ಸ್ಲೀಪರ್ ವರ್ಗ, 4 ಸಾಮಾನ್ಯ ಎರಡನೇ ದರ್ಜೆ ಮತ್ತು 2 ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳು. (20 ಕೋಚ್‌ಗಳು) ಇರುತ್ತವೆ.

ನಿಯಮಿತಗೊಳಿಸಿದ ದ್ವೈವಾರಕ್ಕೊಮ್ಮೆ ನಡೆಯುವ ಈ ರೈಲುಗಳಿಗೆ ಕಾಯ್ದಿರಿಸುವಿಕೆ ಎಲ್ಲಾ ಗಣಕೀಕೃತ ಮೀಸಲಾತಿ ಕೇಂದ್ರಗಳಲ್ಲಿ ಮತ್ತು ವೆಬ್‌ಸೈಟ್ www.irctc.co.in ನಲ್ಲಿ ಲಭ್ಯವಿರುತ್ತವೆ.

ಕಾಯ್ದಿರಿಸದ ಬೋಗಿಗಳ ಬುಕಿಂಗ್ ಅನ್ನು ನಿಲ್ದಾಣಗಳಲ್ಲಿನ ಬುಕಿಂಗ್ ಕೌಂಟರುಗಳ ಮೂಲಕ ಮತ್ತು ರೈಲ್‌ಒನ್ ಅಪ್ಲಿಕೇಶನ್ ಮೂಲಕವೂ ಮಾಡಬಹುದು. ಅನಾನುಕೂಲತೆಯನ್ನು ತಪ್ಪಿಸಲು ಪ್ರಯಾಣಿಕರು ಮಾನ್ಯ ಟಿಕೆಟ್‌ಗಳೊಂದಿಗೆ ಪ್ರಯಾಣಿಸಲು ವಿನಂತಿಸಲಾಗಿದೆ.

ಹೊಸದಾಗಿ ಕ್ರಮಬದ್ಧಗೊಳಿಸಲಾದ ಶಾಶ್ವತ ಎರಡು ವಾರಗಳ ರೈಲುಗಳ ಅನುಕೂಲಕರ ಮತ್ತು ವಿಶ್ವಾಸಾರ್ಹಗೆ ಮನವಿ ಮಾಡುತ್ತದೆ.

ಈ ರೈಲುಗಳ ಸೇವೆಗಳನ್ನು ಬಳಸಿಕೊಳ್ಳುವಂತೆ ಸೋಲಾಪುರ ವಿಭಾಗವು ಪ್ರದೇಶದ ಪ್ರಯಾಣಿಕರಿಗೆ ಮನವಿ ಮಾಡಿದೆ. ರೈಲುಗಳ ನಿಲುಗಡೆ ವಿವರ ಮತ್ತು ಸಮಯಕ್ಕಾಗಿ ದಯವಿಟ್ಟು www.enquiry.indianrail.gov.in ಗೆ ಭೇಟಿ ನೀಡಿ ಅಥವಾ ರೈಲ್‌ಒನ್ ಅಪ್ಲಿಕೇಶನ್ ಅಥವಾ NTES ಅಪ್ಲಿಕೇಶನ್‌ಡೌನ್‌ಲೋಡ್‌ಮಾಡಿಕೊಳ್ಳಲು ಕೋರಿದೆ.

# ೮ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಕ್ಕೆ ಸುವರ್ಣಾವಕಾಶ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಶ್ರೀ ಗುರು ಸಾರ್ವಭೌಮ ಸಂಸ್ಕೃತ ವಿದ್ಯಾಪೀಠ ಮಂತ್ರಾಲಯ ಹಾಗೂ ರಾಯಚೂರಿನಲ್ಲಿ 2026–27ನೇ ಸಾಲಿನ ವಿದ್ಯಾಪೀಠದ ಪ್ರವೇಶ ಪ್ರಾರಂಭವಾಗಿದ್ದು, ಜೂ.15 ರಿಂದ ವಿದ್ಯಾಪೀಠದ ತರಗತಿಗಳು ಪುನಃ ಪ್ರಾರಂಭವಾಗಲಿವೆ ಎಂದು ಬಳ್ಳಾರಿಯ ಶ್ರೀ ರಾಘವೇಂದ್ರ ಸ್ವಾಮಿ ಶ್ರೀಮಠದ ಆಡಳಿತಾಧಿಕಾರಿ ಪಂ.ಪ್ರಸನ್ನಾಚಾರ ಅವರು ತಿಳಿಸಿದ್ದಾರೆ. 8 ವರ್ಷ ಮೇಲ್ಪಟ್ಟ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಪ್ರವೇಶಕ್ಕೆ ಸುವರ್ಣಾವಕಾಶ. ಉಚಿತ ಲೌಕಿಕ ಶಿಕ್ಷಣ ಜೊತೆಗೆ, ಉಚಿತ ಭೋಜನ ವ್ಯವಸ್ಥೆ, ವಸ್ತ್ರ, ವಸತಿ ಸಂಪೂರ್ಣ ಉಚಿತವಾಗಿದೆ ಹಾಗೂ ಅನುಮತಿ ಪಡೆದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪ್ರಥಮ, ಕಾವ್ಯ, ಸಾಹಿತ್ಯ, ಬಿ.ಎ., ಎಂ.ಎ. ಪರೀಕ್ಷೆಗಳನ್ನು ವಿದ್ಯಾಲಯದಲ್ಲಿ ನಡೆಸಲಾಗುವುದು. ವೇದ, ಕಾವ್ಯ, ಸಾಹಿತ್ಯ, ವ್ಯಾಕರಣ, ತರ್ಕ, ವೇದಾಂತ, ಪೌರಹಿತ್ಯ, ಜೋತಿಷ್ಯ ಶಾಸ್ತ್ರಗಳ ಅಧ್ಯಯನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. 2026–27ನೇ ಸಾಲಿನ ವಿದ್ಯಾಪೀಠದ ಪ್ರವೇಶಗಳು ಪ್ರಾರಂಭವಾಗಿದ್ದು, ಜೂ.15 ರಿಂದ ವಿದ್ಯಾಪೀಠದ ತರಗತಿಗಳು ಪ್ರಾರಂಭವಾಗಿವೆ. ಕೂಡಲೇ ಆಸಕ್ತರು, ಹೆಚ್ಚಿನ ಮಾಹಿತಿಗಾಗಿ ಡಾ.ಎನ್. ವಾದಿರಾಜಾಚಾರ್ಯ 9492570190,

ವಿ.ಎನ್. ಆರ್. ದ್ವಾರಕನಾಥಾಚಾರ್ಯ




9740637824, ರಾಮಚಂದ್ರ ಆಚಾರ್ಯ ರಿತ್ತಿ 9900507154,

ವಿ.ಪವನಾಚಾರ್ಯ 7019717706 ಅವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ನಿಧನ ವಾರ್ತೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ನಗರದ ಹಿರಿಯ ಜೀವಿ ಕಮಲಾದೇವಿ ಸ್ವ. ಅಮರಚಂದ ಬಿಯಾಣಿ (81) ವಯೋಸಹಜ ಕಾಯಿಲೆಯಿಂದ ಮೇ 12 ರಂದು ಮುಂಜಾನೆ ನಿಧನರಾಗಿದ್ದಾರೆ. ಮೃತರು ವ್ಹಿಎಚ್‌ಪಿ ಕೇಂದ್ರೀಯ ಟ್ರಸ್ಟಿ ಜೈಕಿಶನ ಬಿಯಾಣಿ ಸೇರಿದಂತೆ 06 ಗಂಡು, 03 ಹೆಣ್ಮಕ್ಕಳು ಮತ್ತು ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

ಅಂತ್ಯಕ್ರಿಯೆ: ಮೃತರ ಅಂತ್ಯಕ್ರಿಯೆ ಮೇ 12 ರ ಮಂಗಳವಾರ ಸಾಯಂಕಾಲ ಅಪಾರ ದು:ಖತಪ್ತ ಜನರ ಮಧ್ಯೆ ಮಾಸುಮಪಾಷಾ ರುದ್ರಭೂಮಿಯಲ್ಲಿ ನೆರವೇರಿತು. ಶೋಕಸಂತಾಪ: ಕಮಲಾದೇವಿ ನಿಧನಕ್ಕೆ ನಾಡೋಜ ಡಾ.ಬಸವಲಿಂಗಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಸಚಿವ ಈಶ್ವರ ಖಂಡ್ರೆ, ಸಂಸದ ಸಾಗರ ಖಂಡ್ರೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಯುವನಾಯಕ ಪ್ರಸನ್ನ ಖಂಡ್ರೆ ಶೋಕವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಕುಟುಂಬಸ್ಥರಿಗೆ ದು:ಖ ಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ.

# ಮೇ 13ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.12–ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ 11ಕೆ.ವಿ. ತೆಂಗಳಿ ಫೀಡರ್ ವ್ಯಾಪ್ತಿಯಲ್ಲಿನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಇದೇ ಮೇ 13 ರಂದು ಬುಧವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

# ತಾಲೂಕು ಮಟ್ಟದ ಜನಸಂಪರ್ಕಸಭೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಉಪವಿಭಾಗದ ವತಿಯಿಂದ ನಗರ ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಜನಸಂಪರ್ಕ ಸಭೆ ನಡೆಯಿತು.

ಸಭೆಯಲ್ಲಿ ನಂತರ ಮಾತನಾಡಿ ಸಾರ್ವಜನಿಕರಿಂದ ಸಮಸ್ಯಗಳನ್ನು ಆಲಿಸಿದರು. ಎಲ್ಲ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಕಂಡುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿ ಹೆಚ್ಚು ನಿಗಾವಹಿಸಲು ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.ಪ್ರತಿ ದೂರನ್ನು ತಾಳ್ಮೆಯಿಂದ ಆಲಿಸಿದ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು, ಸ್ಥಳದಲ್ಲೇ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ಕರೆ ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಖಡಕ್ ಸೂಚನೆ ನೀಡಿದರು.

"ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುವುದೇ ಪೊಲೀಸ್ ಇಲಾಖೆಯ ಮೊದಲ ಆದ್ಯತೆ. ದೂರು ನೀಡಲು ಯಾರೂ ಹಿಂಜರಿಯಬೇಡಿ. ನಿಮ್ಮ ಜೊತೆ ಪೊಲೀಸ್ ಇಲಾಖೆ ಸದಾ ಇದೆ" ಎಂದು ಭರವಸೆ ನೀಡಿದರು

ನಗರದ, ಗ್ರಾಮೀಣ ಪ್ರದೇಶದ ರಕ್ಷಣೆಯ ದೃಷ್ಟಿ ಯಿಂದ ದೂರುಗಳನ್ನು, ಸಲಹೆ ಗಳನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸಲು ಯೋಜನೆ ರೂಪಿಸಿ ಕಾರ್ಯಗತ ಗೊಳಿಸ ಲಾಗುವುದು ಎಂದರು.ಅಪ್ ಪಕ್ಷದ ತಾಲೂಕು ಅಧ್ಯಕ್ಷ ಜಿ. ಮೋಹಿಯುದ್ದಿನ್ ಮಾತನಾಡಿ ಬಜಾರ್ ರಸ್ತೆ ಹಾಗು ಬಸ್ ಸ್ಟಾಂಡ್ ರಸ್ತೆ ಯಲ್ಲಿನ ಸಮಸ್ಯೆ ವಿವರಿಸಿದರು.ಇಂತ ಜಾಗದಲ್ಲಿಜನಸಂದಣಿ, ಚುಚಿರಿಚಿ–ತಚಿರು ಜಾಸ್ತಿ. ಇಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಗ್ರಾಮೀಣರು, ಸಂತೆ ವ್ಯಾಪಾರಕ್ಕೇ ದ್ವಿಚಕ್ರ ವಾಹದಲ್ಲಿ ಬರವವರು ಹೆಲ್ಮೆಟ್ ಇಲ್ಲದೆ ಪ್ರಯಾಣಿಸಿ ಯಥೇಚ್ಚ ದಂಡ ಕಟ್ಟುತ್ತಿದ್ದಾರೆ. ಇಲ್ಲಿ ಸಿಸಿ ಕ್ಯಾಮರಾ ಅಳವಡಿಸುವ ಬದಲು ಹುಣಸೂರಿಗೆ ಪ್ರವೇಶಿಸುವ ಕಡೆ ಅಳವಡಿಸಬೇಕು ಎಂದು ವಿನಂತಿಸಿದರು.


ಮೈಸೂರು ಜಿಲ್ಲಾ ಮಾಹಿತಿಹಕ್ಕು ಮತ್ತು ಮಾನವ ಹಕ್ಕು ಸಂರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಇಂಟೆಕ್ ರಾಜು ಮಾತನಾಡಿ, ನಗರವ್ಯಾಪ್ತಿಯಲ್ಲಿ ಸಂಚಾರಿದಟ್ಟಣೆ ಹೆಚ್ಚಿದ್ದು ಅಪಘಾತಗಳು ನಿರಂತರವಾಗಿ ನಡೆದಿವೆ. ನಗರದ ಕಲ್ಪತರು ವೃತ್ತ, ಕೋರ್ಟ್ ವೃತ್ತ, ಕಲ್ಕುಣಿಕೆ ವೃತ್ತ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ಸಿಗ್ನಲ್ ಲೈಟ್ ಅಳವಡಿಸಲು ಒತ್ತಾಯಿಸಿದರು. ಸಂಚಾರ ಸಮಸ್ಯೆ ಪರಿಹರಿಸಲು ಸ್ಥಳೀಯ ಆಡಳಿತದೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು ಹಾಗೂ ಇಲಾಖೆ ವತಿಯಿಂದ ಸಿಗ್ನಲ್ ಲೈಟ್ ಅಳವಡಿಕೆಗೆ ಕ್ರಮವಹಿಸಲಾಗುವುದೆಂದು ಎಸ್‌ಪಿ ಭರವಸೆ ನೀಡಿದರು.

ಈ ಸಂದರ್ಭದಲ್ಲ ಡಿ ವೈ ಎಸ್ ಪಿ ರವಿ ಗ್ರಾಮಾಂತರ ಠಾಣೆಯ, ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ, ನಗರ ಸಬ್ ಇನ್ಸ್‌ಪೆಕ್ಟರ್ ತಾಜುದ್ದೀನ್, ಬಿಳಿಕೆರೆ ಪೊಲೀಸ್ ಇನ್ಸ್‌ಪೆಕ್ಟರ್‌ರಾಧ, , ಗ್ರಾಮಾಂತರ ಪೊಲೀಸ್ ಠಾಣೆಯ ಸನ್ಸ್‌ಪೆಕ್ಟರ್ ರಾಧಾ ಪ್ರಗತಿಪರ ಸಂಘಟನೆಗಳು ಸ್ಥಳೀಯ ವಿವಿಧ ಪಕ್ಷಗಳ ಮುಖಂಡರು ಹಾಜರಿದ್ದರ

# ದದೆಗಲ್ ಬೇವಿನಮರದಲ್ಲಿ ತ್ರಿಮೂರ್ತಿ ದೇವಿಯರ ಪವಾಡ ಭಕ್ತರ ಶಕ್ತಿಕೇಂದ್ರವಾಗಿ ಹೊರಹೊಮ್ಮಿದ ಪುಣ್ಯಕ್ಷೇತ್ರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಗರಕ್ಕೆ ಹೊಂದಿಕೊಂಡ ದದೆಗಲ್ ಗ್ರಾಮದ ಹೊರವಲಯ, ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಬೇವಿನಮರದಲ್ಲಿ ಚಾಮುಂಡೇಶ್ವರಿ, ಮರಿಯಮ್ಮ ಮತ್ತು ಹುಲಿಗೆಮ್ಮ ದೇವಿಯರು ನೆಲೆಸಿ ಸಾವಿರಾರು ಭಕ್ತರ ಸಂಕಷ್ಟಗಳಿಗೆ ಪರಿಹಾರ ನೀಡುತ್ತಿದ್ದು, ಈ ಕ್ಷೇತ್ರವು ಸಧ್ಯ ರಾಜ್ಯದಾದ್ಯಂತ ಪ್ರಸಿದ್ಧಿ ಪಡೆದಿದೆ.



ಕ್ಷೇತ್ರದ ಹಿನ್ನೆಲೆ:

2025ನೇ ಇಸವಿಯ ಕಾರ್ತಿಕ ಅಮಾವಾಸ್ಯೆಯ ದಿನದಂದು ಸಿದ್ಧೇಶ ಪೂಜಾರ ಅವರ ಲೇಔಟ್‌ನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ಬಾಲಕನೊಬ್ಬ ಕರಿನಾಗರ ಮತ್ತು ಬೆಕ್ಕನ್ನು ಹಿಂಬಾಲಿಸಿ ಹೋದಾಗ, ಬೇವಿನಮರದ ಬಳಿ ಅವು ಕಣ್ಮರೆಯಾಗಿ ಮರದ ಬುಡದಿಂದ ಹಾಲು ಚಿಮ್ಮುವ ದೃಶ್ಯ ಕಂಡುಬಂದಿದೆ. ಹಿರಿಯರ ಸಮ್ಮತಿ ಹಾಗೂ ಅರ್ಚಕರ ಮಾರ್ಗದರ್ಶನದ ಮೇರೆಗೆ ಇಲ್ಲಿ ತ್ರಿಮೂರ್ತಿ ದೇವಿಯರು ನೆಲೆಸಿದ್ದಾರೆ ಎಂಬ ನಂಬಿಕೆ ಮೂಡಿ, ಕ್ಷೇತ್ರ ಅಭಿವೃದ್ಧಿಗೊಂಡಿದೆ.

ಕ್ಷೇತ್ರದ ವಿಶೇಷತೆಗಳು:

ಸೇವೆ: ಆರೇಳು ತಲೆಮಾರಿನಿಂದ ಅರ್ಚಕ ಸೇವೆ ಸಲ್ಲಿಸುತ್ತಿರುವ ಸಿದ್ಧೇಶ ಪೂಜಾರ ಕುಟುಂಬದಿಂದ ನಿತ್ಯ ಪೂಜೆ, ಹೋಮ–ಹವನ, ವಿಶೇಷ ಅಲಂಕಾರ, ಅಭಿಷೇಕ. ಭಕ್ತರ ಆಚರಣೆ: ಮನಸ್ಸಿನ ಸಂಕಲ್ಪದೊಂದಿಗೆ ಕಾಯಿ ಕಟ್ಟುವುದು, ಹೇಳಿಕೆ ಕೇಳಿ ತಿಳಿಯುವುದು, ಹೂವು ಪಡೆಯುವುದು. ಪವಾಡದ ಕುರುಹು: ಇತ್ತೀಚೆಗೆ ಬೇವಿನಮರದಲ್ಲಿ ಆನೆ, ಸಿಂಹ, ಏಳು ಹೆಡೆಯ ಸರ್ಪ, ಗಣಪತಿ ಬಿಂಬಗಳು ಮೂಡಿ ಭಕ್ತರ ನಂಬಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿವೆ.ಕಂಕಣ ಭಾಗ್ಯ, ಸಂತಾನ ಫಲ, ನೌಕರಿ, ಆಸ್ತಿ ಕಲಹ ಸೇರಿದಂತೆ ಎಲ್ಲಾ ಸಮಸ್ಯೆಗಳಿಗೂ ತಾಯಿಯರು ಪರಿಹಾರ ಸೂಚಿಸುತ್ತಾರೆ ಎಂಬುದು ಭಕ್ತರ ನಂಬಿಕೆ.ಇಂದಿಗೂ ಕೂಡ ಬೇವಿನಮರದ ಕೊಂಬೆಯಲ್ಲಿ ಹಾಲು ಜಿನುಗುಡುತ್ತಿದೆ.

ಹುಣ್ಣಿಮೆ ಮತ್ತು ಅಮಾವಾಸ್ಯೆಯಂದು ವಿಶೇಷ ಪೂಜೆ ಹಾಗೂ ಪ್ರಸಾದ ವಿನಿಯೋಗ. ಮಂಗಳವಾರ ಮತ್ತು ಶುಕ್ರವಾರದಂದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಸುತ್ತಮುತ್ತಲಿನ ಗ್ರಾಮಗಳ ಜೊತೆಗೆ ವಿವಿಧ ಜಿಲ್ಲೆಗಳಿಂದಲೂ ಭಕ್ತರು ದರ್ಶನಕ್ಕೆ ಬರುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿದ್ದು, ಭಕ್ತಾದಿಗಳು ಕುಟುಂಬ ಸಮೇತರಾಗಿ ಆಗಮಿಸಿ ದೇವಿಯರ ದರ್ಶನ ಪಡೆದು ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

# ಶ್ರೀ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು



ಪಟ್ಟಣದ ಕೋಳಿ ಪೇಟೆಯಲ್ಲಿನ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಕೊನೆಯ ಮಂಗಳವಾರದ ನಿಮಿತ್ಯವಾಗಿ ಶ್ರೀ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರಗಿತು. ದೇವಸ್ಥಾನ ಕಮಿಟಿಯವರು, ರೈತ ಸಮೂಹ ದವರು ಸಮಸ್ತ ಭಕ್ತರು ಐದು ಮಂಗಳವಾರ ತಮ್ಮ ಕೆಲಸಗಳನ್ನು ಬಂದು ಮಾಡಿ, ದೇವಿಯ ಜ್ಞಾನದಲ್ಲಿ ಕಾಲ ಕಳೆಯುತ್ತಾರೆ. ಕೊನೆಯ ಮಂಗಳವಾರ ದಂದು ಶ್ರೀ ದುರ್ಗಾದೇವಿಗೆ ಬೆಳಿಗ್ಗೆಯಿಂದ ಕಾಯಿ, ಕರ್ಪುರ ಅರ್ಪಿಸಿ ಪೂಜೆ ಸಲ್ಲಿಸಿ ಉಡಿ ತುಂಬಿದರು. ಪಟ್ಟಣದಲ್ಲಿನ ವಿವಿಧ ದೇವಸ್ಥಾನಗಳಿಗೆ ,ಕಳಸ ಹಾಗೂ ಡೊಳ್ಳು ಮೇಳ ದೊಂದಿಗೆ ತೆರಳಿ ಉಡಿ ತುಂಬಿಕೊಂಡು ಬಂದು ಶ್ರೀ ದುರ್ಗಾದೇವಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಬಿತ್ತನೆ ಪ್ರಾರಂಭಿಸುತ್ತಾರೆ.ಇದರಿಂದ ಉತ್ತಮ ಮಳೆ ಬೆಳೆ ಆಗುತ್ತದೆ ಎಂದು ರೈತ ಸಮೂದವರ ನಂಬಿಕೆಯಾಗಿರುತ್ತದೆ. ಕಾರ್ಯಕ್ರಮದಲ್ಲಿ ಸಮಸ್ತ ಭಕ್ತರು ಪಾಲ್ಗೊಂಡಿದ್ದರು.

# ಬೋಗಸ್ ದಾಖಲಾತಿ ಪಡೆದು ಭೂ ಒಡೆತನ ಯೋಜನೆ ಸೌಲಭ್ಯ: ತನಿಖೆಗೆ ಜೈ ಕನ್ನಡಿಗರ ಸೇನೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಯಡ್ರಾಮಿ ತಾಲೂಕಿನ ಬೀಳವಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಮಖಂಡಿ ಗ್ರಾಮದಲ್ಲಿ ಬೋಗಸ್ ದಾಖಲಾತಿ ಪಡೆದು ಭೂ ಒಡೆತನ ಯೋಜನೆಯಡಿ ಜಮೀನು ಮಂಜೂರು ಮಾಡಿರುವ ಪ್ರಕರಣದ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಜೈ ಕನ್ನಡಿಗರ ಸೇನೆ ಜಿಲ್ಲಾ ಸಮಿತಿ ವತಿಯಿಂದ ನೂತನ ಜಿಲ್ಲಾಧಿಕಾರಿಗಳಾದ ಇಕ್ರಮ್ ಆರೀಫ್ ಅವರಿಗೆ ಸನ್ಮಾನಿಸಿ ಮನವಿ ಸಲ್ಲಿಸಲಾಯಿತು. ಸೈನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ದತ್ತು ಹೆಚ್. ಭಾಸಗಿ ನೇತೃತ್ವದಲ್ಲಿ ಸಲ್ಲಿಸಲಾದ ಮನವಿಯಲ್ಲಿ, ಕೆಲವರು ಸಫಾಯಿ ಕರ್ಮಚಾರಿಗಳೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಅರ್ಜಿ ಸಲ್ಲಿಸಿ ಭೂ ಒಡೆತನ ಯೋಜನೆಯ ಸೌಲಭ್ಯ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಕುರಿತು ಈ ಹಿಂದೆಯೇ ಕೆಲವು ಸಂಘಟನೆಗಳು ನಿಗಮಕ್ಕೆ ದೂರು ನೀಡಿದ್ದರೂ ಜಿಲ್ಲಾ ವ್ಯವಸ್ಥಾಪಕರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಒಂದೇ ಗ್ರಾಮದಲ್ಲಿ ಆರು ಮಂದಿಗೆ ಭೂ ಒಡೆತನ ಯೋಜನೆಯಡಿ ಜಮೀನು ನೋಂದಣಿ ಮಾಡಿರುವುದು ಸರ್ಕಾರಕ್ಕೆ ವಂಚನೆ ಮಾಡುವಂತಾಗಿದೆ ಎಂದು ಸಂಘಟನೆ ಆರೋಪಿಸಿದೆ.

ಹೀಗಾಗಿ, ಬೋಗಸ್ ಫಲಾನುಭವಿಗಳ ನೋಂದಣಿ ರದ್ದುಪಡಿಸಿ ನಿಜವಾದ ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಕಲ್ಪಿಸಬೇಕು. ಅಲ್ಲದೆ, ತಪ್ಪು ದಾಖಲೆ ನೀಡಿದ ಅಧಿಕಾರಿಗಳು, ಬೀಳವಾರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಬೋಗಸ್ ದಾಖಲೆ ಪಡೆದುಕೊಂಡವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜೈ ಕನ್ನಡಿಗರ ಸೇನೆ ಆಗ್ರಹಿಸಿದೆ.ಈ ಸಂದರ್ಭದಲ್ಲಿ ಪರಮೇಶ್ವರ ಕೂಡಿ ,ಮರೆಪ್ಪ, ಬಾಬು , ಸಾಗರ ಉಪಸ್ಥಿತರಿದ್ದರು.

# ಭೂಸ್ವಾಧೀನಗೊಂಡ 1821 ಎಕರೆ ಜಮೀನು ವಾಪಸ್ ನೀಡಲು ಆಗ್ರಹಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ




ಗುಲಬರ್ಗ ಸಿಮೆಂಟ್ ಕಾರ್ಖಾನೆ ಸ್ಥಾಪನೆ ಉದ್ದೇಶಕ್ಕಾಗಿ ಭೂಸ್ವಾಧೀನಗೊಂಡಿದ್ದ ಕಿರಣಗಿ, ಫಿರೋಜಾಬಾದ್ ಹಾಗೂ ಸೋಮನಾಥಹಳ್ಳಿ ಗ್ರಾಮದ 1821 ಎಕರೆ ಜಮೀನನ್ನು ರೈತರಿಗೆ ವಾಪಸ್ ನೀಡುವಂತೆ ಆಗ್ರಹಿಸಿ ಭೂಮಿ ನೀಡಿದ ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.ಕಾರ್ಖಾನೆ ನಿರ್ಮಾಣ ಮಾಡುವುದಾಗಿ ಹೇಳಿ ಹಲವು ವರ್ಷಗಳ ಹಿಂದೆ ಭೂಸ್ವಾಧೀನ ಮಾಡಿಕೊಂಡಿದ್ದರೂ ಇದುವರೆಗೆ ಯಾವುದೇ ಕೈಗಾರಿಕೆ ಸ್ಥಾಪನೆ ಮಾಡಿಲ್ಲ. ಇದರಿಂದ ರೈತರು ಜೀವನೋಪಾಯ ಕಳೆದುಕೊಂಡಿದ್ದು, ಸರ್ಕಾರ ಹಾಗೂ ಕಂಪನಿ ರೈತರಿಗೆ ಅನ್ಯಾಯ ಮಾಡಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.ಭೂಸ್ವಾಧೀನದ ಉದ್ದೇಶ ಈಡೇರಿಸದೇ ಕಾನೂನು ಉಲ್ಲಂಘನೆ ಮಾಡಿರುವ ಹಿನ್ನೆಲೆಯಲ್ಲಿ ಜಮೀನನ್ನು ಮೂಲ ರೈತರಿಗೆ ಮರಳಿ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆಗೆ ನ್ಯಾಯಯುತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡ ಶರಣಬಸಪ್ಪ ಮಮಶೆಟ್ಟಿ, ಶಂಕ್ರೆಪ್ಪಾ ಗೊಬ್ಬುರು, ಇರಣ್ಣಾ ಉಳಾಗಡ್ಡಿ, ಭಿಮಾಶಂಕರ ಸರಡಗಿ, ಪ್ರಭು ಭೈರಾಡಗಿ, ಸಿದ್ದಮ್ಮ ನರಿಬೊಳಿ, ಗುರಮ್ಮಾ ರಾವುರು, ನಾಗಮ್ಮಾ ಮಡಿಕ್ಯಾಳ ಸೇರಿದಂತೆ ಕಿರಣಗಿ, ಫಿರೋಜಾಬಾದ್ ಹಾಗೂ ಸೋಮನಾಥಹಳ್ಳಿ ಗ್ರಾಮದ ಭೂ ಸಂತ್ರಸ್ತ ರೈತರು ಭಾಗವಹಿಸಿದ್ದರು.

# ಮಾಡಿಯಾಳ ಶ್ರೀ ಅಮೋಘಸಿದ್ದೇಶ್ವರ ಜಾತ್ರಾ ಮಹೋತ್ಸವ: ಮೇ 13ರಿಂದ ವೈಭವದ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಆಳಂದ ತಾಲೂಕಿನ ಸುಕ್ಷೇತ್ರ ಮಾಡಿಯಾಳ ಗ್ರಾಮದಲ್ಲಿ ನಡೆಯಲಿರುವ ಶ್ರೀ ಅಮೋಘಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಾತ್ರಾ ಸಮಿತಿಯ ಮುಖಂಡ ಗಂಗಾಧರ ಶಿರೂರ ತಿಳಿಸಿದ್ದಾರೆ.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 13ರಂದು ಸಂಜೆ 5 ಗಂಟೆಗೆ ಶ್ರೀ ಅಮೋಘಸಿದ್ದೇಶ್ವರ ಪಲ್ಲಕ್ಕಿ ಮಾಡಿಯಾಳದಿಂದ ಗಾಣಗಾಪುರದ ಕೂಡಲ ಸಂಗಮಕ್ಕೆ ಪ್ರಯಾಣ ಬೆಳೆಸಲಿದ್ದು, ಮೇ 14ರಂದು ಗಂಗಾ ಸ್ನಾನ ನೆರವೇರಿಸಿ ಮೇ 15ರಂದು ಗ್ರಾಮಕ್ಕೆ ಮರಳಲಿದೆ ಎಂದು ತಿಳಿಸಿದರು.

ಮೇ 16ರಂದು ಅಮಾವಾಸ್ಯೆ ಪ್ರಯುಕ್ತ ರಾತ್ರಿ ಪೂರ್ತಿ ಗ್ರಾಮದ ಬೀದಿ ಬೀದಿಗಳಲ್ಲಿ ಪಲ್ಲಕ್ಕಿ ಹಾಗೂ ದೇವರ ಮಾಖಗಳ ಮೆರವಣಿಗೆ ನಡೆಯಲಿದ್ದು, ಮೇ 17ರಂದು ನಸುಕಿನ ಜಾವ ಪರಮ ಪೂಜ್ಯ ಶ್ರೀ ಪ್ರಭುರಾಯ ರೇವಪ್ಪ ಮುತ್ಯಾರವರಿಂದ ದೇವರ ಹೇಳಿಕೆ ನುಡಿ (ಅಮೃತ ವಾಣಿ) ನಡೆಯಲಿದೆ ಎಂದು ಹೇಳಿದರು.

ಜಾತ್ರಾ ನಿಮಿತ್ತ ಮೇ 9ರಿಂದ 15ರವರೆಗೆ ಪ್ರತಿದಿನ ಸಂಜೆ 7ರಿಂದ ರಾತ್ರಿ 10ರವರೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಜೀವನ ಚರಿತ್ರೆ, ಮಹಾಪುರಾಣ ಕಾರ್ಯಕ್ರಮ ಹಾಗೂ ಧಾರ್ಮಿಕ ಸಭೆಗಳು ಪೂಜ್ಯರ ಸಾನಿಧ್ಯದಲ್ಲಿ ನಡೆಯಲಿವೆ ಎಂದರು.

ಮೇ 15ರಂದು ಸಂಜೆ 7 ಗಂಟೆಗೆ ವಿಶೇಷ ಸನ್ಮಾನ ಸಮಾರಂಭ ಏರ್ಪಡಿಸಲಾಗಿದ್ದು, ಮಾಜಿ ಶಾಸಕ ಸುಭಾಷ ಗುತ್ತೇದಾರ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಹರ್ಷಾನಂದ ಗುತ್ತೇದಾರ, ತಾಲೂಕು ಮುಖಂಡರಾದ ಅಶೋಕ ಗುತ್ತೇದಾರ, ವಿಠಲರಾವ ಪಾಟೀಲ, ವೀರಣ್ಣ ಮಂಗಾಣೆ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ 2026ನೇ ಸಾಲಿನ ಪಿಎಸ್‌ಐ ಹುದ್ದೆಗೆ ಆಯ್ಕೆಯಾದ ಗ್ರಾಮದ ನಂದಿನಿ ಕಲಶೇಟ್ಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಯೋಧರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಮೇ 16ರಂದು ಸಂಜೆ 5 ಗಂಟೆಗೆ ಧಾರ್ಮಿಕ ಸಭೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 21 ಸಾಧಕರಿಗೆ "ಶ್ರೀ ಅಮೋಘ ರತ್ನ" ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾರ್ಯಕ್ರಮದಲ್ಲಿ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಆಳಂದ ಶಾಸಕ ಬಿ.ಆರ್. ಪಾಟೀಲ, ಕೆಎಂಎಫ್ ಅಧ್ಯಕ್ಷ ಆರ್. ಕೆ. ಪಾಟೀಲ, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಶ್ರೀನಿವಾಸ ಪೂಜಾರಿ, ಕುರಿ ಮತ್ತು ಉಣ್ಣೆ ನಿಗಮದ ಅಧ್ಯಕ್ಷ ದೇವೇಂದ್ರ ಮರತೂರ, ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಗನ್ನಾಥ ಶೆಗಜಿ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಇದೇ ದಿನ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಕಲಬುರಗಿಯ ಅನುಗ್ರಹ ಕಣ್ಣಿನ ಆಸ್ಪತ್ರೆ ಹಾಗೂ ಎನ್.ಕೆ. ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಮೇ 17ರಂದು ಸಂಜೆ 4 ಗಂಟೆಗೆ ಪೈಲ್ವಾನರಿಂದ ಕುಸ್ತಿ ಸ್ಪರ್ಧೆ ಹಾಗೂ ಮೇ 18ರಂದು ಭೂತಾಳಸಿದ್ದೇಶ್ವರ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಹೇಳಿದರು.

ಜಾತ್ರಾ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಕೌಲಗಿ, ಶಿವಯೋಗಪ್ಪ ಪೂಜಾರಿ, ಮುತ್ತಣ್ಣ ನಡಗೇರಿ, ಮಲಕಾರಿ ಪೂಜಾರಿ ಹಾಗೂ ಶರಣಬಸಪ್ಪ ಕಲಶೇಟ್ಟಿ ಉಪಸ್ಥಿತರಿದ್ದರು.

# ಕಾರ್ಮಿಕ ಸಂಹಿತೆ ವಿರೋಧಿಸಿ ಸಿಐಟಿಯು ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಜಾವಿರೋಧಿ ಕಾರ್ಮಿಕ ಸಂಹಿತೆಗಳನ್ನು ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿ ಸಿಐಟಿಯು ಜಿಲ್ಲಾ ಸಮಿತಿಯ ಪದಾಧಿಕಾರಿಗಳು ನಗರದ ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಕಾರ್ಮಿಕ ಸಂಹಿತೆಗಳ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ಕಾರ್ಮಿಕ ನೀತಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಹಕ್ಕುಗಳನ್ನು ಹತ್ತಿಕ್ಕುವಂತಿವೆ ಎಂದು ಆರೋಪಿಸಿದರು. ಸರ್ಕಾರವು ಕಾರ್ಮಿಕರ ಭದ್ರತೆ, ಉದ್ಯೋಗ ಹಕ್ಕು ಹಾಗೂ ಸಾಮಾಜಿಕ ಭದ್ರತೆಯನ್ನು ದುರ್ಬಲಗೊಳಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ದೂರಿದರು.ಕಾರ್ಮಿಕರ ಹಿತಾಸಕ್ತಿಗೆ ವಿರುದ್ಧವಾಗಿರುವ ಈ ಸಂಹಿತೆಗಳನ್ನು ತಕ್ಷಣ ರದ್ದುಪಡಿಸಿ, ಕಾರ್ಮಿಕ ಸ್ನೇಹಿ ನೀತಿಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸದೆ ಏಕಪಕ್ಷೀಯವಾಗಿ ಕಾನೂನು ಜಾರಿಗೊಳಿಸಿರುವುದು ಖಂಡನೀಯ ಎಂದು ಹೇಳಿದರು.ಪ್ರತಿಭಟನೆಯಲ್ಲಿ ಎಂ.ಬಿ. ಸಜ್ಜನ್, ಶಾಂತಾ ಘಂಟಿ, ಗೌರಮ್ಮ ಪಾಟೀಲ, ಶ್ರೀಮಂತ ಬಿರಾದಾರ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಮಿಕರು ಭಾಗವಹಿಸಿದ್ದರು.

# ಮೇ 15 ರಂದು ಪಿಂಚಣಿ ಹಾಗೂ ಜಿ.ಪಿ.ಎಫ್. ಅದಾಲತ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.12: ಖಜಾನೆ ಇಲಾಖೆ, ಮಹಾಲೇಖಪಾಲರ ಕಚೇರಿ ಹಾಗೂ ರಾಜ್ಯ ಸಿವಿಲ್ ಪಿಂಚಣಿ ಪಾವತಿ ಬ್ಯಾಂಕ್‌ಗಳ ಇವುಗಳ ಸಹಯೋಗದೊಂದಿಗೆ ಇದೇ ಮೇ 15 ರಂದು ಬೆಳಿಗ್ಗೆ 11 ಗಂಟೆಗೆ "ಪಿಂಚಣಿ ಅದಾಲತ್" ಕಾರ್ಯಕ್ರಮ ಹಾಗೂ ಅಂದು ಮಧ್ಯಾಹ್ನ 2.30 ಗಂಟೆಗೆ ಜಿ.ಪಿ.ಎಫ್. ಅದಾಲತ್‌ನ್ನು ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯ ವಿ.ಸಿ. ಕೊಠಡಿಯಲ್ಲಿ ವೀಡಿಯೊ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಖಜಾನೆ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಗೆ ಸಂಬಂಧಿಸಿದ ನಿವೃತ್ತ/ಕುಟುಂಬ ಪಿಂಚಣಿದಾರರು ಮೇಲ್ಕಂಡ ದಿನದಂದು ನಡೆಯುವ ಈ ಅದಾಲತ್ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆ ಹಾಗೂ ಅಹವಾಲುಗಳನ್ನು ಚರ್ಚಿಸಿ, ಪರಿಹಾರ ಕಂಡುಕೊಳ್ಳಬಹುದಾಗಿದೆ.

# ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.12: ಹರಪನಹಳ್ಳಿ ತಾಲೂಕಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳನ್ನು ಮೆರಿಟ್ ಹಾಗೂ ರೋಸ್ಟರ್ ಅನುಗುಣವಾಗಿ ಡಿಪ್ಲೋಮಾ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಬೇಟಿನೀಡಬಹುದು ಅಥವಾ ಕಾಲೇಜಿನ ಪ್ರಾಚಾರ್ಯರ ದೂರವಾಣಿ ಸಂಖ್ಯೆ: 9342384217 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಅವಧಿ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.12: ಹೂವಿನಹಡಗಲಿ ತಾಲೂಕಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಡಿಜಿಟಿ ಮಾರ್ಗಸೂಚಿಗಳ ಪ್ರಕಾರ ಈಗಾಗಲೇ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಕ್ಕೆ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವದಿಯನ್ನು ಮೇ 15ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೂವಿನಹಡಗಲಿಯ ಸರ್ಕಾರಿ ಕೈಗಾರಿಕ ತರಬೇತಿ ಸಂಸ್ಥೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



**ಬಾಗಲಕೋಟೆ:** ಆಶಾ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿತು.

ನವನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದರು.

ಕಳೆದ ಹಲವು ತಿಂಗಳಿಂದ ಗೌರವಧನ ಮತ್ತು ಪ್ರೋತ್ಸಾಹ ಧನ ಬಾರದೇ ಆಶಾ ಕಾರ್ಯಕರ್ತೆಯರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ವರ್ಷದಿಂದ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಸರಿಯಾಗಿ ಪಾವತಿಯಾಗುತ್ತಿಲ್ಲ. ಪ್ರಸ್ತುತ 3–4 ತಿಂಗಳ ಕೇಂದ್ರದ ಪಾಲು ಮತ್ತು 1–2 ತಿಂಗಳ ರಾಜ್ಯದ ಗೌರವಧನ ಬಾಕಿ ಉಳಿದಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಆಶಾನಿಧಿತಂತ್ರಾಂಶದಲ್ಲಿ 9 ವಿವಿಧಸೇವೆಗಳನ್ನುನಿಷ್ಕ್ರಿಯಗೊಳಿಸಲಾಗಿದೆ. ಇದರಿಂದಾಗಿ ಪ್ರತಿ ಕಾರ್ಯಕರ್ತೆಗೆ ತಿಂಗಳಿಗೆ 500 ರಿಂದ 1 ಸಾವಿರ ರೂ.ವರೆಗೆ ಆರ್ಥಿಕ ನಷ್ಟವಾಗುತ್ತಿದೆ ಎಂದು ತಿಳಿಸಲಾಗಿದೆ.

ಟಿ.ಬಿ, ಬಿ.ಪಿ, ಎನ್.ಸಿ.ಡಿ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳ ಪ್ರೋತ್ಸಾಹಧನ ಹಲವು ವರ್ಷಗಳಿಂದ ಬಿಡುಗಡೆಯಾಗಿಲ್ಲ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಕಾರ್ಯಕರ್ತೆಯರು ಮಾನಸಿಕ ಮತ್ತು ಆರ್ಥಿಕ ಒತ್ತಡಕ್ಕೆ ಒಳಗಾಗಿದ್ದಾರೆ ಎಂದೂ ಕಾರ್ಯಕರ್ತರು ದೂರಿದರು.

ಆಶಾ ಕಾರ್ಯಕರ್ತರು ತಾಯಿ–ಮಗು ಸುರಕ್ಷತೆ ಹಾಗೂ ಬಡ ಜನರ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಸರ್ಕಾರ ಕೂಡಲೇ ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸಂಘದ ಪದಾಧಿಕಾರಿಗಳ ತುರ್ತು ಸಭೆ ಕರೆದು, ಬಾಕಿ ಹಣ ಬಿಡುಗಡೆಗೆ ದಿನಾಂಕ ನಿಗದಿಪಡಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘ ಎಚ್ಚರಿಸಿದೆ.

# ಐಟಿಐ ವಿವಿಧ ವೃತ್ತಿಗಳಿಗೆ ಪ್ರವೇಶ ಪಡೆಯಲು ಆಹ್ವಾನ

**ಕಲಬುರಗಿ:** ಸೇಡಂ (ನೀಲಹಳ್ಳಿ) ಸರ್ಕಾರಿ ಐ.ಟಿ.ಐ. ಕಾಲೇಜಿನಲ್ಲಿ ಆಗಸ್ಟ್–2026–27ನೇ ಸಾಲಿಗೆ ಎನ್.ಸಿ.ವಿ.ಟಿ. (NCVT) ಸಂಯೋಜನೆ ಪಡೆದ ಈ ಕೆಳಕಂಡ ವೃತ್ತಿಗಳಿಗೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ.ಪಾಸಾದ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಸೇಡಂ (ನೀಲಹಳ್ಳಿ) ಸರ್ಕಾರಿ ಐ.ಟಿ.ಐ. ಕಾಲೇಜಿನ ಪ್ರಾಚಾರ್ಯರು ತಿಳಿಸಿದ್ದಾರೆ.

ಫಿಟ್ಟರ್, ಎಲೆಕ್ಟ್ರಿಷಿಯನ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್, ಅಡ್ವಾನ್ಸಡ್ ಸಿ.ಎನ್.ಸಿ.ಮಷಿನಿಂಗ್ ಟೆಕ್ನಿಶಿಯನ್, ಇಂಡಸ್ಟ್ರಿಯಲ್ ರೊಬೊಟಿಕ್ ಮತ್ತು ಡಿಜಿಟಲ್ ಮ್ಯಾನುಫಾಕ್ಚರಿಂಗ್, ಮ್ಯಾನುಫ್ಯಾಕ್ಚರಿಂಗ್ ಪ್ರೋಸಸ್ ಕಂಟ್ರೋಲ್ ಅಂಡ್ ಅಟೋಮೇಶನ್, ಅರ್ಟಿಸನ್ ಯುಸಿಂಗ್ ಅಡ್ವಾನ್ ಟೂಲ್ ಹಾಗೂ ವರ್ಚುವಲ್ ಅನಲೈಸಿಸ್ ಅಂಡ್ ಡಿಸೈನರ್ ವೃತ್ತಿಗಳಿಗೆ ಪ್ರವೇಶ ಪಡೆಯಬಹುದಾಗಿದೆ.

ಆಸಕ್ತ ಅಭ್ಯರ್ಥಿಗಳು ಇಲಾಖೆಯ www.cite.karnataka.gov.in ವೆಬ್‌ಸೈಟ್‌ದಲ್ಲಿ ಆನ್‌ಲೈನ್ ಮೂಲಕ 2026ರ ಮೇ 15 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8310935051, 9480292108, 9845950013, 9481000523, 9071672378, 7406793643 ಹಾಗೂ ಪ್ರಾಚಾರ್ಯರ ಮೋ.ಸಂ: 8310880083 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಭಿಕ್ಷಾಟನೆಗಾಗಿ ಮಗು ಅಪಹರಿಸಿದವನಿಗೆ 3 ವರ್ಷ ಜೈಲುಶಿಕ್ಷೆ



**ಕಲಬುರಗಿ:** ಭಿಕ್ಷಾಟನೆ ಉದ್ದೇಶಕ್ಕಾಗಿ ಸೇಡಂ ತಾಲೂಕಿನ ಕೊಂತನಪಲ್ಲಿ ಗ್ರಾಮದಲ್ಲಿ 9 ತಿಂಗಳು ಮಗುವನ್ನುಅಪಹರಿಸಿದ ಆರೋಪ ಸಾಬೀತಾದ್ದರಿಂದ ಅಪರಾಧಿಗೆ 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ (ಪೀಠಾಸೀನ ಸೇಡಂ ) 3 ವರ್ಷ ಜೈಲು 5 ಸಾವಿರ ರೂ ದಂಡ ವಿಧಿಸಿದೆ.

ಮಗುವಿನ ಸಂಬಂಧಿಯೇ ಆದ ಇಮಾಮಶಾ ಶಿಕ್ಷೆಗೊಳಗಾದ ವ್ಯಕ್ತಿ. 2023 ರ ಜೂನ್ 3 ರಂದು ಮುಧೋಳ ಠಾಣೆ ವ್ಯಾಪ್ತಿಯ ಕೊಂತನಪಲ್ಲಿ ಗ್ರಾಮದ ಲಾಲಶಾ ಮತ್ತು ಶಹನಾಜ ಎಂಬ ದಂಪತಿಯ ಪುತ್ರಿಯನ್ನು ಬಿಸ್ಕಿಟ್ ಕೊಡಿಸುತ್ತೇನೆ ಎಂದು ಎತ್ತಿಕೊಂಡು ಹೋದ ಇಮಾಮಶಾ ನಂತರ ಮುಗುವಿನೊಂದಿಗೆ ಹೈದರಾಬಾದಿಗೆ ಹೋಗಿದ್ದನು. ಮಗು ಕಾಣೆಯಾದ ಬಗ್ಗೆ ಪಾಲಕರ ದೂರು ಸ್ವೀಕರಿಸಿದ ಮುಧೋಳ ಪೊಲೀಸರು ಹೈದರಾಬಾದ್ ಬೇಗಂಪೇಟೆ ರೈಲು ನಿಲ್ದಾಣದಲ್ಲಿ ಮಗುವಿನೊಂದಿಗೆ ಭಿಕ್ಷೆ ಬೇಡುತ್ತಿದ್ದ ಇಮಾಮಶಾ ನನ್ನು ಪತ್ತೆ ಹಚ್ಚಿದ್ದರು. ಅಲ್ಲಿಂದ ಪರಾರಿಯಾದ ಇಮಾಮಶಾನನ್ನು ನಂತರ ಪೊಲೀಸರು ಬಂಧಿಸಿದ್ದರು.

ಹೈದರಾಬಾದಿನಲ್ಲಿ ಮಸೀದಿಗಳ ಮುಂದೆ ಮಗುವನ್ನು ತೋರಿಸಿ ಭಿಕ್ಷೆ ಬೇಡುವ ಉದ್ದೇಶದಿಂದ ಈ ಅಪಹರಣ ಮಾಡಿದ್ದಾಗಿ ಆತ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದನು.ಮುಧೋಳ ಠಾಣೆ ಪೊಲೀಸರು ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಕರಣ್ ಗುಜ್ಜಾರ ಅವರು ಶಿಕ್ಷೆಯನ್ನು ಪ್ರಕಟಸಿ ತೀರ್ಪು ಆದೇಶ ನೀಡಿದ್ದಾರೆ.ಸರಕಾರದ ಪರವಾಗಿ 4 ನೇ ಅಪರ ಸರಕಾರಿ ಅಭಿಯೋಜಕ ಕೆ.ಆರ್ ನಾಗರಾಜ ಅವರು ವಾದ ಮಂಡಿಸಿದ್ದರು.

# ವಿದೇಶಿ ಮಾರುಕಟ್ಟೆಗೆ ಲಗ್ಗೆ ಇಟ್ಟ ಉ.ಕರ್ನಾಟಕದ ಸವಿ

• ಕೈಲಾಸ ಕೆ ಬಿದನೂರ, ಕಲಬುರಗಿ

ಕಲಬುರಗಿ ಅಂದಾಕ್ಷಣ ನೆನಪಾಗುವುದೇ ಬಿಸಿಲು ಮತ್ತು ಅಷ್ಟೇ ರುಚಿಯಾದ ಜೋಳದ ರೊಟ್ಟಿ. ಇದು ಕೇವಲ ಆಹಾರವಲ್ಲ, ಉತ್ತರ ಕರ್ನಾಟಕದ ಸಂಸ್ಕೃತಿಯ ಪ್ರತಿಬಿಂಬ. ಕಲಬುರಗಿಯ ಜೋಳದ ರೊಟ್ಟಿ ತನ್ನ ವಿಶಿಷ್ಟ ರುಚಿ ಮತ್ತು ಪೌಷ್ಟಿಕಾಂಶಕ್ಕೆ ಹೆಸರುವಾಸಿ.

ಬಿಸಿರೊಟ್ಟಿ ಮತ್ತು ಕಡಲ್ರೊಟ್ಟಿ ರುಚಿ ಬಲ್ಲವನೇಬಲ್ಲ. ಕಲಬುರಗಿ ಜನರು ಪ್ರವಾಸ ಹೊರಟರೆ ಬುತ್ತಿಗೆ ಮೊದಲ ಪ್ರಾಶಸ್ತ್ಯ ಕಡಕ್ರೊಟ್ಟಿ, ಯಾಕೆಂದರೆ ಹೊರಗಡೆ ಇವರ ರೊಟ್ಟಿಸಿಗುವುದಿಲ್ಲ ಎಂದು.ಎಷ್ಟೇ ದಿನದ ಪ್ರವಾಸ ಇರಲಿ ಬುತ್ತಿಯ ಮೊದಲ ಮೆನು 'ಕಡಕ್ರೊಟ್ಟಿ'. ಇದು ಎಷ್ಟೇದಿನ ಇಟ್ಟರೂ ಕೆಡುವಿದಲ್ಲ.

ಕೈಯಿಂದಲೇ ತಟ್ಟಿತಯಾರಿಸುವ ರೊಟ್ಟಿಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಿಡಬಹುದು.ಇವುಗಳಲ್ಲಿ ನಾರಿನಂಶ ಹೆಚ್ಚಿದ್ದು, ಆರೋಗ್ಯಕ್ಕೆ ಅತ್ಯುತ್ತಮ. ಇದು ಸಂಪೂರ್ಣವಾಗಿ ಅಡುಗೆ ಎಣ್ಣೆ ರಹಿತ ಮತ್ತು ಅಂಟುರಹಿತವಾಗಿದ್ದು, ಮಧುಮೇಹ ಮತ್ತು ಅಧಿಕರಕ್ತದೊತ್ತಡ ಹೊಂದಿರುವವರಿಗೆ ರಾಮಬಾಣವಾಗಿದೆ.

ಈ ರೊಟ್ಟಿಯೊಂದಿಗೆ ಬಡಿಸುವ ಅಗಸಿ ಚಟ್ನಿ, ಗುರೆಳ್ಳುಪುಡಿ ಮತ್ತು ಬಿಸಿ ಬಿಸಿ ತೊಗರಿಬೇಳೆ ಸಾಂಬಾರ್, ಶೇಂಗಾ ಚಟ್ನಿಪುಡಿ, ಬದನೆಕಾಯಿ ಎಣ್ಣೆಗಾಯಿಪಲ್ಲೆ, ಪುಂಡಿಪಲ್ಲೆ ಹಾಗೂ ಗಟ್ಟಿಮೊಸರಿನೊಂದಿಗೆ ಕಲಬುರಗಿಯ ಅಪ್ಪಟದೇಶಿ ರುಚಿಯನ್ನು ಸವಿಯಬಹುದಾಗಿದೆ. ಕಠಿಣಶ್ರಮದ ಕೆಲಸಮಾಡುವವರಿಗೆ ಇದು ದಿನವಿಡೀ ಶಕ್ತಿಯನ್ನು ನೀಡುವಪೂರ್ಣ ಆಹಾರವಾಗಿದೆ. ಇದನ್ನು ತಯಾರಿಸುವ ಕಲೆ ಉತ್ತರ ಕರ್ನಾಟಕದ ಹೆಣ್ಣುಮಕ್ಕಳ ಕೈಚಳಕದಲ್ಲಿ ಅಡಗಿದೆ.

ನಮ್ಮ ನೆಲದ ಸಾಂಪ್ರದಾಯಿಕ ಆಹಾರ, ಉತ್ತರಕರ್ನಾಟಕದ ಮನೆಮನದ ನೆಚ್ಚಿನ ಆಹಾರ, ಸತ್ವಯುತ ಸಿರಿಧಾನ್ಯದ "ಕಲಬುರಗಿ ರೊಟ್ಟಿ" ಕೇವಲ ಸ್ಥಳೀಯ ಮಾರುಕಟ್ಟೆಗೆ ಸೀಮಿತವಾಗಿಲ್ಲ. ತನ್ನ ವಿಶಿಷ್ಟ ರುಚಿ ಮತ್ತು ಆರೋಗ್ಯ ಕರಗುಣಗಳಿಂದಾಗಿ ಈಗ ಜಾಗತಿಕಮನ್ನಣೆಪಡೆದುಕೊಂಡು ಸಪ್ತಸಾಗರದಾಚೆಗೂ ತನ್ನ ಕಂಪನ್ನು ಪಸರಿಸಲು ಸಜ್ಜಾಗಿದೆ.



ಜಿಲ್ಲಾಡಳಿತದ ಪ್ರಯತ್ನದಿಂದ ಸ್ಥಳೀಯ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಂದ ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಈ ದೇಸಿಬ್ರಾಂ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವುದು ಜಿಲ್ಲೆಯ ಮಹಿಳಾಸಬಲೀಕರಣದ ಇತಿಹಾಸದಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ.

ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕರ್ಗೆ ಅವರು ಇತ್ತೀಚೆಗೆ ಈ ರಫ್ತು ಪ್ರಕ್ರಿಯೆಗೆ ಚಾಲನೆ ನೀಡುವ ಮೂಲಕ, ಜಿಲ್ಲೆಯ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯದ ಹಾದಿಯನ್ನು ಸುಗಮಗೊಳಿಸಿದ್ದಾರೆ. ಅಮೆರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ಪ್ರಮುಖ ರಾಷ್ಟ್ರಗಳಿಗೆ ಈ ರೊಟ್ಟಿ ರಫ್ತಾಗುವ ಮೂಲಕ ಕಲಬುರಗಿ ಜಿಲ್ಲೆಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಆರಂಭವಾಗಿದೆ.

ಕಲಬುರಗಿ ರೊಟ್ಟಿಯನ್ನು ವಿದೇಶಕ್ಕೆ ರಫ್ತುಮಾಡಲು ಪುಣೆ ಮೂಲದ ಅಸ್ತಮ್ಮೇಡಸ್ಕರ್ಂಪನಿಯೊಂದಿಗೆ ಮಹತ್ವದ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದದ ಅನ್ವಯ:

- **ರಫ್ತು ಪ್ರಮಾಣ:** ವಾರ್ಷಿಕವಾಗಿ ಸುಮಾರು 3 ಲಕ್ಷ ರೊಟ್ಟಿಗಳನ್ನು ರಫ್ತು ಮಾಡುವ ಗುರಿ ಹೊಂದಲಾಗಿದೆ.
- **ತಿಂಗಳ ಹಂಚಿಕೆ:** ಪ್ರತಿ ತಿಂಗಳು ಅಮೆರಿಕಾ ಮತ್ತು ಆಸ್ಟ್ರೇಲಿಯಾಕ್ಕೆ ತಲಾ 10,000 ಹಾಗೂ ಕೆನಡಾಕ್ಕೆ 5,000 ರೊಟ್ಟಿಗಳನ್ನು ರವಾನಿಸಲಾಗುವುದು.
- **ಆದಾಯ ವೃದ್ಧಿ:** ಸ್ಥಳೀಯ ಮಾರುಕಟ್ಟೆಯಲ್ಲಿ 10 ರಿಂದ 12 ರೂ.ಗೆ ಮಾರಾಟವಾಗುವ ಒಂದು ರೊಟ್ಟಿ, ವಿದೇಶದಲ್ಲಿ 25 ರಿಂದ 30 ರೂ.ವರೆಗೆ ಮಾರಾಟವಾಗಲಿದೆ. ಇದರಿಂದ ಉತ್ಪಾದಕ ಮಹಿಳೆಯರ ಆದಾಯ ಶೇ.80–100ರಷ್ಟು ಏರಿಕೆಯಾಗಲಿದೆ.





**ಮಹಿಳಾಸಬಲೀಕರಣದ ಯಶೋಗಾಥೆ**

ಈ ಯೋಜನೆಯ ಹಿಂದಿನ ಅಸಲಿಶಕ್ತಿ ಎಂದರೆ ಕಲಬುರಗಿಯ ಶ್ರಮಜೀವಿ ಮಹಿಳೆಯರು.ಕಲಬುರಗಿ ರೊಟ್ಟಿಬ್ರಾಂ ಅಡಿಯಲ್ಲಿ ಸುಮಾರು 100 ಸ್ವ–ಸಹಾಯ ಸಂಘಗಳ 1,000ಕ್ಕೂ ಹೆಚ್ಚು ಮಹಿಳೆಯರು ಸಂಘಟಿತರಾಗಿದ್ದಾರೆ. ಎರಡು ವರ್ಷಗಳ ಹಿಂದೆ ಸಣ್ಣಪ್ರಮಾಣದಲ್ಲಿ ಆರಂಭವಾದ ಈ ಯೋಜನೆ ಇಂದು ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಯುತ್ತದೆ ಎಂದು ಯಾರೂ ಊಹಿಸಿರಲಿಲ್ಲ. "ಆರಂಭದಲ್ಲಿ ಇದು ಕೇವಲ ಒಂದು ಪ್ರಯತ್ನವಾಗಿತ್ತು, ಆದರೆ ಮಹಿಳೆಯರ ನಿರಂತರ ಪರಿಶ್ರಮ ಮತ್ತು ಗುಣಮಟ್ಟದ ಉತ್ಪಾದನೆಯಿಂದಾಗಿ ಇಂದು ಅಂತರರಾಷ್ಟ್ರೀಯ ಮಟ್ಟದ ಕಂಪನಿಗಳು ನಮ್ಮ ರೊಟ್ಟಿಗಾಗಿ ಒಪ್ಪಂದ ಮಾಡಿಕೊಳ್ಳುತ್ತಿವೆ."

ಸರ್ಕಾರವು ಈ ಮಹಿಳೆಯರಿಗೆ ಕೇವಲ ಮಾರುಕಟ್ಟೆ ಒದಗಿಸುವುದಲ್ಲದೆ, ತಾಂತ್ರಿಕವಾಗಿಯೂ ಸಬಲರನ್ನಾಗಿ ಮಾಡಿದೆ. ರೊಟ್ಟಿ ತಯಾರಿಸುವ ಯಂತ್ರಗಳ ಖರೀದಿಗೆ ಸಬ್ಸಿಡಿ ನೀಡುವ ಮೂಲಕ ಸಾಂಪ್ರದಾಯಿಕ ಕಾಯಕಕ್ಕೆ ಆಧುನಿಕತೆಯ ಸ್ಪರ್ಶ ನೀಡಲಾಗಿದೆ. ಇದರಿಂದ ಉತ್ಪಾದನಾ ವೇಗ ಹೆಚ್ಚಾಗಿದ್ದು, ಗುಣ ಮಟ್ಟದಲ್ಲಿ ಏಕರೂಪತೆ ಕಾಯ್ದುಕೊಳ್ಳಲು ಸಾಧ್ಯವಾಗಿದೆ.

**ಹೈಟೆಕ್ಪ್ಯಾಕೇಜಿಂಗ ಮತ್ತು ಗುಣಮಟ್ಟದ ರಕ್ಷಣೆ**

- ದೂರದ ದೇಶಗಳಿಗೆ ಆಹಾರ ಪದಾರ್ಥಗಳನು ಕಳುಹಿಸುವಾಗ ಅದರ ತಾಜಾತನ ಮತ್ತು ಗುಣಮಟ್ಟ ಕಾಪಾಡುವುದು ಬಹುದೊಡ್ಡ ಸವಾಲು. ಇದನು ಮನಗಂಡು ಸರ್ಕಾರವು ಹೈಟೆಕ್ಪ್ಯಾಕೇಜಿಂಗ್ಘಟಕವನ್ನು ಸ್ಥಾಪಿಸುತ್ತಿದೆ.
- ಎಚ್.ಡಿ.ಎಫ್.ಸಿ.ಬ್ಯಾಂಕ್ನ ಸಿ.ಎಸ್.ಆರ್ ಅನುದಾನದಡಿ 55 ಲಕ್ಷರೂ.ಗಳನ್ನು ಒದಗಿಸಿದ್ದು, ಇದರ ಮೂಲಕ ವ್ಯಾಕ್ಯೂಮ್ಪ್ಯಾಕಿಂಗ್ (ಗಾಳಿ ರಹಿತ ಪ್ಯಾಕಿಂಗ್) ಯಂತ್ರಗಳನ್ನು ಖರೀದಿಸಲಾಗುತ್ತಿದೆ.
- ಜಿಲ್ಲಾ ಖನಿಜನಿಧಿ ಅಡಿಯಲ್ಲಿ 32 ಲಕ್ಷರೂ. ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.
- ಒಟ್ಟಾರೆ 87 ಲಕ್ಷರೂ.ವೆಚ್ಚದಲ್ಲಿ ಕೋಟ ನೂರು ಕೃಷಿ ತರಬೇತಿ ಕೇಂದ್ರದಲ್ಲಿ ಈ ಘಟಕ ಸಿದ್ಧವಾಗುತ್ತಿದ್ದು, ಇದು ಕಾರ್ಯಾರಂಭ ಮಾಡಿದರೆ ರೊಟ್ಟಿಗಳ ಬಾಳಿಕೆ ಅವಧಿ ಹೆಚ್ಚಾಗಲಿದೆ ಮತ್ತು ಅಂತರರಾಷ್ಟ್ರೀಯ ಆಹಾರ ಸುರಕ್ಷತಾ ಮಾನದಂಡಗಳನ್ನು ಪೂರೈಸಲು ಸುಲಭವಾಗಲಿದೆ.

**'ಕಲಬುರಗಿ ರೊಟ್ಟಿ' ಡಿಜಿಟಲ್ಕ್ರಾಂತಿ ಮತ್ತು ಭವಿಷ್ಯದ ಗುರಿ**

"ಕಲಬುರಗಿ ರೊಟ್ಟಿ" ಈಗ ಕೇವಲ ಬೀದಿ ಬದಿಯ ವ್ಯಾಪಾರಕ್ಕೆ ಸೀಮಿತವಾಗಿಲ್ಲ. ಇದು ಅಮೆಜಾನ್ನಂತಹ ಇ–ಕಾಮರ್ಸ್ವೇದಿಕೆಗಳಲ್ಲಿ ಮತ್ತು ಪ್ರತ್ಯೇಕ ವೆಬ್ಸೈಟ್ಮೂಲಕ ಜಗತ್ತಿನ ಯಾವುದೇ ಮೂಲೆಯಿಂದಲೂ ಆರ್ಡರ್ ಮಾಡಬಹುದಾದ ಬ್ರ್ಯಾಂಗಿದೆ. ಮುಂದಿನ ದಿನಗಳಲ್ಲಿ ಯುರೋಪ್ಮತ್ತು ಮಧ್ಯಪ್ರಾಚ್ಯದೇಶ ಗಳಿಗೂ ರೊಟ್ಟಿ ರಫ್ತುಮಾಡುವ ಬಗ್ಗೆ ಅಧ್ಯಯನ ನಡೆಯುತ್ತಿದೆ.

ಸಿರಿಧಾನ್ಯಗಳಿಗೆ ಜಾಗತಿಕ ಮಾನ್ಯತೆ ದೊರೆಯುತ್ತಿರುವುದು ಕೇವಲ ಆರ್ಥಿಕ ಲಾಭವಲ್ಲ, ಇದು ನಮ್ಮ ನೆಲದ ಸಂಸ್ಕೃತಿ, ಸಿರಿಧಾನ್ಯಗಳ ಶಕ್ತಿ ಮತ್ತು ಗ್ರಾಮೀಣ ಮಹಿಳೆಯರ ಸ್ವಾಭಿಮಾನದ ಬದುಕಿಗೆ ಸಂದ ಜಯ. ನಮ್ಮ ಗ್ರಾಮೀಣ ಮಹಿಳೆಯರ ಆತ್ಮಗೌರವದ ಸಂಕೇತವಾಗಿದೆ. ಕಲಬುರಗಿಯ ರೊಟ್ಟಿ ಇಂದು ಕೇವಲ ಊಟದ ತಟ್ಟೆಯ ಭಾಗವಾಗಿ ಉಳಿಯದೆ, ಒಂದು ಜಾಗತಿಕ ಬ್ರ್ಯಾಂಗಿ ಜಾಗತಿಕ ಮನ್ನಣೆ ದೊರೆಯುತ್ತಿರುವ ಈ ಕಾಲಘಟ್ಟದಲ್ಲಿ, ಕಲಬುರಗಿಯ ಈ ಮಾದರಿ ಇಡೀ ರಾಜ್ಯಕ್ಕೆ ಮಾದರಿ ಹಾಗೂ ಹೆಮ್ಮೆಯ ವಿಷಯ.

# ದುಂದು ವೆಚ್ಚದ ಮದುವೆಗೆ ಕಡಿವಾಣ ಹಾಕಿ: ಡಾ.ದೇವರಾಜ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ




ಬಡವರು ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿಕೊಳ್ಳುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು ಎಂದು ಡಾ.ದೇವರಾಜ ಪಾಟೀಲ ಹೇಳಿದರು.

ತಾಲೂಕಿನ ಮುತ್ತತ್ತಿ ಗ್ರಾಮದಲ್ಲಿ ದಾಳಮ್ಮದೇವಿ ಹಾಗೂ ದುರ್ಗಾಪರಮೇಶ್ವರಿ ಜಾತ್ರಾ ಮಹೋತ್ಸವದ ನಿಮಿತ್ತ ಸ್ಥಳೀಯ ಶಿವಶರಣ ಮಾದಾರ ಚೆನ್ನಯ್ಯ ಸೇವಾ ಸಮೀತಿ ಮಂಗಳವಾರ ಆಯೋಜಿಸಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ಬಡವರು ಅಂತಸ್ತಿಕೆಗೆ ಮುಂದಾಗಿ ಸಾಲ ಮಾಡಿ ಮಕ್ಕಳ ಮದುವೆ ಮಾಡಿದರೆ ಅದರಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ. ಇದನ್ನು ಪ್ರತಿಯೊಬ್ಬರೂ ತಿಳಿದು ಸಂಘ–ಸಂಸ್ಥೆಗಳು, ಮಠ–ಮಾನ್ಯಗಳು ಹಮ್ಮಿಕೊಳ್ಳುವ ಸಾಮೂಹಿಕ ವಿವಾಹಗಳಲ್ಲಿ ಮದುವೆ ಮಾಡಿ ಆರ್ಥಿಕ ಸಂಕಷ್ಟದಿಂದ ಪಾರಾಗಬೇಕು ಎಂದ ಡಾ.ಪಾಟೀಲ, ಸಾಮೂಹಿಕ ವಿವಾಹಗಳಲ್ಲಿ ಮದುವೆ ಆಗುವುದು ವಧು–ವರರ ಸೌಭಾಗ್ಯವೇ ಸರಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರಾಜು ಮುದೇನೂರ, ಸಾಮೂಹಿಕ ವಿವಾಹಗಳು ಬಡವರ ಪಾಲಿಗೆ ವರದಾನವಾಗಿವೆ. ನೂತನ ದಂಪತಿಗಳು ಸಹಬಾಳ್ವೆಯ ಮೂಲಕ ನೆಮ್ಮದಿಯ ಬದುಕು ಕಟ್ಟಿಕೊಳ್ಳಬೇಕು ಎಂದರು. ಆಶೀರ್ವಚನ ನೀಡಿದ ಮುತ್ತತ್ತಿಯ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಸಾಮೂಹಿಕ ವಿವಾಹಗಳು ಕೇವಲ ಬಡವರ ಮದುವೆಗಳಲ್ಲ. ಇವು ಭಾಗ್ಯವಂತರ ಮದುವೆಗಳು ಎಂದು ಹೇಳಿ ನೂತನ ದಂಪತಿಗಳು ಅನ್ಯೋನ್ಯತೆಯಲ್ಲಿ ಜೀವನ ಸಾಗಿಸಬೇಕು ಎಂದು ಹೇಳಿದರು.

ಪ್ರಾಥಮಿಕ ಶಾಲಾ ಎಸ್.ಸಿ, ಎಸ್. ಟಿ ನೌಕರರ ಸಂಘದ ಅಧ್ಯಕ್ಷ ಲಕ್ಷ್ಮಣ ಯಂಕಂಚಿ, ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮುತ್ತಣ್ಣ ಬೆಣ್ಣೂರ, ಸುರೇಶ ಕೊಣ್ಣೂರ ಮಾತನಾಡಿದರು. ಶಿವಾನಂದ ಟವಳಿ, ಮಾದಾರ ಚೆನ್ನಯ್ಯ ಸೇವಾ ಸಮಿತಿ ಜಿಲ್ಲಾ ಅಧ್ಯಕ್ಷ ಲಕ್ಷ್ಮಣ ಚಂದರಗಿ, ಮಹಾದೇವ ಹರಿಜನ, ಸಂಗಣ್ಣ ಲೋಕಾಪುರ, ಸಿದ್ದು ಲೋಕಾಪುರ ವೇದಿಕೆಯಲ್ಲಿದ್ದರು. ಹರ್ಷಿತಾ ಪ್ರಾರ್ಥಿಸಿದರು. ಹನಮಂತ ಮುತ್ತತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರಶುರಾಮ ಬಸವನಾಳ ನಿರೂಪಿಸಿದರು.

# ಹೊಸ ಯುಐಡಿಎಐ ಆಧಾರ್ ಸೇವಾ ಕೇಂದ್ರದ ಉದ್ಘಾಟನೆ






• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ಜಿಲ್ಲೆಯ ಸಾರ್ವಜನಿಕರು ಆಧಾರ್‌ಆಪ್ ಮೂಲಕ ಮನೆಯಲ್ಲಿ ಕುಳಿತಲ್ಲಿಯೇ ತಮ್ಮ ಆಧಾರ್ ಕಾರ್ಡ್ ಅಪ್ಡೇಟ್ ಮಾಡಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು.

ಅವರು ಮಂಗಳವಾರ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಬೆಂಗಳೂರು ಆಯೋಜಿಸಿದ್ದ ಬೀದರ್‌ನ ಶಿವನಗರದಲ್ಲಿ ಹೊಸ ಯುಐಡಿಎಐ ಆಧಾರ್ ಸೇವಾ ಕೇಂದ್ರ (ಎಎಸ್‌ಕೆ)ನ್ನು ಉದ್ಘಾಟನೆಗೊಳಿಸಿ ಮಾತನಾಡಿದರು.

ಇದು ಜಿಲ್ಲೆಯ ನಿವಾಸಿ ಕೇಂದ್ರಿತ ಆಧಾರ್ ಸೇವೆಗಳನ್ನು ಬಲಪಡಿಸುವತ್ತ ಮತ್ತೊಂದು ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಜಿಲ್ಲೆಯಲ್ಲಿ ಇವತ್ತು ಆಧಾರ್ ಕಾರ್ಡ್ ಸೇವಾ ಕೇಂದ್ರದ ಉದ್ಘಾಟನೆ ಮಾಡಲಾಗಿದೆ. ಆಧಾರ್ ಕಾರ್ಡ್ಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಸಮಸ್ಯೆಗಳನ್ನು ಇಲ್ಲಿ ಪರಿಹರಿಸಲಾಗುವುದು. ಈ ಆಧಾರ್ ಸೇವಾ ಕೇಂದ್ರವು ಆಧಾರ್ ದಾಖಲಾತಿ, ಜನಸಂಖ್ಯಾ ಮತ್ತು ಬಯೋಮೆಟ್ರಿಕ್ ನವೀಕರಣಗಳು, ದೋಷ ತಿದ್ದುಪಡಿ ಮತ್ತು ಕುಂದುಕೊರತೆ ಪರಿಹಾರ ಸೇವೆಗಳನ್ನು ಒಂದೇ ಸೂರಿನಡಿ ನೀಡುತ್ತದೆ. ಈ ಕೇಂದ್ರವು ಸಾರ್ವಜನಿಕ ರಜಾದಿನಗಳನ್ನು ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ಕಾರ್ಯನಿರ್ವಹಿಸುತ್ತದೆ, ಇದರಿಂದಾಗಿ ಅನುಕೂಲತೆಯನ್ನು ಹೆಚ್ಚಿಸುತ್ತದೆ ಮತ್ತು ನಿವಾಸಿಗಳ ಅನುಭವವನ್ನು ಸುಧಾರಿಸುತ್ತದೆ. ಕರ್ನಾಟಕವು ಪ್ರಸ್ತುತ ಬೀದರ್ ಕೇಂದ್ರ ಸೇರಿದಂತೆ ಏಳು ಆಧಾರ್ ಸೇವಾ ಕೇಂದ್ರಗಳನ್ನು ಹೊಂದಿದೆ ಎಂದರು.

ಯುಐಡಿಎಐನ ಉಪನಿರ್ದೇಶಕ ಗುಲ್ಶನ್ ಕುಮಾರ್ ಸಿಂಗ್ ಮಾತನಾಡಿ, ಈ ಆಧಾರ್ ಸೇವಾ ಕೇಂದ್ರ ಬೀದರ್ ಜಿಲ್ಲಾ ನಿವಾಸಿಗಳಿಗೆ ಆಧಾರ್ ಕಾರ್ಡ್ ಗೆ ಸಂಬಂಧಿಸಿದಂತೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಕೇಂದ್ರವಾಗಿದೆ. ಆನ್ಲೈನ್ನಲ್ಲಿ ಸಂದರ್ಶನದ ಸಮಯ ಪಡೆಯಬಹುದು , ಅಥವಾ ಖುದ್ದಾಗಿ ಈ ಕೇಂದ್ರಕ್ಕೆ ಬಂದು ತಮ್ಮ ಆಧಾರ್ ಸಂಬಂಧಿತ ಸೇವೆಗಳನ್ನು ಪಡೆಯಬಹುದು, ಆಧಾರ್ ಸಂಬಂಧಿತ ಎಲ್ಲಾ ಒಂದು ವಾರದ ಒಳಗಡೆ ಪರಿಹರಿಸಲಾಗುವುದು ಎಂದರು.

ಜೂನ್ 2026 ರ ಅಂತ್ಯದ ವೇಳೆಗೆ ಇನ್ನೂ ಎಂಟು ಕೇಂದ್ರಗಳು ಕಾರ್ಯನಿರ್ವಹಿಸಲು ನಿರ್ಧರಿಸಲಾಗಿದೆ. ಈ ವಿಸ್ತರಣೆಯೊಂದಿಗೆ, ರಾಜ್ಯದಲ್ಲಿ ಒಟ್ಟು ಆಧಾರ್ ಸೇವಾ ಕೇಂದ್ರಗಳ ಸಂಖ್ಯೆ ಸೆಪ್ಟೆಂಬರ್ 2026 ರ ವೇಳೆಗೆ 24 ಕ್ಕೆ ತಲುಪುವ ನಿರೀಕ್ಷೆಯಿದೆ. ಈ ಆಧಾರ್ ಸೇವಾ ಕೇಂದ್ರಗಳನ್ನು ಯುಐಡಿಎಐ ನೇರವಾಗಿ ನಿರ್ವಹಿಸುತ್ತದೆ. ಕೇಂದ್ರಗಳನ್ನು ಸಂಪೂರ್ಣವಾಗಿ ಒಳಗೊಂಡಿರುವ ಮತ್ತು ನಿವಾಸಿ ಸ್ನೇಹಿಯಾಗಿ ವಿನ್ಯಾಸಗೊಳಿಸಲಾಗಿದೆ, ವೀಲ್‌ಚೇರ್ ಪ್ರವೇಶ, ಪ್ರವೇಶಿಸಬಹುದಾದ ವಿಶ್ರಾಂತಿ ಕೊಠಡಿಗಳು ಮತ್ತು ಮೀಸಲಾದ ಕುಂದುಕೊರತೆ ಪರಿಹಾರ ಕಾರ್ಯವಿಧಾನದಂತಹ ಸೌಲಭ್ಯಗಳನ್ನು ಹೊಂದಿದೆ.

ಪ್ರತಿಯೊಂದು ಆಧಾರ್ ಸೇವಾ ಕೇಂದ್ರವನ್ನು ಎಎಸ್‌ಕೆ ವ್ಯವಸ್ಥಾಪಕರು ನಿರ್ವಹಿಸುತ್ತಾರೆ, ಅವರು ನಿವಾಸಿಗಳಿಂದ ಕುಂದುಕೊರತೆಗಳನ್ನು ಸ್ವೀಕರಿಸುತ್ತಾರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸುತ್ತಾರೆ ಮತ್ತು ಸಕಾಲಿಕ ಪರಿಹಾರವನ್ನು ಖಚಿತಪಡಿಸುತ್ತಾರೆ. ನಿವಾಸಿಗಳು ಆಧಾರ್ ಸೇವೆಗಳಿಗಾಗಿ ಯುಐ–ಡಿಎಐ ಆಧಾರ್ ನೇಮಕಾತಿ ಪೋರ್ಟಲ್‌ಗೆ ಭೇಟಿ ನೀಡುವ ಮೂಲಕ ಎಎಸ್‌ಕೆ ಗಳಲ್ಲಿ ಆನ್‌ಲೈನ್‌ನಲ್ಲಿ ಅಪಾಯಿಂಟ್‌ಮೆಂಟ್‌ಗಳನ್ನು ಬುಕ್ ಮಾಡಬಹುದು ಕಚೇರಿ ಮೂಲಗಳು ತಿಳಿಸಿವೆ.

ಈ ಕಾರ್ಯಕ್ರಮ ದಲ್ಲಿ ಯುಐಡಿಎಐ ನ ಕರ್ನಾಟಕದ ಸಹಾಯಕ ವ್ಯವಸ್ಥಾಪಕ ಮೊಹಮ್ಮದ್ ಮುಸಾಬ್, ಎಎಸ್‌ಕೆ ಸಿಬ್ಬಂದಿ ಮತ್ತು ಸೇವಾ ಪೂರೈಕೆದಾರ ಬಿಎಲ್ಎಸ್ ಇಂಟರ್‌ನ್ಯಾಷನಲ್ ಪ್ರತಿನಿಧಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಕೃಷಿ ವಿಶ್ವವಿದ್ಯಾನಿಲಯ 60ನೇ ಘಟಿಕೋತ್ಸವ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ 60ನೇ ಘಟಿಕೋತ್ಸವ ಸಮಾರಂಭವು ಮೇ 14 ರಂದು ಬೆಳಿಗ್ಗೆ 11:30 ಗಂಟೆಗೆ ಜಿಕೆವಿಕೆ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಕೃಷಿ ಸಚಿವರು ಹಾಗೂ ವಿಶ್ವವಿದ್ಯಾನಿಲಯದ ಸಹಕುಲಾಧಿಪತಿಗಳಾದ ಎನ್. ಚಲುವರಾಯಸ್ವಾಮಿ ಅವರು ಉಪಸ್ಥಿತರಿರುತ್ತಾರೆ. ಬೆಂಗಳೂರಿನ ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ. ಎಲ್. ಎಸ್. ಶಶಿಧರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ವಿಶ್ವವಿದ್ಯಾನಿಲಯದ ಕೃಷಿ ಮಾಹಿತಿ ಘಟಕದ ಮುಖ್ಯಸ್ಥರಾದ ಡಾ. ಕೆ.ಪಿ. ರಘುಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಗಲಕೋಟೆಯಲ್ಲಿ ಮೇ16 ರಿಂದ ಮಾವು ಮೇಳ–2026

**ಬಾಗಲಕೋಟೆ:** ನಗರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಮೇ 16, 17 ಮತ್ತು 18ರಂದು ಮೂರು ದಿನಗಳ ಕಾಲ "ಮಾವು ಮೇಳ – 2026"ನ್ನು ಆಯೋಜಿಸಿದೆ.

ಈ ಮೇಳವನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಬಾಗಲಕೋಟೆ, ಬೆಂಗಳೂರಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಹಾಗೂ ಡಾ. ಎಸ್. ಬಿ. ದಂಡಿನ ಶಿಕ್ಷಣ ಮತ್ತು ಸಂಶೋಧನೆ ಪ್ರತಿಷಾನದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಮಾವು ಮೇಳದಲ್ಲಿ ವಿವಿಧ ತಳಿಯ ಮಾವಿನ ಹಣ್ಣುಗಳ ಬೃಹತ್ ಪ್ರದರ್ಶನ ಇರಲಿದೆ. ಮಾವು ಬೆಳೆಯುವ ಸುಧಾರಿತ ತಾಂತ್ರಿಕತೆಗಳ ಕುರಿತು ರೈತರಿಗೆ ಮಾಹಿತಿ ನೀಡಲಾಗುವುದು. ತಜ್ಞರೊಂದಿಗೆ ಮಾವು ಬೆಳೆ ಮತ್ತು ಮಾರುಕಟ್ಟೆ ಕುರಿತು ಚರ್ಚಾಗೋಷ್ಠಿಗಳು ನಡೆಯಲಿವೆ. ಸಾರ್ವಜನಿಕರಿಗಾಗಿ ಮಾವಿನ ಹಣ್ಣುಗಳ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಮೇಳದಲ್ಲಿ ರೈತರು, ಉದ್ಯಮಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಮೇಳದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಬಾಗಲಕೋಟೆ ತೆ–ೂಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡೇಟಾ ಸೈನ್ಸ್ ಮತ್ತು ಕೃತಕ ಬುದ್ಧಿಮತ್ತೆ ತರಬೇತಿ ಕಾರ್ಯಾಗಾರ

**ಬೆಂಗಳೂರು:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ವಿಜ್ಞಾನ ಮತ್ತು ತಂತ್ರಜ್ಞಾನ ಆಸಕ್ತರಿಗಾಗಿ "ಸುಧಾರಿತ ದತ್ತಾಂಶ ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ" (Advanced Data Science, Artificial Intelligence & Machine Learning) ವಿಷಯದ ಕುರಿತು ಮೇ 18 ರಿಂದ 20ರ ವರೆಗೆ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸ ನೀಡಲಿದ್ದಾರೆ. ವಿಜ್ಞಾನ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು ಹಾಗೂ ವಿಜ್ಞಾನಾಸಕ್ತರು ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಅವಕಾಶವಿದೆ.

ಆಸಕ್ತರು ಮೇ 16 ರ ಒಳಗಾಗಿ ಗೂಗಲ್ ಫಾರ್ಮ್ https://forms.gle/Dyf9KfQ8ShnRLDHH6 ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಕಾರ್ಯಾಗಾರದ ಸಂಯೋಜಕರಾದ ವೈಜ್ಞಾನಿಕಾಧಿಕಾರಿ ಶ್ರೀನಿವಾಸು ವಿ.ಕೆ. ಅವರ ಮೊಬೈಲ್ ಸಂಖ್ಯೆ: 9620767819ನ್ನು ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ಅಧಿಕೃತ ವೆಬ್‌ಸೈಟ್ https://kstacademy.in ವೀಕ್ಷಿಸಬಹುದು ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಆನಂದ್ ಆರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾಜಿ ಸೈನಿಕರ ನೇಮಕಾತಿಗೆ ದೈಹಿಕ ಪರೀಕ್ಷೆ ಆರಂಭ

**ಬೆಂಗಳೂರು:** ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು 2026–27ನೇ ಸಾಲಿಗೆ ಒಟ್ಟು 550 ಮಾಜಿ ಸೈನಿಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಮುಂದಾಗಿದೆ. ಈ ಕುರಿತು ಪೊಲೀಸ್ ಮಹಾನಿರ್ದೇಶಕರು ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಅರ್ಹ ಅಭ್ಯರ್ಥಿಗಳಿಗೆ ದೈಹಿಕ ಪರೀಕ್ಷೆಗಳನ್ನು ಆಯೋಜಿಸಲಾಗಿದೆ.

ಕೆ.ಎಸ್.ಆರ್.ಪಿ 3ನೇ ಮತ್ತು 4ನೇ ಬೆಟಾಲಿಯನ್ ಮೈದಾನ, ಕೋರಮಂಗಲ ಪರೇಡ್ ಮೈದಾನ, ಮಡಿವಾಳ, ಬೆಂಗಳೂರು ಇಲ್ಲಿ ಮೇ 11 ರಿಂದ 16 ರವರೆಗೆ ಪ್ರತಿದಿನ ಬೆಳಿಗ್ಗೆ 06.30 ಗಂಟೆಗೆ ವರದಿ ಮಾಡಿಕೊಳ್ಳಬೇಕು.

ನೇಮಕಾತಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. 03 ಕಿ.ಮೀ ದೂರವನ್ನು 20 ನಿಮಿಷಗಳಲ್ಲಿ ಪೂರ್ಣಗೊಳಿಸಬೇಕು. ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸುವವರಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು 'ಶೇಪ್ ಒನ್' ದೈಹಿಕ ಸದೃಢತೆಯನ್ನು ಹೊಂದಿರಬೇಕು. ಯಾವುದೇ ಕ್ರಿಮಿನಲ್ ದಾಖಲೆಗಳನ್ನು ಹೊಂದಿರಬಾರದು.

ಹೆಚ್ಚಿನ ಮಾಹಿತಿಗಾಗಿ ಅಥವಾ ದೈಹಿಕ ಪರೀಕ್ಷೆಗಳ ಕುರಿತಾದ ಸಂದೇಹಗಳಿಗಾಗಿ ಅಭ್ಯರ್ಥಿಗಳು ಸಹಾಯವಾಣಿ ಸಂಖ್ಯೆ: 080–22262263, 7483498052 ಸಂಪರ್ಕಿಸಬಹುದು.

ಅರ್ಹ ಮಾಜಿ ಸೈನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಪೊಲೀಸ್ ಮಹಾನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಸೇವೆಯಲ್ಲಿ ರಾಜ್ಯ ಸರ್ಕಾರ ವಿಫಲ: ಆರೋಪ





• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ಪಟ್ಟಣದ ಆರೋಗ್ಯ ಸಮುದಾಯ ಕೇಂದ್ರದಲ್ಲಿ ಆರೋಗ್ಯ ಇಲಾಖೆ ಹಾಗೂ ಡಿಸಿ ಡಿಸಿ ಕಿಡ್ನಿ ಕೇರ್ ಸಹಯೋಗದಲ್ಲಿ ನೂತನ ಡಯಾಲಿಸಿಸ್ ಆರೈಕೆ ಕೇಂದ್ರ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರು ಉದ್ಘಾಟಿಸಿದರು.

ಉದ್ಘಾಟನೆಯ ಬಳಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಆರೋಗ್ಯ ವಿಚಾರಿಸಿದ ಶಾಸಕ ಶರಣಗೌಡ ಕಂದಕೂರು, ಆಸ್ಪತ್ರೆಯಲ್ಲಿನ ಮೂಲಭೂತ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ರೋಗಿಗಳಿಗೆ ಸಮರ್ಪಕ ಔಷಧಿ ವಿತರಣೆ ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ರಾಜ್ಯ ಸರ್ಕಾರ ಇನ್ನೂ ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಪ್ರದೇಶದಲ್ಲಿ ದಿನದಿಂದ ದಿನಕ್ಕೆ ಕ್ಯಾನ್ಸರ್ ಸೇರಿದಂತೆ ಗಂಭೀರ ಕಾಯಿಲೆಗಳ ಪ್ರಮಾಣ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಆಹಾರ ಪದಾರ್ಥಗಳ ಗುಣಮಟ್ಟ ಕುಸಿತ, ಪ್ಲಾಸ್ಟಿಕ್ ವಸ್ತುಗಳ ಅತಿಯಾದ ಬಳಕೆ ಹಾಗೂ ದಾಬಾ, ಜ್ಯೂಸ್ ಸೆಂಟರ್ ಮತ್ತು ಚಹಾ ಅಂಗಡಿಗಳಲ್ಲಿ ಸ್ವಚ್ಛತೆಯ ಕೊರತೆ ಇಂತಹ ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಈ ಕುರಿತು ತಹಸೀಲ್,ಮುಖ್ಯಾಧಿಕಾರಿ, ಆಹಾರ ಸುರಕ್ಷತಾ ಅಧಿಕಾರಿಗಳು ತಕ್ಷಣವೇ ಆಹಾರ ಗುಣಮಟ್ಟ ಸೇರಿದಂತೆ ಪ್ಲಾಸ್ಟಿಕ್, ಅನಧಿಕೃತ ದಾಬಾ, ಜೂಸ್ ಸೆಂಟರ್, ಪರಿಶೀಲನೆ ನಡೆಸಿ ಸಾರ್ವಜನಿಕರ ಆರೋಗ್ಯ ರಕ್ಷಣೆಗಾಗಿ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ಸೂಚಿಸಿದರು.

ಇದೇ ವೇಳೆ ಆಸ್ಪತ್ರೆಯ 30 ಬೆಡ್‌ಗಳ ಆಸ್ಪತ್ರೆಯನ್ನು 50 ಬೆಡ್‌ಗಳ ಮೇಲ್ದರ್ಜೆ ಆಸ್ಪತ್ರೆಗೆ ಪರಿವರ್ತಿಸುವ ಕಾಮಗಾರಿಯನ್ನು ಪರಿಶೀಲಿಸಿದ ಅವರು, ಅಗತ್ಯವಿದ್ದಲ್ಲಿ ಆಸ್ಪತ್ರೆಯನ್ನು 100 ಬೆಡ್‌ಗಳ ಮಟ್ಟಕ್ಕೆ ವಿಸ್ತರಿಸಲು ಬೇಕಾದ ಅನುದಾನ ಒದಗಿಸಲು ಸಿದ್ಧವಿದ್ದೇವೆ ಎಂದು ತಿಳಿಸಿದರು. ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ದೊರಕಬೇಕೆಂಬ ಉದ್ದೇಶದಿಂದ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಮುಖ್ಯಾಧಿಕಾರಿ ಶರಣಪ್ಪ ಎಂ., ತಾಲೂಕ ವೈದ್ಯಾಧಿಕಾರಿ ಡಾ. ಹನುಮಂತರೆಡ್ಡಿ, ವೈದ್ಯಾಧಿಕಾರಿ ಡಾ. ಮಹೇಶ್ ಸಜ್ಜನ್, ಡಾ. ನೀಲಂಬರಿ ಜಪಟ್ಟಿ, ಪಶು ವೈದ್ಯಾಧಿಕಾರಿ ಶಶಿಕಿರಣ ಹಜಾರೆ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಸೇವಾ ಕಾರ್ಯದಲ್ಲಿ ಶುಶ್ರೂಷಕಿಯರ ಸೇವೆ ಅನನ್ಯ

• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**



ಸೇವಾ ಕಾರ್ಯದಲ್ಲಿ ಶುಶ್ರೂಷಕಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಅವರಲ್ಲಿನ ಸೇವಾ ಮನೋಭಾವದಿಂದ ಇಂದು ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ ಎಂದು ನೀಲಗಂಗಾ ಎಜ್ಯುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ಡಾ.ಶಂಕರಗೌಡ ಹೇಳಿದರು.

ತಾಲೂಕಿನ ಯರಬಾಗದ ಆಯುರ್ ಗ್ರಾಮದಲ್ಲಿ ನೀಲಗಂಗಾ ಆಯುರ್ವೇದ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ವಿಶ್ವಶುಶ್ರೂಷಕಿಯರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ

ದೇಶದಲ್ಲಿ ಎಂಥ ಸಂದಿಗ್ಧ ಸಂದರ್ಭದಲ್ಲಿಯೂ ಕೂಡ ಶುಶ್ರೂಷಕಿಯರು ತಮ್ಮನ್ನು ತಾವು ಸಮರ್ಪಿಸಿಕೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಕೊರೊನಾದಂತಹ ವಾತಾವರಣದಲ್ಲಿ ಅವರು ಸಲ್ಲಿಸಿದ ಸೇವೆ ಎಂದಿಗೂ ಸ್ಮರಣೀಯ. ರೋಗಿಗಳ ಸೇವೆಯಲ್ಲಿ ಸಮರ್ಪಣಾ ಭಾವನೆಯಿಂದ ಸೇವೆ ಸಲ್ಲಿಸುವ ಮೂಲಕ ದಾದಿಯರು ಆರೋಗ್ಯ ಸೇವೆಯಲ್ಲಿದ್ದಾರೆ. ಈ ಮೂಲಕ ಇವರ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಅನೀತಾ ಮಹಾಜನ್, ಎಸ್.ಬಿ.ಐ ಲೈಫ್ ಇನ್ಸೂರೆನ್ಸ್‌ನ ಬಸವಕಲ್ಯಾಣ ಶಾಖೆಯ ವ್ಯವಸ್ಥಾಪಕ ಜಗದೇವಪ್ಪ ಬಿ. ಅಕ್ಕಿಗೌಡ, ಪ್ರೀತಿ ನಾಸೆ, ಶಿವರಾಜ್ ಮೂಲಗೆ, ಸಂಸ್ಥೆಯ ಸಿಇಓ ರುದ್ರಪ್ಪ ಕೆ,ಡಾ. ಶಿವಕಾಂತ, ಡಾ.ಕುನಾಲ್ ಚೌಧರಿ, ಡಾ.ಸಚಿನ್ ಅಗಡಿ, ಡಾ. ಮಂಜುಳಾ, ಚಂದ್ರಶೇಖರ ಮಡಿವಾಳರ ಸೇರಿದಂತೆ ಸಿಬ್ಬಂದಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಬಳ್ಳಾರಿ ನಗರ ಕ್ಷೇತ್ರದ ಶಾಸಕ ನಾರಾ ಭರತ್ ರೆಡ್ಡಿ ಮಂಗಳವಾರ ವಿವಿಧ ವಾರ್ಡುಗಳಲ್ಲಿ ಹಲವು ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಬಳ್ಳಾರಿ ನಗರದ ವಾರ್ಡ್ ಸಂಖ್ಯೆ 21ರ ಹರಿಪ್ರಿಯ ನಗರದಲ್ಲಿ 5 ಕೋಟಿ ರೂ.ಗಳ ಅನುದಾನದ ವೆಚ್ಚದಲ್ಲಿ ಬೀದಿ ದೀಪ, ಚರಂಡಿ, ಒಳ ಚರಂಡಿ, ಪೇವರ್ಸ್ ಅಳವಡಿಕೆ ಕಾಮಗಾರಿಗೆ ಇಂದು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಮಾಜಿ ಮೇಯರ್ ರಾಜೇಶ್ವರಿ, ಚಾನಾಳ್ ಶೇಖರ್, ಶಿವಶಂಕರಗೌಡ, ಯಾಳ್ಪಿ ಪಂಪನಗೌಡ, ತಿಮ್ಮನಗೌಡ, ನಾಗೇಶ್ವರ ರಾವ್, ರವಿ, ಶಶಿಧರ ಮೇಟಿ, ಗುತ್ತಿಗನೂರು ವಿರೂಪಾಕ್ಷಗೌಡ, ಅಂಗಡಿ ಪಂಪಾಪತಿ, ಮೇಟಿ ದಿವಾಕರಗೌಡ, ಶ್ಯಾಮ್, ಯುಧಿಷ್ಠಿರ, ವಾಸು ರೆಡ್ಡಿ ಮತ್ತಿತರರು ಹಾಜರಿದ್ದರು. ತದನಂತರ ಇದೇ ವಾರ್ಡಿನ ಸಿದ್ಧಾರ್ಥ ನಗರದಲ್ಲಿ 50 ಲಕ್ಷ ರೂ.ಗಳ ಅನುದಾನದ ವೆಚ್ಚದಲ್ಲಿ ಲಿಂಕ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಮಾಜಿ ಮೇಯರ್ ರಾಜೇಶ್ವರಿ, ಸಿರಿಗೆರೆ ಪನ್ನರಾಜ್, ಹಿರೇಮಠ್, ಪ್ರಭಾಕರ್ ರೆಡ್ಡಿ, ಚಾನಾಳ್ ಶೇಖರ್, ವಿಜಯಲಕ್ಷ್ಮೀ, ಹಗರಿ ಹೊನ್ನೂರಪ್ಪ, ಪರಶುರಾಮುಡು, ಹೊನ್ನಪ್ಪ, ವಾಸು ರೆಡ್ಡಿ ಮತ್ತಿತರರು ಹಾಜರಿದ್ದರು.

# ಭೂಮಿ ಉಳಿಸಿಕೊಡಲು ಜಿಲ್ಲಾಧಿಕಾರಿ ವಿ ಪಿ ಬಳಿಗಾರ್‌ರವರಿಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**



ತಾಲೂಕಿನ ನೆರಳಕುಪ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಚ್ಚುವಿನ ಹಳ್ಳಿ ಕಾಡಂಚಿನ ನೆರಳಕುಪ್ಪೆ ಬಿ ಹಾಡಿಯ ಹಿರಿಯರಾದ ಕೆಂಪಮ್ಮ ಮತ್ತು ಸೀತೆಯವರು ಉಪವಿಭಾಗಾಧಿಕಾರಿಯವರಿಗೆ ಹಾಗು ತಾಲೂಕು ಪರಿಶಿಷ್ಟಪಂಗಡದ ಕಲ್ಯಾಣಧಿಕಾರಿಯವರಿಗೆ ಮನವಿ ನೀಡಿ ತಮ್ಮ ತಂದೆ ಕಾಲದಿಂದಲೂ ಕಾಡಿಗೆ ಹೊಂದಿಕೊಂಡಂತಿರುವ ಕಂದಾಯ ಭೂಮಿಯಲ್ಲಿ ಕೃಷಿ ಮಾಡಿ 11ಎಕರೆ 05ಗುಂಟೆಯಲ್ಲಿ ಬೆಳೆ ಬೇಳೆದು ಜೀವನ ಮಾಡಿದ್ದೇವೆ.. 1987 ರಲ್ಲಿ ಚೆನ್ನೆ ಗೌಡನ ಮಗ ಸಂಜೀವ ಭೂಮಿ ತನ್ನದೆಂದು ತಕರಾರು ತೆಗೆದ. ಡೀಡ್ ಸಹಾಯ ಪಡೆದು ಅಂದಿನ ಜಿಲ್ಲಾಧಿಕಾರಿ ವಿ ಪಿ ಬಳಿಗಾರ್ ರವರಿಗೆ ಭೂಮಿ ಉಳಿಸಿಕೊಡಲು ಮನವಿ ಮಾಡಲಾಗಿ ತಿಳಿಸಿದರು

ನಂತರ ಮಾತನಾಡಿ ಸ್ಥಳಕ್ಕೆ ಬಂದು, ನೋಡಿ, ನಮ್ಮ ಆರು ಕುಟುಂಬಗಳ ಹೆಸರಿಗೆ ಕೈ ಬರಹದ ಫಸಲು ಪಹಣಿ ಬರೆಯಲು ಆದ್ದೇಶಿಸಿದ ಮೇರೆಗೆ ನಂತರದ ವರ್ಷಗಳಿಂದ ನಾವು ಮಾ ಡುತಿ–ದ್ದ ನೆರಳಕುಪ್ಪೆ ಸರ್ವೆ ನಂಬರ್ 24,25 ರಲ್ಲಿನ 11ಎಕರೆ 05ಗುಂಟೆ ಜಮೀನಿಗೆ ಪಹನಿಯಲ್ಲಿ ನಮ್ಮಹೆಸರು ಬಂತು. ನಂತರ ತಾಸೀಲ್ದಾರ್ ಕಂದಾಯ ಮಹಾಜರ್ ಮಾಡಿ ನಾವು ಸ್ವಾಧೀನ ದಲ್ಲಿದ್ದು, ಕೃಷಿ ಮಾಡುವುದನ್ನು ದಾಖಲಿಸಿಲಿಸಿ ಮಹಾಜರ್ ಪ್ರತಿನೀಡಿರುವರು. ಸಂಜೀವನ ತೊಂದರೆ ತಪ್ಪದ ಕಾರಣ ದಾಖಲೆ ಪರಿಶೀಲಿಸಾಲಾಗಿ ಮೊದಲು ಮಲ್ಲೆ ಗೌಡ ಮತ್ತು ಬೀರೆ ಗೌಡ ಸಾಗುವಳಿ ಮಾಡಿಸಿಕೊಂಡು, ಕೆಲವು ವರ್ಷಗಳ ನಂತರ ಕೊಡಗಿನ ಚೆನ್ನೆ ಗೌಡರಿಗೆ ಮಾರಿದ್ದರು. ಇವರು ಪೋತಿ ಆದಮೇಲೆ ಅವರ ಹೆಂಡತಿಗೆ ಖಾತೆ ವರ್ಗಾವಣೆ ಆಯಿತು ಎಂದು ದಾಖಲೆ ಗಳಿಂದ ತಿಳಿಯಿತು. ಈಗ ತಾಯಿ ಪೋತಿ ಆದಮೇಲೆ ಸಂಜೀವ ತನ್ನ ಹೆಸರಿಗೆ ಖಾತೆಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ನಾವು ತಕರಾರು ಅರ್ಜಿಸಲ್ಲಿಸಿದೆವು. ಆದರೂ ಅವರ ಹೆಸರಿಗೆ ಖಾತೆ ಕೂರಿಸಿರುವುದವು ದಾಖಲೆ ಗಳಿಂದ ತಿಳಿದುಬಂದಿದೆ. ಹಲವು ಬಾರಿ ಡಿ ಸಿ, ಎ ಸಿ ಯವರಿಗೆ ಮನವಿ ಮಾಡಿ ಸಂಜೀವನ ಹೆಸರಿಗಿರುವ ಕಂದಾಯ ದಾಖಲೆಗಳನ್ನು ಹಾಗು ಹಳೆ ಸಾಗುವಳಿ ಪತ್ರರದ್ದು ಗೊಳಿಸಿ ಭೂಮಿ ಅನುಭವ ದಾರರಾದ ನಮಗೆ ಹಕ್ಕು ಪತ್ರ ನೀಡಬೇಕೆಂದು ಮನವಿ ಕೂಡ ಸಲ್ಲಿಸಿದ್ದೇವೆ ಕ್ರಮವನ್ನು ಜರುಗಿಸದ ಕಾರಣ ಈಗ ಪುನಃ ಉನ್ನತ ಮಠ ಅಧಿಕಾರಿಗಳಿಗೆ ಪರಿಶಿಷ್ಟ ಪಂಗಡದ ಕಲ್ಯಾಣಧಿಕಾರಿಗಳಿಗೆ ಮನವಿ ಮಾಡಿ ಸ್ವಭಾವಿಕ ನ್ಯಾಯದ ಮನದಂಡ ಬಳಸಿ ಹಳೇ ಮಂಜೂರಾತಿ ರದ್ದು ಗೊಳಿಸಿ, ಭೂಮಿ ಅನುಭವ ದಲ್ಲಿರುವ ನಮಗೆ ಕೈಬರಹ ಆರ್. ಟಿ. ಸಿ ಹಾಗು ಕಂದಾಯ ಮಹಾಜರ್ ಆಧಾರದ ಮೇಲೆ ತಲೆಮಾರುಗಳಿಂದ ಅನುಭವಿಸಿರುವ ನಮಗೆ ಸಾಗುವಳಿ ನೀಡಬೇಕೆಂದು ಮನವಿ ಯನ್ನು ಎ ಯವರ ಪರವಾಗಿ ಅವರ ಉಪ ವಿಭಾಗ ಅಧಿಕಾರಿಕಛೇರಿ ತಾಸೀಲ್ದಾರ್ ಯದುಗಿರಿಷ್ ರವರಿಗೆ ಹಾಗು ಗಿರಿಜನ ಕಲ್ಯಾಣಾ ಧಿಕಾರಿ ಗಂಗಾಧರ್ ರವರಿಗೆ ಮನವಿ ಪತ್ರ ಸಲ್ಲಿಸಿದ್ದೇವೇ ಎಂದು ಸೀತೆ ಮಾಧ್ಯಮಗಳಿಗೆ ತಿಳಿಸಿದ್ದಾರೆ.

# ಬೀದಿ ನಾಯಿಗಳಿಗೆ ವಿಷ ಹಾಕುವ ದುಷ್ಟ ಬುದ್ಧಿ ಹೇಗೆ ಬಂತು..?



**ವರ್ತಮಾನ–ಮನನ**
● **ಮಧೂರ ತಿಳಗೂಳಕರ**
**ಜಿಲ್ಲಾ ವರದಿಗಾರರು**





ವಿಜಯಪುರ ನಗರದ ರಾಜಕುಮಾರ್ ಲೇಔಟ್‌ನಲ್ಲಿ ಬಾಲಕನ ಮೇಲೆ ನಡೆದ ನಾಯಿ ದಾಳಿಯ ಬೆನ್ನಲ್ಲೇ ಸಾರ್ವಜನಿಕರ ಆಕ್ರೋಶ ಹೊರ ಹಾಕಿದ್ದರು. ಪಾಲಿಕೆ ಅಧಿಕಾರಿ ಸಿಬ್ಬಂದಿಗಳು ನಾಯಿಗಳ ಸ್ಥಳಾಂತರ ಮಾಡಬೇಕು ಎಂದು ಒತ್ತಾಯ ಮಾಡಿದ್ದರು. ಇದರ ಬೆನ್ನಲ್ಲೇ ಕೆಲ ದುಷ್ಕರ್ಮಿಗಳು ಶಾಸ್ತ್ರಿ ನಗರದಲ್ಲಿ ಬೀದಿ ನಾಯಿಗಳಿಗೆ ಆಹಾರದಲ್ಲಿ ವಿಷ ಬೆರೆಸಿ ನೀಡಿದ್ದಾರೆ. ಈ ಅಮಾನವೀಯ ಕೃತ್ಯಕ್ಕೆ ಒಂದು ಮೂಕ ಪ್ರಾಣಿ ಬಲಿಯಾಗಿದ್ದು, ಪ್ರಾಣಿ ಪ್ರಿಯರ ಕೆಂಗಣ್ಣಿಗೆ ಗು–ರಿಯಾಗಿದೆ. ವಿಷ ಪ್ರಾಷದಿಂದ ಬಳಲಿದ ಎರಡು ಬೀದಿ ನಾಯಿಗಳಿಗೆ ಶ್ವಾನ ಪ್ರಿಯರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೂಡಾ ಕೊಡಿಸುತ್ತಿದ್ದಾರೆ. ಈ ಕುರಿತಾದ ಒಂದು ವರದಿ ಇಲ್ಲಿದೆ ಓದಿ.

ಒಂದೆಡೆ ಬೀದಿ ನಾಯಿಗಳ ಕಡಿತದ ಭಯ, ಇನ್ನೊಂದೆಡೆ ಮೂಕ ಪ್ರಾಣಿಗಳ ಮೇಲೆ ನಡೆಯುತ್ತಿರುವ ಕ್ರೌರ್ಯ. ಹೌದು ವಿಜಯಪುರ ನಗರದ ಶಾಸ್ತ್ರಿ ನಗರದಲ್ಲಿ ಮನುಷ್ಯತ್ವವೇ ನಾಚುವಂತಹ ಘಟನೆ ನಡೆದಿದೆ. ಕಳೆದ ಒಂದು ವಾರದ ಹಿಂದೆ ರಾಜಕುಮಾರ್ ಲೇಔಟ್‌ನಲ್ಲಿ ಬಾಲಕನೊಬ್ಬ ನಾಯಿ ಕಡಿತಕ್ಕೆ ಒಳಗಾಗಿದ್ದನ್ನು ವಿರೋಧಿಸಿ ಜನರು ಆಕ್ರೋಶ ಹೊರಹಾಕಿದ್ದರು. ಇದರ ಬೆನ್ನಲ್ಲೇ ಎಚ್ಚೆತ್ತ ಮಹಾನಗರ ಪಾಲಿಕೆ ಸಿಬ್ಬಂದಿಗಳು ನಾಯಿಗಳ ಸಂತಾನಶಕ್ತಿ ಹರಣ ಚಿಕಿತ್ಸೆ ಹಾಗೂ ಸ್ಥಳಾಂತರಕ್ಕೆ ಯೋಜನೆ ರೂಪಿಸಿತ್ತು. ಆದರೆ, ಈ ಪ್ರಕ್ರಿಯೆ ನಡೆಯುವ ಮುನ್ನವೇ ಕೆಲ ಕಿಡಿಗೇಡಿಗಳು ಮೂಕ ಪ್ರಾಣಿಗಳಿಗೆ ಆಹಾರದಲ್ಲಿ ವಿಷ ಬೆರೆಸಿ ಹಾಕಿದ್ದು ಇದು ಪ್ರಾಣಿ ಪ್ರೀಯರ ಆಕ್ರೋಶಕ್ಕೆ ಕಾರಣವಾಗಿದೆ. ಇನ್ನೂ ಶಾಸ್ತ್ರೀ ನಗರ ಬಡಾವಣೆಯಲ್ಲಿ ಯಾವುದೆ ನಾಯಿ ದಾಳಿ ಆಗದಿದ್ದರೂ ಇಲ್ಲಿ ಬೀದಿ ನಾಯಿಗಳಿಗೆ ವಿಷ ಹಾಕಿದ್ದು ನೋಡಿದ್ದರೆ ಎಲ್ಲೋ ಕಳ್ಳತನಕ್ಕೆ ಹೊಂಚು ಹಾಕಿದ್ದಾರಾ ಎಂಬ ಅನುಮಾನ ಬಡಾವಣೆಯ ನಿವಾಸಿಗಳದ್ದಾಗಿದೆ.

ನಗರದ ಶಾಸ್ತ್ರೀ ನಗರ ಬಡಾವಣೆಯಲ್ಲಿ ಒಟ್ಟು 6 ಬೀದಿ ನಾಯಿಗಳಿಗೆ ವಿಷ ಹಾಕಿದ್ದು ಒಂದು ಸ್ಥಳದಲ್ಲೇ ಸಾವನಪ್ಪಿದರೆ ಇನ್ನೆರಡಕ್ಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ, ಅವುಗಳ ಪರಿಸ್ಥಿತಿ ಸಹಿತ ಚಿಂತಾಜನಕವಾಗಿದೆ ಎಂಬುದ ವೈದರ ಮಾತು. ಇನ್ನೂ ರಾಜಕುಮಾರ ಲೇ ಔಟ್ ನಲ್ಲಿ ಮೇ.6 ರಂದು 3 ವರ್ಷದ ಬಾಲಕನ ಮೆಲೆ ಬೀದಿ ನಾಯಿ ದಾಳಿ ನಡೆದಿತ್ತು ಆದರೆ ಶಾಸ್ತ್ರಿನಗರ ಬಡಾವಣೆಯಲ್ಲಿ ಯಾವುದೇ ದಾಳಿ ಆಗದಿದ್ದರೂ ವಿಷ ಹಾಕಿ ಕೊಲ್ಲಲು ಮುಂದಾಗಿದ್ದಾರೆ ದುಷ್ಕರ್ಮಿಗಳು. ಇನ್ನೂ ಡರಡು ನಾಯಿಗಳು ಸಾವು ಬದುಕಿನ ಮದ್ಯೆ ಹೋರಾಡುತ್ತಿರುವ ಸಂದರ್ಭದಲ್ಲಿ ಪಾಲಿಕೆಯ ಪೌರ ಕಾರ್ಮಿಕರು ಅವುಗಳನ್ನು ಚೀಲದಲ್ಲಿ ತುಂಬಿ ತೆಗೆದುಕೊಂಡು ಹೋಗುತ್ತಿದ್ದರು, ಇದನ್ನು ಗಮನಿಸಿದ ಶ್ವಾನ ಪ್ರೀಯರು ಪಾಲಿಕೆ ಸಿಬ್ಬಂದಿಗಳ ವಿರುದ್ಧವೂ ಆಕ್ರೋಶ ಹೊರ ಹಾಕಿದ್ದಾರೆ.

ಒಟ್ಟಿನಲ್ಲಿ ವಿಜಯಪುರದಲ್ಲಿ ಬೀದಿ ನಾಯಿಗಳ ಸಮಸ್ಯೆ ಈಗ ಸಂಘರ್ಷಕ್ಕೆ ಕಾರಣವಾಗಿದೆ. ನಾಯಿಗಳ ಹಾವಳಿಯಿಂದ ಜನಸಾಮಾನ್ಯರು ಕಂಗಾಲಾಗಿದ್ದರೆ, ಇತ್ತ ಕಿಡಿಗೇಡಿಗಳ ಈ ವಿಷಪ್ರಾಶನ ಕೃತ್ಯ ಪ್ರಜ್ಞಾವಂತರ ಹಾಗೂ ಪ್ರಾಣಿ ಪ್ರಿಯರ ಮನ ಕಲಕಿದೆ. ಪಾಲಿಕೆ ಮತ್ತು ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ಬೀದಿ ನಾಯಿಗಳ ಸಮಸ್ಯೆಗೆ ವೈಜ್ಞಾನಿಕ ಪರಿಹಾರ ಕಂಡುಕೊಳ್ಳಬೇಕಿದೆ ಹಾಗೂ ಮೂಕ ಪ್ರಾಣಿಗಳ ಹತ್ಯೆ ಮಾಡಿದವರ ವಿರುದ್ಧ ಕ್ರಮ ಜರುಗಿಸಬೇಕಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)